ಗೌರಿ ಲಂಕೇಶರ


ಲಂಕೇಶ್

ಫೆಬ್ರವರಿ 14, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




ಒಂದು ವರ್ಷ

ಕೋ-ಜಾಗೆ ಮಜಾ ಜನತೆಗೆ ಸಜಾ



ಾಗಮಾರಪಲ್ಲಿ
ುಗನ ಪತ್ತೆ



ಕೊಂದವನು ಕಾಶಂಪೂರ್ ಭಂಟ!

ಹಿಂದೂ ಸಮಾಜೋತ್ಸವದಲ್ಲಿ
ಕೋಟ್ಯಂತರ ರೂ. ಗುಳುಂ

ಮುಸ್ಲಿಮರ ಸಮಾವೇಶಕ್ಕೆ
ಗೌಡ ತಕರಾರು!



8 ಕೋಟಿ ಮನೆ
3 ಕೋಟಿ ಸಿನಿಮಾ
ಲ್ಲಿಂದ ಬಂತು ದುಡ್ಡು?



ಹೆಗ್ಗಡೆ ಕಾಲೇಜಿನಲ್ಲಿ ನಂಗಾನಾಚ್

ಕಾವೇರಿ ಅಂತಿಮ ತೀರ್ಪು: ವಿವಾದವನ್ನು ಅಂತಿಮಗೊಳಿಸುವುದೇ?



ಈ ಸಂಚಿಕೆ ಮಾರುಕಟ್ಟೆಗೆ ಬರುವ ದಿವಸವೇ (ಫೆ.5) ಕಾವೇರಿ ವಿವಾದದ ಬಗ್ಗೆ ಸುಪ್ರೀಂಕೋರ್ಟ್ ಅಂತಿಮ ತೀರ್ಪು ನೀಡಲಿದೆ. ತೀರ್ಪು ಏನೇ ಬಂದರೂ ಶಾಂತಿ ಕಾಪಾಡಿಕೊಂಡು ಬರಬೇಕೆಂದು "ಕಾವೇರಿ ಕುಟುಂಬ" ಮಂಡ್ಯದಲ್ಲಿ ಸಭೆ ಸೇರಿ ತೀರ್ಮಾನ ಮಾಡಿದೆ. ಇದು ಒಂದು ಒಳ್ಳೆಯ ಬೆಳವಣಿಗೆಯೇ ಆದರೂ ಅಸಲು ಸಮಸ್ಯೆ ಈ "ಕುಟುಂಬ"ದಲ್ಲಿ ಎಷ್ಟು ಸದಸ್ಯರಿದ್ದಾರೆ ಎಂಬುದು...."

ಕಾವೇರಿ ವಿವಾದ ಭಾವನಾತ್ಮಕವಾಗಿ ಪ್ರಕಟಗೊಂಡರೂ ಆಳದಲ್ಲಿ ಅದು ಎರಡೂ ರಾಜ್ಯಗಳ ರೈತರ ಭೌತಿಕ ಬದುಕಿನ ಪ್ರಶ್ನೆಗಳನ್ನು ಒಳಗೊಂಡಿದೆ. ಆದ್ದರಿಂದಲೇ ಅದು ಭಾವನಾತ್ಮಕವಾಗಿ, ಹಿಂಸಾತ್ಮಕವಾಗಿ ಪ್ರಕಟಗೊಳ್ಳುತ್ತದೆ. ರೈತರು ಮಾತ್ರ ಪ್ರಕಟಿಸುವ ಪ್ರತಿರೋಧದ ಹಿಂಸೆಯಲ್ಲಿ ದಾಳಿಗೆ ಒಳಪಟ್ಟದ್ದು ತಮಗೆ ಉದ್ದಕ್ಕೂ ದ್ರೋಹ ಬಗೆಯುತ್ತಾ ಬಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೇ ಆಗಿರುತ್ತಿದ್ದವು. ಯಾವಾಗ ಅದರಲ್ಲಿ ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಒಳತೂರಿದವೋ ಆಗ ಹೋರಾಟ ದಿಕ್ಕುತಪ್ಪಿತು. 1990ರಲ್ಲಿ ಕಾವೇರಿ ವಿವಾದದಲ್ಲಿ ಆದದ್ದೂ ಇದೆ. ನಾಳೆ ಈ ರೀತಿ ಆಗದಂತೆ ನೋಡಿಕೊಳ್ಳುವ ಎಚ್ಚರ ಇರಬೇಕಾದದ್ದು ಕೇವಲ ರೈತರಿಗೆ ಮಾತ್ರವಲ್ಲ... ಆ ಜವಾಬ್ದಾರಿ ಈ ನಾಡಿನ ಎಲ್ಲಾ ಜವಾಬ್ದಾರಿಯುತ ನಾಗರಿಕರದ್ದು.



ಏಕೆಂದರೆ ಹೇಗೆ ನೋಡಿದರೂ ತೀರ್ಪು ಎರಡೂ ರಾಜ್ಯದ ರೈತರಿಗೆ ಸಮಾಧಾನಪಡಿಸಲು ಸಾಧ್ಯವಿಲ್ಲ. ಏಕೆಂದರೆ ಹಿಂದೆ ಆದ ಅನ್ಯಾಯದ ಮುಂದುವರಿಕೆಗೆ ಬಲಿಯಾದ ಕರ್ನಾಟಕದ ಒಂದೆಡೆ ಇದ್ದರೆ ಅದರ ಕಪ್ಪ ವರ್ತಮಾನದಲ್ಲಿ ತೀರಿಸಬೇಕೆಂದರೆ ವರ್ತಮಾನದ ಬದುಕು ಕಷ್ಟವಾಗುವ ಸಂಕಟ ತಮಿಳುನಾಡಿನದ್ದು. ಎಲ್ಲಕ್ಕಿಂತಲೂ ಹೆಚ್ಚಾಗಿ ನೀರು, ಖನಿಜ ಇತ್ಯಾದಿ ಕುಸಿಯುತ್ತಿರುವ ಸಂಪನ್ಮೂಲವನ್ನು ಯಾವ ಜನರಿಗೂ ಅನ್ಯಾಯವಾಗದಂತೆ ಮರುಹಂಚಿಕೆ ಮಾಡಬಲ್ಲ ನ್ಯಾಯದೃಷ್ಟಿಯಾಗಲೀ, ನ್ಯಾಯ ದಕ್ಷತೆಯಾಗಲೀ ಸರ್ಕಾರಕ್ಕಿಲ್ಲದಿರುವುದು ಮತ್ತು ಆಳುವ ಸರ್ಕಾರಗಳ ಈ ನ್ಯಾಯಭ್ರಷ್ಟತೆ ಜನರಿಗೆ ತಿಳಿದು ಅವರಿಗೆ ಈ ಸರ್ಕಾರಗಳ ಬಗ್ಗೆ ಯಾವುದೇ ವಿಶ್ವಾಸ ಇಲ್ಲದಿರುವುದು ಸಹ ಕಾವೇರಿಯಂತಹ ವಿವಾದದಲ್ಲಿ ಪ್ರಕ್ಷುಬ್ಧತೆಯನ್ನು ಹೆಚ್ಚಿಸುತ್ತದೆ.

ಇದರ ಆಳದಲ್ಲಿ ನೀರನ್ನು ಸಹ ದುರ್ಬಲ ಸಂಪನ್ಮೂಲವಾಗಿ ಮಾಡಿಬಿಡುತ್ತಿರುವ ಅವೈಜ್ಞಾನಿಕ ಕೃಷಿ ಪದ್ಧತಿ ಇದೆ. ಅದಕ್ಕೆ ಕುಮ್ಮಕ್ಕು ಕೊಡುವುದು ಈ ನಾಡಿನ ಕೃಷಿಯನ್ನೇ ತಮ್ಮ ಅಗತ್ಯಕ್ಕೆ ತಕ್ಕಂತೆ ಪುನರ್ರಚನೆ ಮಾಡುತ್ತಿರುವ ಕೃಷಿ ಬಹುರಾಷ್ಟ್ರೀಯ ಕಂಪನಿಗಳು. ತೀರ್ಪು ಯಾವ ರಾಜ್ಯದ ಪರವಾಗಿಯೇ ಬಂದರೂ ಅದರ ಅಂತಿಮ ಲಾಭ ಮಾತ್ರ ಈ ಕಂಪನಿಗಳಿಗೆ. ಅದನ್ನು ಅರಿಯದೇ ಕಾವೇರಿಯ ಮಕ್ಕಳು ಪರಸ್ಪರ ಕುಸ್ತಿಯ ಕಣಕ್ಕೆ ಇಳಿಯಬಾರದು.

ಚಾರ್ವಾಕ

- ಶಿವಸುಂದರ್-

ಮಲೆನಾಡಿನಲ್ಲೊಂದು ರಣವೀರ ಸೇನೆ?




ಬಿಹಾರದ ಭೂಮಾಲೀಕರು ತಮ್ಮ ಶೋಷಣೆ-ಅಧಿಕಾರ ಹಾಗೂ ಆಸ್ತಿಯನ್ನು ಉಳಿಸಿಕೊಳ್ಳಲು, ತಮ್ಮ ವಿರುದ್ಧ ಜಾಗೃತರಾಗುತ್ತಿದ್ದ ರೈತ-ಕೂಲಿಗಳನ್ನು ಸದೆಬಡಿಯಲು 90ರ ದಶಕದಲ್ಲಿ ತಮ್ಮದೇ ಆದ ಖಾಸಗಿ ಪಡೆ ರಣವೀರ ಸೇನೆಯನ್ನು ರಚಿಸಿಕೊಂಡಿದ್ದು ಭಾರತದ ಪ್ರಜಾತಂತ್ರದ ರಕ್ತಸಿಕ್ತ ಇತಿಹಾಸ ಬಲ್ಲ ಎಲ್ಲರಿಗೂ ಗೊತ್ತು. ಈ ರಣವೀರ ಸೇನೆಗೆ ಭಾಜಪ, RJD, ಕಾಂಗ್ರೆಸ್‌ನಂತಹ ಎಲ್ಲಾ ಪಕ್ಷಗಳು ಕೃಪಾಶೀರ್ವಾದ ನೀರು, ನೆರಳು ಕೊಟ್ಟು ಬೆಳೆಸಿದ್ದವು. ರಣವೀರ ಸೇನೆಯ ದೌರ್ಜನ್ಯ, ಅದರ ಮೂಲಕ ರೈತರ ಶೋಷಣೆ ತೀವ್ರವಾಗುತ್ತಿದ್ದಂತೆ ರೈತ ಕೂಲಿಗಳು ಕೆಂಪು ಸೇನೆಯನ್ನು ರಚಿಸಿಕೊಂಡು ರಣವೀರ ಸೇನೆಯ ವಿರುದ್ಧ ಸಾಮೂಹಿಕವಾಗಿ ಮತ್ತು ಸೈನಿಕವಾಗಿ ಪ್ರತಿಭಟಿಸಿ ಅದರ ಹುಟ್ಟಡಗಿಸಿದರು. ಈಗ ರಣವೀರಸೇನೆಯ ಹೆಸರು ಹೇಳಲೂ ಬಿಹಾರದಲ್ಲಿ ಯಾರೂ ಇಲ್ಲ.

ಈಗ ಅದೇರೀತಿ ಮಲೆನಾಡಿನ ಬಡ ರೈತಾಪಿ ಮತ್ತು ಕೂಲಿಗಳು ಒಂದಾಗಿ ಈವರೆಗೆ ತಮ್ಮ ಮೇಲೆ ಭೂಮಾಲೀಕರು ನಡೆಸುತ್ತಿದ್ದ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಲು ಪ್ರಾರಂಭಿಸಿದ್ದಾರೆ. ಈವರೆಗೆ ಈ ದನಿಯನ್ನು ಪೊಲೀಸರು ಹತ್ತಿಕ್ಕಲು ಯತ್ನಿಸುತ್ತಿದ್ದರು. ಈಗ ಅವರೊಡನೆ ಹೊಸದಾಗಿ ಗ್ರಾಮೀಣ ಜಾಗೃತಿ ಸೇನೆ ಎಂಬ ಮಲೆನಾಡಿನ ಭೂಮಾಲೀಕರ ಪಡೆಯೊಂದು ಸೇರಿಕೊಳ್ಳುತ್ತಿದೆ. ತಾವು ಹೇಳಿದಂತೆ ವಿಧೇಯರಾಗಿ ದುಡಿಯುತ್ತಾ, ಗುಲಾಮರಂತೆ ಬದುಕುತ್ತಿದ್ದ ರೈತ ಕೂಲಿಗಳಿಗೆ ತಲೆಕೆಡಿಸಿ ತಮ್ಮ ವಿರುದ್ಧ ಹೋರಾಟಕ್ಕೆ ಛೂಬಿಡುತ್ತಿರುವ ನಕ್ಸಲರ ವಿರುದ್ಧವೇ ತಮ್ಮ ಹೋರಾಟವೆಂದು ಈ ಸೇನೆ ಘೋಷಿಸಿದೆ.

ವಾಸ್ತವವಾಗಿ ಮಲೆನಾಡಿನ ಶ್ರೀಮಂತ ರೈತಾಪಿಗೂ, ರೈತ ಕೂಲಿಗಳಿಗೂ ಸಮಾನವಾಗಿ ಮಾರುಕಟ್ಟೆ ಶಕ್ತಿಗಳು ದೊಡ್ಡ ಶತ್ರುಗಳಾಗಿವೆ. ಟಾಟಾ-ಬಿರ್ಲಾಗಳು, ರಿಲೆಯನ್ಸ್-ಮೊನ್ಸಾಂಟೊದಂತಹ ಕಂಪನಿಗಳು ಮಲೆನಾಡಿನ ಕಾಫಿ, ಅಡಿಕೆ ಮಾರುಕಟ್ಟೆಯತ್ತ ಪ್ರತ್ಯಕ್ಷ-ಪರೋಕ್ಷವಾಗಿ ನಿಯಂತ್ರಿಸುತ್ತಿವೆ. ರೈತರಿಗೆ ಸರ್ಕಾರದಿಂದ ಸಿಗಬೇಕಾದ ಹಣವನ್ನು ತಾವೇ ರಿಯಾಯಿತಿ-ವಿನಾಯಿತಿ ಹೆಸರಲ್ಲಿ ದೋಚುತ್ತಿವೆ. ಆದ್ದರಿಂದಲೇ ಮಲೆನಾಡಿನ ಶ್ರೀಮಂತ ರೈತಾಪಿ ಆದಾಯ ಕಡಿಮೆ ಆಗುತ್ತಿದೆ, ರೈತಕೂಲಿಗೂ ಕೂಲಿ ಇಲ್ಲದಂತಾಗಿದೆ. ಆದರೆ ಈಗ ಸೇನೆಯ ಹೆಸರಲ್ಲಿ ರೈತ ಕೂಲಿಗಳ ಮೇಲೆ ಬಂದೂಕು ತೋರಿಸಿದರೆ ಬಿಕ್ಕಟ್ಟು ಬಗೆಹರಿಯುವುದಿಲ್ಲ.

ಸೇನೆ ಬೇಕು ರೈತ ಕೂಲಿಗಳನ್ನು, ಅವರ ಪರವಾಗಿರುವ ನಕ್ಸಲೈಟರನ್ನು ಕೊಲ್ಲಲಲ್ಲ, ಅದರ ಜೊತೆಗೂಡಿ ಮಲೆನಾಡನ್ನು ಸುಲಿಯುತ್ತಿರುವ ಟಾಟಾ-ಬಿರ್ಲಾಗಳನ್ನು, ಮೊನ್ಸಾಂಟೋ-ಪೆಪ್ಸಿಗಳನ್ನು, ಅವರ ಪರವಾಗಿರುವ ಪ್ರಭುತ್ವವನ್ನು ಒದ್ದೋಡಿಸಲು ಸೇನೆ ಬೇಕು.

ಸಾಲಮನ್ನಾ: ರೈತರ ಮುಗ್ಧತೆಯ ಕ್ರೂರ ಕುಚೋದ್ಯ!



ಕಳೆದ ಒಂದು ತಿಂಗಳಿಂದ ರೈತರ ಸಾಲಮನ್ನಾ ಮಾಡುವ ಬಗ್ಗೆ ಮಣ್ಣಿನ ಮೊಮ್ಮಗ ಕುಮಾರಸ್ವಾಮಿ ಸತತವಾಗಿ ಹೇಳಿಕೆಗಳ ಮಳೆಯನ್ನೇ ಸುರಿಸುತ್ತಿದ್ದಾರೆ. ರೈತರ ಆತ್ಮಹತ್ಯೆಯನ್ನು ತಡೆಯಲು ತಾವು ಎಂತಹ ತ್ಯಾಗಕ್ಕೂ ರೆಡಿ ಎಂದು ದೆಹಲಿಯಲ್ಲಿ ದೇವೇಗೌಡರು ತಮ್ಮ ತಮಟೆಯನ್ನು ತಾವೇ ಬಾರಿಸಿಕೊಳ್ಳುತ್ತಲೇ ಇದ್ದಾರೆ. ಆದರೆ ರೈತರ ಬಗ್ಗೆ ಇವರು ತೋರುತ್ತಿರುವ ಪ್ರೇಮದ ಭರದಲ್ಲಿ ಬಹಳ ಗಂಭೀರವಾಗಿ ಕೇಳಲೇಬೇಕಾದ ಒಂದ ಪ್ರಶ್ನೆ ಕಳೆದು ಹೋಗುತ್ತಿದೆ. ಅದು ರೈತರ ಸಾಲಮನ್ನಾ ಮಾಡಲು ನಿಜಕ್ಕೂ ಹಣ ಎಲ್ಲಿಂದ ಬರುತ್ತದೆ ಎಂಬುದು?

ಮೊದಲು ಶ್ರೀಮಾನ್ ಮುಖ್ಯಮಂತ್ರಿಗಳು ತಮ್ಮ ಸರ್ಕಾರ ಕೇವಲ ರೈತರ ಸಹಕಾರಿ ಸಾಲವನ್ನು ಮಾತ್ರವಲ್ಲ, ಕಮರ್ಷಿಯಲ್ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಮನ್ನಾ ಮಾಡುತ್ತದೆ ಎಂದು ಘೋಷಿಸಿದರು. ಅದಕ್ಕೆ ಒಟ್ಟಾರೆ 17000 ಕೋಟಿ ರೂ.ಬೇಕು. ಆ ಹಣವನ್ನು ಬೆಂಗಳೂರಿನಲ್ಲಿ ಅತಿಕ್ರಮವಾಗಿ ಒತ್ತುವರಿಯಾಗಿರುವ 23,000 ಎಕರೆ ಭೂಮಿಯನ್ನು ಹರಾಜು ಮಾಡಿ ಹಣ ಕ್ರೂಢೀಕರಿಸುವುದಾಗಿ ಹೇಳಿದರು. ಆದರೆ ಒಂದು ವಾರದ ಒಳಗೆ ಅತಿಕ್ರಮ ಭೂಮಿಯ ಹರಾಜಿನ ಬಗ್ಗೆ ಹೆಚ್ಚು ಮಾತಾಡುವುದನ್ನು ಬಿಟ್ಟರು. ಏಕೆಂದರೆ ಈ ಅತಿಕ್ರಮಗೊಂಡ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳಬೇಕೆಂದರೆ ಸಾಗಬೇಕಾದ ಕಾನೂನು ಹಾದಿ ಅಂತಿಮಗೊಳ್ಳುವ ಹೊತ್ತಿಗೆ ಹಾಲಿ ರೈತರ ಮಕ್ಕಳು, ಮೊಮ್ಮಕ್ಕಳು ಆತ್ಮಹತ್ಯೆಯ ದಾರಿ ಹಿಡಿದಿರುತ್ತಾರೆ.

ಆ ನಂತರ ಕಮರ್ಷಿಯಲ್ ಸಾಲ ಸಾಧ್ಯವಿಲ್ಲ, ಬೆಳೆ ಸಾಲಮನ್ನಾ ಎಂದರು. ಅದು ಸಹ 4700 ಕೋಟಿ ಆಗುತ್ತದೆ. ಅದಕ್ಕೂ ಬೆಂಗಳೂರಿನ ಅತಿಕ್ರಮ ಜಮೀನು ಮಾರುತ್ತೇವೆ ಎಂದರು. ಹಣಕಾಸು ಇಲಾಖೆ ಅದು ಅಷ್ಟು ಸುಲಭ ಸಾಧ್ಯವಿಲ್ಲ ಎಂದು ಹೇಳಿದ ಮೇಲೆ ಈಗ ಬಜೆಟ್ ಇನ್ನೇನು ಹತ್ತಿರ ಬಂದೇ ಬಿಟ್ಟಿತು ಎನ್ನುವ ವೇಳೆಗೆ "ಸಹಕಾರಿ ಸಾಲದ ಬಗ್ಗೆ ಮಾತ್ರ ರದ್ದತಿಯ ಚಿಂತನೆ ನಡೆದಿದೆ" ಎನ್ನುತ್ತಿದ್ದಾರೆ ಇಬ್ಬರೂ ಕೋರಸ್ಸಿನಲ್ಲಿ. ಅದಕ್ಕೆ ಹಣ ಎಲ್ಲಿಂದ? ಹಣಕಾಸು ಮಂತ್ರಿ ಯಡಿಯೂರಪ್ಪ ಸ್ಪಷ್ಟವಾಗಿ ಹೇಳಿದ್ದಾರೆ. "ಅದಕ್ಕೆ ಬೇಕಿರುವ ಸಂಪನ್ಮೂಲವನ್ನು ಜನರ ಮೇಲೆ ತೆರಿಗೆ ಹಾಕಿಯೇ ಕ್ರೂಢೀಕರಿಸುತ್ತೇವೆ." ಅಂದರೆ ಅಟ್ಟದಿಂದ ಬಿದ್ದವನನ್ನು ದಡಿ ತೆಗೆದುಕೊಂಡು ಚಚ್ಚಿದ ಹಾಗೆ! ಹಾಗಾದರೆ ನಿಜಕ್ಕೂ ರೈತರ ಸಾಲಮನ್ನಾ ಸಾಧ್ಯವೇ ಇಲ್ಲವೆ? ಜನರ ಮೇಲೆ ತೆರಿಗೆ ಹಾಕದೆ ಅದಕ್ಕೆ ಬೇಕಿರುವ ಹಣವನ್ನು ಕ್ರೂಢೀಕರಿಸಲು ಸಾಧ್ಯವಿಲ್ಲವೆ? ಖಂಡಿತಾ ಸಾಧ್ಯವಿಲ್ಲ, ಸರ್ಕಾರ IT-BTಗಳಿಗೆ ಕೊಡುತ್ತಿರುವ, SEZಗಳಿಗೆ ಕೊಡುತ್ತಿರುವ ತೆರಿಗೆ ರಿಯಾಯಿತಿ 1,75,000 ಕೋಟಿ. ಅದರ ಶೇ 10ರಷ್ಟೆಂದರೆ 17,500 ಕೋಟಿ. ರೈತರ ಸಾಲ 17000 ಕೋಟಿ ಮಾತ್ರ... ಅಂದರೆ ಹಣವಿದೆ. ಸರ್ಕಾರಕ್ಕೆ ನೀತಿಯಿಲ್ಲ ಎಂದರ್ಥ!

ಕೊನೆ ಮಾತು

ಶ್ರೀಮಂತರ ಆಸ್ತಿ ಜಾಸ್ತಿ ಆಗಿದೆ... ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆ ಅಷ್ಟೇ ಇದೆ.

ಮೊನ್ನೆ ಎಡಪಕ್ಷಗಳ ಒಂದು ಪ್ರಕಟಣೆ ಈ ಕೆಳಗಿನ ನಿಜವನ್ನು ಹೊರತಂದಿದೆ. 2005-2006ರಲ್ಲಿ ಭಾರತದ ಕೋಟ್ಯಾಧೀಶರ ಆಸ್ತಿ-ಪಾಸ್ತಿ 32000 ಕೋಟಿ ಹೆಚ್ಚುವರಿಯಾಗಿದೆ. ಆದರೆ ಸರ್ಕಾರದ ಆಸ್ತಿ ತೆರಿಗೆ ಸಂಗ್ರಹ ಮಾತ್ರ 2004ರಲ್ಲಿ ಎಷ್ಟಿತ್ತೋ ಅಂದರೆ 265 ಕೋಟಿ ರೂ. ಅಷ್ಟೇ ಇದೆ.

ಆದರೆ ರೈತಾಪಿ-ಕಾರ್ಮಿಕರ ಆದಾಯ ಕಡಿಮೆ ಆದರೂ ಅವರು ಸರ್ಕಾರಕ್ಕೆ ಕೊಡುತ್ತಿರುವ ತೆರಿಗೆ ಜಾಸ್ತಿಯಾಗಿದೆ. ಇಂತಹ ಪ್ರಜಾಸತ್ತೆಯನ್ನು ಏನೆಂದು ಕರೆಯಬೇಕು?

No Comments

"ನಾನು ಯಾರ ಅಪ್ಪಣೆಯನ್ನು ಪಡೆದು ಯೋಜನೆಗಳನ್ನು ಪ್ರಕಟಿಸಬೇಕಿಲ್ಲ, ನಾನು ಮುಖ್ಯಮಂತ್ರಿ, ನನಗೆ ವಿಶೇಷ ಅಧಿಕಾರಗಳಿವೆ."

-ಎಚ್.ಡಿ.ಕುಮಾರಸ್ವಾಮಿ

"ನಾನು ನನ್ನ ಕೆಲಸ ಮಾಡಿದ್ದೇನೆ. ಇನ್ನು ಶಾಸಕರು ಬದ್ಧತೆ ತೋರದ ಹೊರತು ಹಿಂದುಳಿದ ಪ್ರದೇಶಗಳು ಎಂದಿಗೂ ಅಭಿವೃದ್ಧಿ ಹೊಂದುವುದಿಲ್ಲ"

-ಎಂ.ಡಿ. ನಂಜುಂಡಪ್ಪ (ಕೆಲ ವರ್ಷಗಳ ಹಿಂದೆ)

"ನಾನು ಆಕಸ್ಮಿಕವಾಗಿ ಉಪಮುಖ್ಯಮಂತ್ರಿಯಾದವನು"

-ಎಂ.ಪಿ.ಪ್ರಕಾಶ್



"ಶಿಲ್ಪಾಗೆ ಟೀಕೆಯ ಬಿಸಿ ದಾಳರಂತಾಗಿದ್ದಲ್ಲಿ ಬಿಗ್ ಬ್ರದರ್ ಶೋ ಇಂದ ಹೊರಬರಬೇಕಿತ್ತು"

-ಸಲ್ಮಾನ್ ರಶ್ದಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಬಿಜೆಪಿಗೆ ಜೆಡಿ(ಎಸ್) ಬ್ಲಾಕ್‌ಮೇಲೂ ಮಾಡುತ್ತಿಲ್ಲ, ವೈಟ್‌ಮೇಲೂ ಮಾಡುತ್ತಿಲ್ಲ."

-ಎಚ್.ಡಿ.ಕುಮಾರಸ್ವಾಮಿ



"ರಾಜ್ಯವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಲು ಎಲ್ಲಾ ಪ್ರಯತ್ನ ಮಾಡುತ್ತೇನೆ"

-ಮಹಿಮಾ ಪಟೇಲ್

"ತದಡಿ ಬೇಡ ಅಂದ್ರೆ ಅಭಿವೃದ್ಧಿ ಬೇಡ ಅಂತ."

-ಎಚ್.ಡಿ.ಕುಮಾರಸ್ವಾಮಿ

"ರೈತರ ಹಿತಕ್ಕಾಗಿ ನಾನು ಬಿಡದಿ ಟೌನ್‌ಶಿಪ್ಪನ್ನು ತ್ಯಾ... ಮಾಡಲು ಸಿದ್ಧನಿದ್ದೇನೆ"

-ಎಚ್.ಡಿ.ಕುಮಾರಸ್ವಾಮಿ

ವಾರದ ಹತಾಶೆ

"ಜೆಡಿಎಸ್‌ನ ಸಚಿವರು ಬಜೆಟ್‌ಗೆ ಮುನ್ನ ಯಾವುದೇ ಹೊಸ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಪ್ರಕಟಿಸಬಾರದು. ಅವರು ಅದೇ ಪ್ರವೃತ್ತಿಯನ್ನು ಮುಂದುವರೆಸಿದರೆ ನಾನು ಹಣಕಾಸು ಸಚಿವನಾಗಿ ಕೆಲಸ ಮಾಡಲಾಗುವುದಿಲ್ಲ."

-ಬಿ.ಎಸ್. ಯಡಿಯೂರಪ್ಪ

ವಾರದ ಕನ್ನಡಿ

"ಹಿಂದೂ ಸಮಾಜೋತ್ಸವದಲ್ಲಿ ಬ್ರಾಹ್ಮಣ ಸ್ವಾಮೀಜಿಗಳಿಗೆ ದೊರೆತ ಮನ್ನಣೆ ಶೂದ್ರ ಸ್ವಾಮೀಜಿಗಳಿಗೆ ದೊರೆತಿಲ್ಲ. ಆಮಂತ್ರಣ ಪತ್ರಿಕೆಯಲ್ಲಿ ಹೆಸರಿಲ್ಲದ ಬ್ರಾಹ್ಮಣ ಸ್ವಾಮೀಜಿಗಳಿಗೆ ವಿಮಾನದ ವೆಚ್ಚ ನೀಡಿ ಸಮಾವೇಶಕ್ಕೆ ಆಮಂತ್ರಿಸಲಾಗಿದೆ. ಆದರೆ ನನ್ನಂತೆಯೇ ಆ ಸಮಾವೇಶದಲ್ಲಿ ಭಾಗವಹಿಸಿದ್ದ 11 ಶೂದ್ರ ಸ್ವಾಮೀಜಿಗಳಿಗೆ ಮಾತನಾಡಲೂ ಅವಕಾಶ ಸಿಗಲಿಲ್ಲ. ಹೀಗೆ ಹೇಳಿದ್ದಕ್ಕೆ ನನಗೆ ಈಗ ಕೊಲೆ ಬೆದರಿಕೆ ಹಾಕಲಾಗುತ್ತಿದೆ.

-ಮಂಗಳೂರು ಹಿಂದೂ ಸಮಾಜೋತ್ಸವದಲ್ಲಿ ಭಾಗವಹಿಸಿದ್ದ ಕೊಲ್ಲ... ರಮಾನಂದ ಸ್ವಾಮೀಜಿ

ವಾರದ ಸತ್ಯ

"ಆರಂಭದಲ್ಲಿ ರೈತರ ಎಲ್ಲಾ ಸಾಲಮನ್ನಾ ಅಂದಿರಿ, ನಂತರ ಸಹಕಾರಿ ಬ್ಯಾಂಕ್‌ಗಳ ಸಾಲ ಮಾತ್ರ ಎಂದಿರಿ, ಮತ್ತೆ ಬೆಳೆ ಸಾಲಮನ್ನಾ ಎಂದು ಹೇಳಿ ಈಗ ಸಾಲಮನ್ನಾ ಮಾಡುವ ಬಗ್ಗೆ ಪರಿಶೀಲಿಸುತ್ತೇವೆ ಎನ್ನುತ್ತಿದ್ದೀರಿ"

-ಧರ್ಮಸಿಂಗ್

ವಾರದ ಬೇಜವಾಬ್ದಾರಿ

"...ಮೇಲಿನ ಪ್ರಶ್ನೆಗಳಿಗೆ ಆಕ್ಷೇಪ ಎತ್ತುವವರಿಗೆ ಉತ್ತರ ಕೊಡಬೇಕಾದವರು ದೈವೀ ಮುತ್ತು ಅವರೇ.. ಅಲ್ಲಲ್ಲಿ ವಿವರ ರೂಪದ ಮಾತುಗಳಿಗೆ ಮಾತ್ರ ನಾನು ಜವಾಬ್ದಾರ."

-ಚಿದಾನಂದಮೂರ್ತಿ

ಕನ್ನಡಪ್ರಭ ಪತ್ರಿಕೆಯಲ್ಲಿ ದೈವೀಮುತ್ತು ಎಂಬುವರು ಎತ್ತಿದ್ದ ಪ್ರಶ್ನೆಗಳನ್ನು ತಮ್ಮವೆಂಬಂತೇ ಬರೆದು ಕೊನೆಗೆ ನುಣುಚಿಕೊಂಡಿರುವ ರೀತಿ

ವಾರದ ವಿವೇಕ

ಕಾವೇರಿ ಕುಟುಂಬದ ನಿರ್ಣಯಗಳು


1. ನ್ಯಾಯಮಂಡಳಿಯ ಅಂತಿಮ ತೀರ್ಪನ್ನು ಮು... ಮನಸ್ಸಿನಿಂದ ನಿರೀಕ್ಷೆ ಮಾಡುವುದು
2. ಅಲ್ಪಕಾಲೀನ ಮತ್ತು ದೀರ್ಘಕಾಲೀನ ಆಶಯಗಳನ್ನು ಇಟ್ಟುಕೊಳ್ಳುವುದು.
3. ಕಾವೇರಿ ವಿಚಾರದಲ್ಲಿ ಎರಡೂ ರಾಜ್ಯಗಳ ಜನ... ಭಾವುಕತೆಯನ್ನು ತೊರೆದು ಪ್ರೀತಿ-ಸೌಹಾರ್ದತೆಯಿಂದ ಇರಲು ನಿರ್ಧಾರ.
4. ಕಾವೇರಿ ಕುಟುಂಬಕ್ಕೆ ಪ್ರೀತಿ-ವಿಶ್ವಾಸ-ಪ್ರಬುದ್ಧ... ಮತ್ತು ಮಾನವೀಯತೆಯಲ್ಲಿ ನಂಬಿಕೆ. ವಿವಾದವಿದ್ದ... ಪರಸ್ಪರ ಮಾತುಕತೆಯಿಂದ ಪರಿಹಾರ.

ನರಕವಾದ ಕಾಶ್ಮೀರವೆಂಬ ಸ್ವರ್ಗ

ಕಂಡಹಾಗೆ

ತಮ್ಮ ವಿಕೃತ ಕಾಮ ತೃಷೆಗೆ ಅಮಾಯಕ ಮಕ್ಕಳನ್ನು ಕೊಂದ ನಿಥಾರಿಯ ಕೊಲೆಗಡುಕರಿಗೂ, ಬಡ್ತಿ ಮತ್ತು ಬಹುಮಾನಗಳಿಗಾಗಿ ಅಮಾಯಕ ಕಾಶ್ಮೀರಿಗಳನ್ನು ಕೊಂದಿರುವ ಅಲ್ಲಿನ ಪೊಲೀಸರಿಗೂ ಹಾಗೂ ಸೈನಿಕರಿಗೂ ಏನಾದರೂ ವ್ಯತ್ಯಾಸ ಇದೆಯೇ?

ಈ ಪ್ರಶ್ನೆ ಯಾಕೆಂದರೆ, ಒಂದು ಪ್ರಜಾಪ್ರಭುತ್ವದಲ್ಲಿ ಯಾವಾಗ ನ್ಯಾಯ ನಗಣ್ಯವಾಗುತ್ತದೊ, ಯಾವಾಗ ಪ್ರಭುತ್ವ ತನ್ನ ಬಲಪ್ರಯೋಗವನ್ನು ಮಾಡುತ್ತದೆಯೋ ಆಗ ನಿಥಾರಿಯಲ್ಲಿ ಅಪ್ರಾಪ್ತ ಮಕ್ಕಳೂ ಸಾಯುತ್ತಾರೆ, ಕಾಶ್ಮೀರ ಎಂಬ 'ಸ್ವರ್ಗ'ದಲ್ಲಿ ಅಮಾಯಕರೂ ಪೊಲೀಸರ ಗುಂಡೇಟಿಗೆ ಬಲಿಯಾಗುತ್ತಾರೆ.



ಅಮಾಯಕರನ್ನು ಕೊಂದು ಬಡ್ತಿ, ಪ್ರಶಸ್ತಿಗಳನ್ನು ಗಿಟ್ಟಿಸಿಕೊಂಡ ಕಾಶ್ಮೀರಿ ಪೊಲೀಸರು

ಮೊನ್ನೆ ಬಹಿರಂಗಗೊಂಡಿರುವ ಸತ್ಯ ಯಾವುದೆಂದರೆ, ನಿಥಾರಿಯಲ್ಲಿ ಬಡವರ ಮಕ್ಕಳು ನಾಪತ್ತೆಯಾಗಿದ್ದರೂ, ಅವರಿಗಾಗಿ ಅವರ ತಂದೆ-ತಾಯಂದಿರು ಹುಡುಕಾಡುತ್ತಿದ್ದರೂ, ಅವರನ್ನೆಲ್ಲ ಕೊಂದ ಮೊನಿಂದರ್ ಪಂಧೇರ್ ನೀಡಿದ ಹಣದಲ್ಲಿ ನೊಯಿಡಾದ ಪೊಲೀಸರು ಐಶಾರಾಮಿ ಜೀವನ ನಡೆಸುತ್ತಿದ್ದರು. ತಮ್ಮ ಮಕ್ಕಳು ಕಾಣೆಯಾಗಿದ್ದರ ಬಗ್ಗೆ ದೂರು ಕೊಡಲು ಬಂದ ಬಡ ತಂದೆ- ತಾಯಂದಿರನ್ನು ಅಮಾನುಷವಾಗಿ ಥಳಿಸುತ್ತಿದ್ದರು.

ಅಪ್ರಾಪ್ತ ಮಕ್ಕಳನ್ನು ತನ್ನ ವಿಕೃತ ಕಾಮತೃಷೆಗೆ ಬಳಸಿಕೊಳ್ಳುತ್ತಿದ್ದವನೊಬ್ಬ ನೀಡಿದ ಅಮೇಧ್ಯವೇ ನಮ್ಮ ಖಾಕಿ ಧರಿಸಿನವರಿಗೆ ಮುಖ್ಯವಾಗುತ್ತದೆಯೆಂದರೆ ನಮ್ಮ ಈ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂದು ಯೋಚಿಸಿ. ವಿಪರ್ಯಾಸದ ಸಂಗತಿ ಯಾವುದೆಂದರೆ ಇದು ನೊಯಿಡಾದ ಪೊಲೀಸರಿಗೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಮಣಿಪುರದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸುತ್ತಿದ್ದರೂ ಯಾವ ಶಿಕ್ಷೆಗೂ ಗುರಿಯಾಗದ ಭಾರತದ ಸೈನಿಕರಿದ್ದಾರೆ. ಕಾಶ್ಮೀರದಲ್ಲಿ ಒಬ್ಬ ಕಾಶ್ಮೀರಿಯನ್ನು ಕೊಂದರೆ- ಆತ ಅಮಾಯಕನಾಗಿದ್ದರೂ- ಒಂದು ಲಕ್ಷ ರೂ.ಗಳ ನಗದನ್ನು ಬಹುಮಾನವಾಗಿ ಪಡೆಯುವ ಪೊಲೀಸರಿದ್ದಾರೆ. ಇತರೆಡೆ ಹೆಚ್ಚು ನಕ್ಸಲರನ್ನು ಕೊಂದಷ್ಟೂ ಹೆಚ್ಚು ಬಡ್ತಿಯನ್ನು, ಪ್ರಶಸ್ತಿಗಳನ್ನು ಪಡೆಯುವ ಖಾಕಿಗಳಿದ್ದಾರೆ. ಇದೆಲ್ಲ ಇವತ್ತಿನ ನಮ್ಮ ಪ್ರಜಾಪ್ರಭುತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಎಲ್ಲಿ ಪೊಲೀಸ್ ಮತ್ತು ಸೈನ್ಯದ ಆಡಳಿತವಿರುತ್ತದೆಯೋ ಅಲ್ಲಿ ಸಾಮಾನ್ಯ ಜನರಿಗೆ ಜೀವನ ನಡೆಸುವುದೇ ಕಷ್ಟವಾಗುತ್ತದೆ ಎಂಬುದಕ್ಕೆ ಇವತ್ತು ಕಾಶ್ಮೀರವೇ ಒಂದು ಉತ್ತಮ ಉದಾಹರಣೆ. ಇಂದು ಅಲ್ಲಿ ಎಂತಹ ಸ್ಥಿತಿ ನಿರ್ಮಾಣವಾಗಿದೆಯೆಂದರೆ, ಅಲ್ಲಿನ ಖಾಕಿಗಳು ಯಾರನ್ನು ಬೇಕಾದರೂ ಕೊಂದು 'ಆತ ಭಯೋತ್ಪಾದಕನಾಗಿದ್ದ' ಎಂದು ಹೇಳಿ ಹಣ, ಪ್ರಶಸ್ತಿ ಪಡೆಯಬಹುದು. ಅದನ್ನೆಲ್ಲಾ ಯಾರೂ ಪ್ರಶ್ನಿಸುವಂತೆಯೇ ಇಲ್ಲ, ಇಂತಹ ಕೊಲೆಗಳಿಗೆ ಶಹಭಾಸ್‌ಗಿರಿಯನ್ನು ಘೋಷಿಸುವ ಸರ್ಕಾರ ಅದೇರೀತಿ ಕೊಲೆಗಳಲ್ಲಿ ತೊಡಗುವುದೂ ಅಚ್ಚರಿಯೇನಲ್ಲ.

ಉದಾಹರಣೆಗೆ: ವಾಜಪೇಯಿ ಪ್ರಧಾನಿಯಾಗಿದ್ದಾಗ ನಡೆದ ಒಂದು ಘಟನೆಯನ್ನೇ ತೆಗೆದುಕೊಳ್ಳಿ. 2000ದ ಏಪ್ರಿಲ್‌ನಲ್ಲಿ 22 ವರ್ಷಗಳ ನಂತರ ಅಮೆರಿಕಾ ಅಧ್ಯಕ್ಷ ಭಾರತಕ್ಕೆ ಭೇಟಿ ನೀಡಿದರು. ಅವರು ಭಾರತವನ್ನು ತಲುಪುವುದಕ್ಕೆ ಸ್ವಲ್ಪ ಮುಂಚೆಯೇ ಚಿತ್ತೀಸಿಂಗ್‌ಪುರ ಎಂಬಲ್ಲಿ ಭಾರತೀಯ ಸೈನ್ಯದ ಸಮವಸ್ತ್ರ ತೊಟ್ಟಿದ್ದ ಭಯೋತ್ಪಾದಕರು ಬಂದು 35 ಸಿಖ್ ಪುರುಷರನ್ನು ಅಮಾನುಷವಾಗಿ ಕೊಂದುಹಾಕಿದರು. ಈ ಅಮಾಯಕರ ರಕ್ತ ತರ್ಪಣದೊಂದಿಗೆ ಪ್ರಾರಂಭವಾದ ಬಿಲ್ ಕ್ಲಿಂಟನ್‌ನ ಭಾರತ ಪ್ರವಾಸದ ಸಂದರ್ಭದಲ್ಲಿ ಭಾರತ ಸರ್ಕಾರದ ಪರವಾಗಿಯೂ, ಇಲ್ಲಿ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿರುವ ಪಾಕಿಸ್ತಾನದ ವಿರುದ್ಧವಾಗಿಯೂ ಅಮೆರಿಕ ಸರ್ಕಾರ ಹೇಳಿಕೆಗಳನ್ನು ನೀಡುವಂತಾಯಿತು.

ಆದರೆ ಆ ಅಮಾಯಕ ಸಿಖ್ ಪುರುಷರನ್ನು ಕೊಂದದ್ದು ಯಾರು? ವಾಜಪೇಯಿ ಸರ್ಕಾರದ ಪ್ರಕಾರ ಹಿಜ್ಬುಲ್ ಮುಜಾಹಿದ್ದೀನ್ ಅಥವಾ ಅಲ್‌ಕೈದಾ ಆಗಿತ್ತು, ಆದರೆ ಆ ಎರಡೂ ಸಂಘಟನೆಗಳು ತಾವು ಆ ಕೃತ್ಯವನ್ನು ಎಸಗಿಲ್ಲವೆಂದೇ ಹೇಳಿದ್ದವು.

ಈ ಪ್ರಕರಣ ನಡೆದ ಐದು ದಿನಗಳ ನಂತರ ಭಾರತೀಯ ಸೈನ್ಯದ 17ನೇ ರಾಷ್ಟ್ರೀಯ ರೈಫಲ್ ಬೆಟಾಲಿಯನ್ ಎನ್‌ಕೌಂಟರ್ ಒಂದರಲ್ಲಿ ಐವರನ್ನು ಕೊಂದುಹಾಕಿ ಅವರೇ ಚಿತ್ತೀಸಿಂಗ್‌ಪುರದ ಸಿಖ್‌ರ ಮಾರಣಹೋಮದಲ್ಲಿ ಪಾಲ್ಗೊಂಡಿದ್ದರು ಎಂದು ಹೇಳಿತ್ತು. ಆದರೆ ಆನಂತರ ಗೊತ್ತಾಗಿದ್ದೇನೆಂದರೆ, ಸೈನಿಕರು ಕೊಂದ ಐವರೂ ಅಮಾಯಕರಾಗಿದ್ದರು. ಅದು ಆ ಸೈನಿಕರಿಗೆ ಗೊತ್ತಿದ್ದರೂ ಅವರನ್ನು ಕೊಂದು ಹಾಕಿದ್ದರು. ಇಂತಹ ಅನೇಕ ಘಟನೆಗಳು ಪ್ರತೀದಿನ ಕಾಶ್ಮೀರದಲ್ಲಿ ಘಟಿಸುತ್ತಲೇ ಇರುತ್ತದೆ. ಮೊನ್ನೆಯೂ ಇಂತಹದ್ದೇ ಘಟನೆಯಲ್ಲಿ ಪೊಲೀಸರು ಮತ್ತು ಸೈನಿಕರು ಸಿಕ್ಕಿಹಾಕಿಕೊಂಡಿದ್ದಾರೆ.

ಅಂದಹಾಗೆ, ಆ 25 ಸಿಖ್‌ರನ್ನು ನಿಜವಾಗಿಯೂ ಕೊಂದಿದ್ದು ಯಾರು? ಎಂಬುದು ಈಗಲೂ ನಿಗೂಢವಾಗಿದೆ. ಹಲವರ ಪ್ರಕಾರ ಭಾರತದ ಸೈನಿಕರೇ ಅವರನ್ನೆಲ್ಲಾ ಕೊಂದು ಅಮೆರಿಕಾ ಅಧ್ಯಕ್ಷನ ಭೇಟಿ ಭಾರತದ ಪರವಾಗುವಂತೆ ಮಾಡಲಾಗಿತ್ತು, ಕಾಶ್ಮೀರ ಮತ್ತು ಮಣಿಪುರದಲ್ಲಿ ಭಾರತದ ಸೈನ್ಯ ನಡೆಸಿರುವ ಕೃತ್ಯಗಳನ್ನು ಗಮನಿಸಿದರೆ ಇದು ಅಸಾಧ್ಯ



ಎಂದೇನೂ ಅನ್ನಿಸುವುದಿಲ್ಲ. ಹಾಗೆಯೇ ಭಾರತದ ಸಂಸತ್ತಿನ ಮೇಲೆ ನಡೆದ ದಾಳಿಯ ಸುತ್ತ ಇದ್ದ ಸಂದರ್ಭದ ಸೂಕ್ಷ್ಮತೆಗಳನ್ನು ಗಮನಿಸಿ. ಹಿಂದೊಮ್ಮೆ ಇದನ್ನು ಕುರಿತಂತೆ ಇದೇ ಅಂಕಣದಲ್ಲಿ ಅರುಂಧತಿ ರಾಯ್ ಅವರ ಲೇಖನದಿಂದ ಆಯ್ದ ಭಾಗಗಳನ್ನು ನೀಡಿದ್ದೆ. ಅದನ್ನೇ ಇಲ್ಲಿ ಮತ್ತೊಮ್ಮೆ ನೀಡುತ್ತಿದ್ದೇನೆ:

``13ನೇ ಡಿಸೆಂಬರ್ 2001ರಂದು ಭಾರತೀಯ ಸಂಸತ್ತು ತನ್ನ ಚಳಿಗಾಲದ ಅಧಿವೇಶನಕ್ಕೆ ಸಿದ್ದಗೊಳ್ಳುತ್ತಿತ್ತು, (ಆಡಳಿತದಲ್ಲಿದ್ದ ಎನ್‌ಡಿಎ ಸರ್ಕಾರ ಮತ್ತೊಂದು ಭ್ರಷ್ಟಾಚಾರದ ಆಪಾದನೆಯಲ್ಲಿ ಆಕ್ರಮಣಕ್ಕೀಡಾಗಲಿತ್ತು). ಅಂದು ಬೆಳಗ್ಗೆ ಬಿಳಿ ಅಂಬಾಸಿಡರ್ ಕಾರಿನಲ್ಲಿ ಬಂದ ಐದು ಮಂದಿ ಸಂಸತ್ ಭವನದ ಮೇಲೆ ದಾಳಿಯಿಟ್ಟರು. ಅವರ ಮೇಲೆ ಪೊಲೀಸರು ಗುಂಡು ಹಾರಿಸಿದರು. ಈ ಪ್ರಕರಣದಲ್ಲಿ ಆ ಐದೂ ಜನರೊಂದಿಗೆ ಎಂಟು ಜನ ರಕ್ಷಣಾ ಸಿಬ್ಬಂದಿಯವರೂ ಮರಣ ಹೊಂದಿದರು.

ನಿರೀಕ್ಷೆಯಂತೆಯೇ ಅಂದಿನ ಪ್ರಧಾನಿ ವಾಜಪೇಯಿ ಅಲ್ಲಿಗೆ ಮೂರು ವರ್ಷಗಳ ಹಿಂದೆ ಸೆಪ್ಟೆಂಬರ್ 11ರಂದು ಅಮೆರಿಕಾ ಮೇಲೆ ನಡೆದಿದ್ದ ದಾಳಿಗೆ ಇದನ್ನು ಹೋಲಿಸಿದರು.

ಈ ಪ್ರಕರಣ ನಡೆದ ಎರಡೇ ದಿನಗಳಲ್ಲಿ ಇದನ್ನು ಶೋಧಿಸಿದ ಪೊಲೀಸರು ಹನ್ನೆರಡು ಜನರನ್ನು ಆರೋಪಿಗಳೆಂದು ಪ್ರಕಟಿಸಿದರು. ದಾಳಿಯ ನಂತರದ ಆತಂಕದ ದಿನಗಳಲ್ಲಿ ಸಂಸತ್ತಿನ ಅಧಿವೇಶನವನ್ನು ಮುಂದೂಡಲಾಯಿತು. ಅದೇ ಹೊತ್ತಿಗೆ ಪಾಕಿಸ್ತಾನದಿಂದ ಭಾರತದ ಹೈಕಮೀಷನರ್ ಅವರನ್ನು ಹಿಂದಕ್ಕೆ ಕರೆದ ಸರ್ಕಾರ ಭಾರತ ಮತ್ತು ಪಾಕಿಸ್ತಾನದ ನಡುವೆ ರಸ್ತೆ ಮತ್ತು ರೈಲು ಮಾರ್ಗಗಳನ್ನು ಬಂದ್ ಮಾಡಿತು. ಐದು ಲಕ್ಷಕ್ಕೂ ಹೆಚ್ಚು ಸೈನಿಕರನ್ನು ಪಾಕಿಸ್ತಾನದ ಗಡಿಗೆ ಕಳುಹಿಸಿತು. ಯಾವುದೇ ಕ್ಷಣದಲ್ಲಿ ಈ ಉಪಖಂಡದಲ್ಲಿ ಅಣುಯುದ್ಧ ಪ್ರಾರಂಭವಾಗಬಹುದು ಎಂಬ ಆತಂಕಕ್ಕೆ ಇಡೀ ಜಗತ್ತನ್ನೇ ಸರ್ಕಾರ ದೂಡಿತ್ತು. ಇದೆಲ್ಲದಕ್ಕೂ ದೇಶದ ಖಜಾನೆಯಿಂದ ಖರ್ಚಾಗಿದ್ದು ಸುಮಾರು ಹತ್ತು ಸಾವಿರ ಕೋಟಿ ರೂ. ಗಳು.''



ಹತ್ಯೆಯಾದ 35 ಜನ ಸಿಖ್‌ರ ಸಾಮೂಹಿಕ ಅಂತ್ಯಸಂಸ್ಕಾರ

.... ಹೀಗೆ ಪ್ರಾರಂಭವಾಗುವ ಅರುಂಧತಿ ರಾಯ್ ಲೇಖನ ಇಡೀ ಪ್ರಕರಣದ ಹಲವಾರು ಮಗ್ಗಲುಗಳನ್ನು ಶೋಧಿಸಿ ಕೊನೆಗೆ ಅಂತ್ಯಗೊಳ್ಳುವುದು ಈ ಪ್ರಶ್ನೆಗಳೊಂದಿಗೆ:

"ಭಾರತ ಸಂಸತ್ತಿನ ಮೇಲೆ ದಾಳಿ ಮಾಡಿದ್ದು ಯಾರು? ಲಷ್ಕರ್-ಇ ತೋಯ್ಬಾನೇ? ಜೈಶ್ ಮೊಹಮ್ಮದ್ ಸಂಘಟನೆಯೇ? ಅಥವಾ ಈ ದೇಶದ ಹೃದಯದಾಳದಲ್ಲೆಲ್ಲೋ ಈ ಪ್ರಶ್ನೆಗೆ ಉತ್ತರವಿರಬಹುದೇ?"

ಸಂಸತ್ತಿನ ಮೇಲೆ ದಾಳಿ ನಡೆಸಿದವರು ಯಾರು? ಎಂಬ ಪ್ರಶ್ನೆಗೆ ಇವತ್ತಿಗೂ ಉತ್ತರ ವಿಲ್ಲವೋ, ಹಾಗೆಯೇ ಚಿತ್ತೀಸಿಂಗ್‌ಪುರದಲ್ಲಿ 35 ಅಮಾಯಕ ಸಿಖ್‌ರನ್ನು ಕೊಂದವರ್ಯಾರು ಎಂಬ ಪ್ರಶ್ನೆಗೂ ಉತ್ತರವಿಲ್ಲ... ಆದರೆ ಎರಡೂ ಪ್ರಕರಣಗಳ ಸಾಂದರ್ಭಿಕ ಸೂಕ್ಷ್ಮತೆಯನ್ನು ಗಮನಿಸಬೇಕಿದೆ.


ಇನ್ನು ಇವತ್ತಿನ ಕಾಶ್ಮೀರದಲ್ಲಿ ಎಂತಹ ಪರಿಸ್ಥಿತಿ ಇದೆ ಎಂದು ಅರುಂಧತಿ ರಾಯ್ ಉತ್ತಮವಾಗಿ ವಿಶ್ಲೇಷಿಸಿದ್ದಾರೆ:


"ಸತ್ಯ ಎಂಬುದು ಕಾಶ್ಮೀರ ಕಣಿವೆಯಲ್ಲಿ ಎಲ್ಲಕ್ಕಿಂತ ಹೆಚ್ಚು ಅಪಾಯಕಾರಿ. ಆಳಕ್ಕೆ ಅಗೆದಷ್ಟೂ ಬರೀ ಕೆಟ್ಟದ್ದೇ ಸಿಗುತ್ತದೆ. ಇಲ್ಲಿ ಅತ್ಯಂತ ಕ್ರೂರವಾದ, ಅಶಿಸ್ತಿನ ಮತ್ತು ಭಯಾನಕ ಶಕ್ತಿಗಳು ಕಾರ್ಯನಿರತವಾಗಿವೆ. ಇದು ಸಾಮಾನ್ಯವಾದ ಸೈನಿಕ ಕಾರ್ಯಾಚರಣೆಯಾಗಿರದೆ ಪೊಲೀಸು, ಶರಣಾಗತ ಆತಂಕವಾದಿಗಳು, ದೇಶಭ್ರಷ್ಟರು ಹಾಗೂ ಇನ್ನಿತರ ಕ್ರಿಮಿನಲ್‌ಗಳು ವ್ಯವಹರಿಸುವ ಜಾಗವಾಗಿದ್ದು, ಇಂಥ ಸಂದಿಗ್ಧ ವಲಯದಲ್ಲಿ ರಕ್ಷಣಾ ಪಡೆ ಕಾರ್ಯನಿರತವಾಗಿದೆ. ಇಂದು ಕಾಶ್ಮೀರದ ಸ್ಥಳೀಯರಿಗಾಗಿ, ಅದರಲ್ಲೂ ಗ್ರಾಮಾಂತರ ಕಾಶ್ಮೀರಿಗಳಿಗಾಗಿ ಪ್ರಾರ್ಥಿಸಬೇಕಿದೆ."

"ಭೂಮಿಯ ಮೇಲಿನ ಸ್ವರ್ಗ" ಎಂದೇ ಕರೆಯಲ್ಪಟ್ಟಿದ್ದ ಕಾಶ್ಮೀರವನ್ನು ಸೈನಿಕರು, ಪೊಲೀಸರು ಮತ್ತು ಭಯೋತ್ಪಾದಕರು ಇವತ್ತು "ಭೂಮಿಯ ಮೇಲಿನ ನರಕ"ವನ್ನಾಗಿ ಪರಿವರ್ತಿಸಿದ್ದಾರೆ.

ಅಂತಹ ನರಕದಲ್ಲಿ ಸೈನ್ಯಾಧಿಕಾರಿಗಳು, ರಾಜಕಾರಣಿಗಳು, ಅಧಿಕಾರಿಗಳು ಸೇರಿ ಅಪ್ರಾಪ್ತ ಬಾಲಕಿಯರ ಸೆಕ್ಸ್ ರಾಕೆಟ್‌ಅನ್ನು ನಡೆಸುತ್ತಾರೆ. ಅಮಾಯಕರನ್ನು ಕೊಂದು ಬಡ್ತಿ, ಬಹುಮಾನಗಳನ್ನು ಪಡೆಯುತ್ತಾರೆ. ಇವರಿಗೂ ನಿಥಾರಿಯ ವಿಕೃತಕಾಮಿಗಳಿಗೂ ವ್ಯತ್ಯಾಸ ಏದೆಯೇ?

-ಗೌರಿ ಲಂಕೇಶ್






ಒಂದು ವರ್ಷ

ಕೋ-ಜಾಗೆ ಮಜಾ ಜನತೆಗೆ ಸಜಾ

ಈ ಸರ್ಕಾರಕ್ಕೆ ಒಂದು ವರ್ಷವಾಗಿದ್ದರ ಬಗ್ಗೆ ಅತೀವ ಸಡಗರವಾಗಿರುವುದು ಕೇವಲ ಚೆಡ್ಡಿ ಪತ್ರಿಕೆಗಳಿಗೆ ಮಾತ್ರ. ಇವರೆಲ್ಲಾ ಕೋಟ್ಯಂತರ ರೂಪಾಯಿಗಳ ಜಾಹೀರಾತು ಜೇಬಿಗಿಳಿಸಿಕೊಂಡು ಸರ್ಕಾರವನ್ನು ಹಾಡಿ ಹೊಗಳುತ್ತಿದ್ದಾರೆ. ಆದರೆ ಇವರ ಮಜಾ ಆಟಗಳು ಜನತೆಗೆ ಮಾತ್ರ ಸಜೆಯಾಗಿ ಪರಿಣಮಿಸಿದೆ....

ದೇವೇಗೌಡರ ಕುಟುಂಬದವರು ಕರ್ನಾಟಕದ ಜನತೆಯ ಬೆನ್ನಿಗೆ ಚೂರಿ ಹಾಕಿ ಇಂದಿಗೆ ಒಂದು ವರ್ಷವಾಯಿತು. ಗೌಡರ ಅಪ್ಪುಬುದ್ಧ ಪುತ್ರರತ್ನ ಕುಮಾರಸ್ವಾಮಿ ಈ ಸಂಪದ್ಭರಿತ ಆದರೂ ಸಂಕಷ್ಟಗಳ ನಾಡಾದ ಕರ್ನಾಟಕದ ಮುಖ್ಯಮಂತ್ರಿ ಆಗುತ್ತಾರೆಂದು ಯಾರೂ ಕಲ್ಪಿಸಿಕೊಂಡಿರಲಿಲ್ಲ. ಅದೇ ರೀತಿ ಹಿಂದೂ ಕೋಮುವಾದಿಗಳಿಗೆ ಎಲೆಕ್ಷನ್‌ನಲ್ಲಿ ಸ್ಪಷ್ಟ ಮೆಜಾರಿಟಿ ನೀಡಲು ಮತದಾರನೂ ನಿರಾಕರಿಸಿದ್ದ. ಬಿಜೆಪಿ ಅಧಿಕಾರಕ್ಕೆ ಬರುವುದಾಗಲೀ, ಯಡಿಯೂರಪ್ಪ ಹಾಗೂ ಶೋಭಾ ಕರಂದ್ಲಾಜೆ ಈ ರಾಜ್ಯದ ಅಧಿಕಾರ ಸೂತ್ರ ಹಿಡಿಯುವುದಾಗಲೀ ಜನರಿಗೆ ನಿಜಕ್ಕೂ ಬೇಕಿರಲಿಲ್ಲ.



ಆದರೆ ಕರ್ನಾಟಕ ಜನ ಏನನ್ನು ಬೇಡ ಎಂದುಕೊಂಡಿದ್ದರೋ ಅದನ್ನೇ ಅವರ ಮೇಲೆ ಹೇರಲಾಗಿದೆ. ಹಿಂದೂ ಫ್ಯಾಸಿಸ್ಟ್ ಪಾರ್ಟಿ ಹಾಗೂ ಗೌಡರ ಕುಟುಂಬ ಮಿಲಾಕತ್ ಆಗಿ ಲಿಂಗಾಯತ-ಒಕ್ಕಲಿಗ-ಬ್ರಾಹ್ಮಣರೆಂಬ ಮೇಲ್ಜಾತಿಗಳೇ ನಿಯಂತ್ರಿಸುತ್ತಿರುವ ಸರ್ಕಾರ ಇದೇ ಫೆಬ್ರವರಿ 3ಕ್ಕೆ ಒಂದು ವರ್ಷ ಪೂರ್ಣಗೊಳಿಸಿದೆ. ನೈಜ ಜನಪರ ಕಾಳಜಿಗಳಿರುವ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಒಂದು ವರ್ಷದಲ್ಲಿ ಬೇಕಾದಷ್ಟು ಕೆಲಸ ಮಾಡಿ ತೋರಿಸಬಹುದು. ಕನಿಷ್ಠ ಆ ಸರ್ಕಾರದ ಆದ್ಯತೆಗಳು, ಆಡಳಿತದ ದಿಕ್ಕು ಜನಪರವಾವೆಯೇ ಎಂಬುದರ ಜಾಡು ಹಿಡಿಯುವುದೂ ಕಷ್ಟವೇನಲ್ಲ.

ಆ ಲೆಕ್ಕಾಚಾರದಲ್ಲಿ ಹೇಳಬೇಕೆಂದರೆ ಕುಮಾರಸ್ವಾಮಿ ಯಾವತ್ತು ಬಳ್ಳಾರಿ ಗಣಿ ಮಾಲೀಕರ ಹತ್ತಿರ ಕಾಸೀಸಿಕೊಂಡು ದಳ- ಶಾಸಕರೊಂದಿಗೆ ರೆಸಾರ್ಟ್ ಹೊಕ್ಕು ಬಾಗ್ಲಿಲಿಕ್ಕಿಕೊಂಡರೋ ಅವತ್ತೆ ಈ ಸರ್ಕಾರದ ಹಾದಿ ಯಾವುದೆಂದು ಖಚಿತವಾಗಿತ್ತು, ಬಿಜೆಪಿಯೊಂದಿಗೆ ಡೀಲ್ ಕುದುರಿಸಿಕೊಂಡು ಮುಖ್ಯಮಂತ್ರಿಯಾದ ದಿನವೇ 'ನನಗೆ ಸೆಕ್ಯುಲರ್ ಪದದ ಅರ್ಥ ಗೊತ್ತಿಲ್ಲ' ಎಂದಿದ್ದ ಈ ಜನತಾದಳ (ಸೆಕ್ಯುಲರ್) ಪಾರ್ಟಿ ಅಧ್ಯಕ್ಷ ಮೊದ್ಮಣಿ ಕುಮಾರಸ್ವಾಮಿ. ಆದರಿದು ಪೆದ್ದುತನ ಆಗಿರಲಿಲ್ಲ, ಬದಲಾಗಿ ಕುಮಾರಸ್ವಾಮಿಯ ಅಧಿಕಾರದಾಹ, ದುಡ್ಡು ಹಾಗೂ ಮೇಲ್ಜಾತಿ ಠೇಂಕಾರವಾಗಿತ್ತು, ಅಲ್ಲಿಂದಾಚೆಗೆ ಏನೇನಾಯಿತು ನೋಡಿ,

ದೇವೇಗೌಡ "ಮಗ ನನಗೇ ಮೋಸ ಮಾಡಿಬಿಟ್ಟ" ಎಂದೆಲ್ಲಾ ಭೋರಾಡಿ ಅತ್ತು ಸಿಂಧ್ಯಾ ಮತ್ತಿತರನ್ನು ನಂಬಿಸಿ ಕತ್ತು ಕುಯ್ದುಬಿಟ್ಟರು. ಎಂ.ಪಿ. ಪ್ರಕಾಶ್‌ಗೆ ಸರಿಯಾಗಿ ಇಡ ಹೊಡೆದು ಜೊತೆಗಿಟ್ಟುಕೊಂಡಿದ್ದಾರೆ... ಕೋಲೆ ಬಸವನಂತೆ!


ಕುಮಾರಸ್ವಾಮಿ ಬುದ್ಧಿಮಟ್ಟ ಎಷ್ಟು?

ಸೆಕ್ಯುಲರಿಸಂನ ಅರ್ಥ ಗೊತ್ತಿಲ್ಲ ಎಂದಾಗ ನಕ್ಕು ಗೇಲಿ ಮಾಡಿದ್ದ ಜನ ಯಾವಾಗ ಕುಮಾರಸ್ವಾಮಿ 'ಯಾರ್ರೀ... ಈ ಅನಂತಮೂರ್ತಿ' ಎಂದಾಗ ಈತನ ಅವಿವೇಕತನ ನೋಡಿ ಅವಾಕ್ಕಾಗಿದ್ದರು. ರಾಜೀವ್ ಚಂದ್ರಶೇಖರನೆಂಬ ಕೋಟ್ಯಾಧೀಶ ಉದ್ಯಮಿಯ ಎಂಜಲು ತಿಂದು ರಾಜ್ಯಸಭಾ ಸೀಟು ಮಾರಿಕೊಳ್ಳಲು ನಿಂತಿದ್ದ ಬಿಜೆಪಿ ಹಾಗೂ ಗೌಡರಿಗೆ ಅನಂತಮೂರ್ತಿಯವರೂ ಸ್ಪರ್ಧೆಗಿಳಿದಿದ್ದು ತಲೆನೋವಾಗಿತ್ತು, ಆದರೆ ರಾಜಕೀಯವಾಗಿ ನೈತಿಕ ನೆಲೆಗಟ್ಟಿನಿಂದ ಸಮರ್ಥಿಸಿಕೊಳ್ಳಲಾಗದಷ್ಟು ಹೀನ ಸ್ಥಿತಿ ತಲುಪಿದ್ದ ಗೌಡರ ಕುಟುಂಬಕ್ಕೆ ಅನಂತಮೂರ್ತಿಯವರಿಗೇ 'ಯಾರ್ರೀ ನೀವು' ಎಂದಿದ್ದು ಸರಿ ಎನಿಸಿರಬೇಕು. ಆದರೆ ಜನತೆಗೆ ಇವರ ಅಯೋಗ್ಯತನ ಅಂದೇ ಗೊತ್ತಾಯಿತು.

ಅದೇ ವೇಳೆಗೆ ಮೊದಲ ಬಾರಿ ಅಧಿಕಾರದ ರುಚಿ ಕಾಣುತ್ತಿದ್ದ ಬಿಜೆಪಿಗಳ ರಣೋತ್ಸಾಹವನ್ನು ಈಗ ಮತ್ತೆ ನೆನಪಿಸಿಕೊಳ್ಳಿ.


ಕಂದಾಯ ಸಚಿವನಾದೇಟಿಗೆ ಜಗದೀಶ್ ಶೆಟ್ಟರ್ ತನ್ನ ಮೊಬೈಲ್ ನಂಬರನ್ನೇ ಪೇಪರ್‌ಗೆ ಕೊಟ್ಟು 'ಲಂಚಾ ಕೇಳುವ ಆಫೀಸರ್‌ಗಳ ಬಗ್ಗೆ ತಿಳಿಸಿ ಸಸ್ಪೆಂಡ್ ಮಾಡಿಬಿಡುತ್ತೇನೆ' ಎಂದಬ್ಬರಿಸಿದ್ದರು. ಆದರೆ ಅದೇ ಶೆಟ್ಟರ್ ಇವತ್ತೂ ಲಂಚ ನುಂಗುತ್ತಿರುವ ಸ್ಪೀಡ್ ನೋಡಿ ಕಂದಾಯ ಇಲಾಖೆಯೇ ದಂಗಾಗಿ ಹೋಗಿದೆ. ಅವರು ಯಾವ ನಂಬರಿಗೆ ಫೋನ್ ಮಾಡಬೇಕು ಹೇಳಿ?

ಜಲಸಂಪನ್ಮೂಲ ಸಚಿವ ಈಶ್ವರಪ್ಪ ಇಲಾಖೆಯ ಬಹುತೇಕ ನೀರಾವರಿ ಯೋಜನೆಗಳ ಗುತ್ತಿಗೆ ಹಾಗೂ ಪರ್ಸೆಂಟೇಜ್ ಡೀಲುಗಳನ್ನು ಅಳಿಯ ನಿರ್ಮಲ ಕುಮಾರ್‌ಗೆ ವಹಿಸಿ ಕೊಟ್ಟಿದ್ದಾರೆ. ಅವರ ಮನೆ-ಮನಸು-ಖಾಸಗಿ ಖಜಾನೆಗಳೆಲ್ಲಾ ಈಗ ತಂಪೋ ತಂಪು. ಜೆಡಿಎಸ್‌ನ ಸಾರಿಗೆ ಸಚಿವ ಚೆಲುವರಾಯಸ್ವಾಮಿ ಕನಿಷ್ಠ ನೂರೈವತ್ತು ಕೋಟಿ ದೋಚಿರುವ ಬಗ್ಗೆ ರೂಮರ್‌ಗಳಿವೆ. ಇಲಾಖಾ ವರ್ಗಾವಣೆಯಲ್ಲಿ 32 ಕೋಟಿ ಸಂಗ್ರಹಿಸಿ ಗೌಡರ ಕುಟುಂಬಕ್ಕೆ ಬರೀ 8 ಕೋಟಿ ಕೊಟ್ಟು ಮಿಕ್ಕಿದ್ದನ್ನು ಚೆಲುವರಾಯಸ್ವಾಮಿ ತಾನೇ ಗುಳುಂ ಮಾಡಿಬಿಟ್ಟಿದ್ದರು. ಕೊನೆಗೆ ದೊಡ್ಡಗೌಡರು ಈ ಪ್ರಕರಣದ ವಿಚಾರಣೆ ನಡೆಸಿ ಸಚಿವರು ಬಚ್ಚಿಟ್ಟುಕೊಂಡಿದ್ದ ಬಾಕಿ ಮೊತ್ತವನ್ನು ವಶಪಡಿಸಿಕೊಂಡು ತಮ್ಮ ಗೃಹ ಖಜಾನೆಗೆ ತುಂಬಿಕೊಂಡಿದ್ದಾರೆ. ಕೋ-ಜಾ ಸರ್ಕಾರದ ಒಂದು ವರ್ಷದ ಆಳ್ವಿಕೆಯಲ್ಲಿ ಇಂತವೇ ಜನರ ಗಮನಕ್ಕೆ ಬಾರದ ಹತ್ತಾರು ಪ್ರಕರಣಗಳಿವೆ.



ಸಾಲ ಮನ್ನಾ, ಸಾರಾಯಿ-ಲಾಟರಿಗೆ ಕನ್ನ

ಹೊಸ ಸರ್ಕಾರದ 'ಕರ್ನಾಟಕ ಅಭಿವೃದ್ಧಿ ರಂಗ'ದ ಪ್ರಣಾಳಿಕೆಯಲ್ಲಿ ನೂರೆಂಟು ಬೆಣ್ಣೆಮಾತುಗಳಿವೆಯಾದರೂ ಹಾಲಿ ಸರ್ಕಾರದ ಪೂರ್ಣ ಗಮನವಿರುವುದು ಬೆಂಗಳೂರು ನಗರದ ಮೇಲೆ ಮಾತ್ರ. ರಿಂಗ್‌ರಸ್ತೆಗಳ ನಿರ್ಮಾಣ, ಬಿಡದಿ, ಸಾತನೂರು ಟೌನ್‌ಶಿಪ್‌ಗಳು, ನೀರು, ವಿದ್ಯುತ್, ಚರಂಡಿ, ಕೈಗಾರಿಕೆ ಹೀಗೆ ಎಲ್ಲವೂ ಮತ್ತೆ ಬೆಂಗಳೂರಿನ ಸುತ್ತಲೇ ಗಿರಕಿ ಹೊಡೆಯುತ್ತಿವೆ. ಹೊಸ 'ಗ್ರೇಟರ್ ಬೆಂಗಳೂರು' ಪ್ಲಾನ್ ಅಂತೂ ಗೌಡರ ಕುಟುಂಬದ ರಿಯಲ್ ಎಸ್ಟೇಟ್ ವ್ಯವಹಾರದ ವಿಸ್ತರಣೆಯಂತಿದೆ.




ರೈತರ ಸಾಲ ಮನ್ನಾ ಬಗ್ಗೆ ಮುಖ್ಯಮಂತ್ರಿ ಕುಮಾರಸ್ವಾಮಿ ಈಗ ವಿಪರೀತ ಮಾತನಾಡುತ್ತಿದ್ದಾರೆ. ಆದರೆ ಯಾವ ಬಾಬ್ತಿನ, ಯಾವ ಬ್ಯಾಂಕಿನ ಸಾಲ ಮನ್ನಾ, ಅದೇನು ಬೆಳೆ ಸಾಲವೊ, ಜಮೀನು ಅಭಿವೃದ್ಧಿ ಸಾಲವೋ, ಬೋರ್‌ವೆಲ್ ಸಾಲವೋ ಎಂಬುದೇ ಗೊತ್ತಾಗುತ್ತಿಲ್ಲ. ಇಷ್ಟಕ್ಕೂ ಇವತ್ತಿನ ರಿಸರ್ವ್ ಬ್ಯಾಂಕ್, ನಬಾರ್ಡ್ ಹಾಗೂ ಐಎಂಎಫ್ ನಿಯಮಗಳು ಯಾವ ಸಾಲ ಮನ್ನಾಗೂ ಒಪ್ಪಿಗೆ ನೀಡುವುದಿಲ್ಲ. ಅಂದರೆ ಬಜೆಟ್‌ನಲ್ಲಿ ಲಭ್ಯವಿರುವ ಹಣವನ್ನು ನೇರವಾಗಿ ಸಾಲ ಮನ್ನಾಗೆ ಬಳಸಿದರೆ ಅಭಿವೃದ್ಧಿ ಕಾರ್ಯಕ್ಕೆ ಹಣವಿಲ್ಲದಂತಾಗುತ್ತದೆ. ಅದಕ್ಕೆ, ಈಗ ಈ ಕೊರತೆ ತುಂಬಿಕೊಳ್ಳಲು ತೆರಿಗೆ ಹೆಚ್ಚಿಸುವ ಮಾತಾಡಿದ್ದಾರೆ ಹಣಕಾಸು ಸಚಿವ ಯಡಿಯೂರಪ್ಪ.

ಗೌಡಾ ಕುಟುಂಬದ ಒಂದು ವರ್ಷದ ಸಾಧನೆ

ಸರ್ಕಾರದ ಸಾಧನೆ ಪಾತಾಳದಲ್ಲಿದೆ. ರೈತರ ಸ್ಥಿತಿ ದಯನೀಯವಾಗೇ ಇದೆ. ಸಿಟಿಗಳಲ್ಲೂ ಜನಸಾಮಾನ್ಯರ ಜೀವನ ಅಸಹನೀಯವಾಗೇ ಮುಂದುವರೆದಿದೆ. ಆದರೆ ಇಷ್ಟೆಲ್ಲಾ 'ಇಲ್ಲ'ಗಳ ನಡುವೆ ಅಭೂತಪೂರ್ವ ಸಾಧನೆ ಮಾಡಿರುವವರು ಗೌಡರ ಕುಟುಂಬದ ಸದಸ್ಯರು ಮಾತ್ರ.

150 ಕೋಟಿ ಲಂಚ ಪ್ರಕರಣದ ಬೆನ್ನ ಹಿಂದೆಯೇ ಲಂಕೇಶ್ ಬಯಲಿಗೆಳೆದ ಗೌಡ ಸಂತಾನದ ಭ್ರಷ್ಟ ಸಾಧನೆಗಳಿವು.



* ಬಿಎಸ್‌ಕೆ ಟ್ರೇಡಿಂಗ್ ಕಂಪನಿ ಹೆಸರಿನಲ್ಲಿ ನೂರಾರು ಕೋಟಿ ಬೆಲೆಯ ಅದಿರು ಲೂಟಿ.
* ಗೌಡರ ಪುತ್ರಿಯರಾದ ಶೈಲಜಾ-ಅನಸೂಯರಿಂದ 30 ಕೋಟಿ ಬೆಲೆಯ ಆಸ್ತಿ ಖರೀದಿ.
* ಗೌಡರ ಸೊಸೆ ಕವಿತಾರಿಂದ 300 ಎಕರೆ ಭೂ ಖರೀದಿ.
* ಗೌಡ ಕುಟುಂಬದ ಶಾಖಾಂಬರಿ ಕಂಪನಿಯಿಂದ ಕೋಟ್ಯಂತ ರೂಪಾಯಿ ಅವ್ಯವಹಾರ.
* ಗೌಡರ ಪುತ್ರಿಯರು-ಸೊಸೆಯಂದಿರೇ ವೈಟ್‌ಫೀಲ್ಡ್ ಬಳಿಯ ಆಸ್ತಿ ಮಾಲೀಕರೆಂಬುದು ಸಾಬೀತು.
* ಕುಮಾರಸ್ವಾಮಿ ಮಗ ನಿಖಿಲ್ ಗೌಡನ ನಡುರಾತ್ರಿ ರೌಡಿಸಂ ಹಲ್ಲೆ.
* ಇನ್ನುಳಿದ ಅಧಿಕಾರಾವಧಿಯೊಳಗೆ ಈ ಭ್ರಷ್ಟ ಕುಟುಂಬದಿಂದ ಇಂತದ್ದೇ ಇನ್ನಷ್ಟು ಸಾಧನೆಗಳನ್ನು ನಿರೀಕ್ಷಿಸಲು ಏನಡ್ಡಿಯಿಲ್ಲ.

ಸಾಲಮನ್ನಾದ ಎಕನಾಮಿಕ್ಸ್ ಏನೇ ಇರಲಿ ಆದರ ಗೌಡರ ಕುಟುಂಬ ಈಗ ರೈತರ ಸಾಲ ಮನ್ನಾ ವಿಚಾ ಎತ್ತುತ್ತಿರುವುದೇ ಓಟ್‌ಬ್ಯಾಂಕಿಗಾಗಿ. ಕರ್ನಾಟಕದಲ್ಲಿ ಜೆಡಿಎಸ್ ವೇಗವಾಗಿ ತನ್ನ ನೆಲೆ ಕಳೆದುಕೊಳ್ಳುತ್ತಿದೆ. ಲಿಂಗಾಯತರೆಲ್ಲಾ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಹಂಚಿಹೋಗುತ್ತಿದ್ದಾರೆ ಇನ್ನು ಹಿಂದುಳಿದ ವರ್ಗಗಳು, ದಲಿತರು, ಮುಸ್ಲಿಮರೆಲ್ಲಾ ಜೆಡಿಎಸ್‌ನಿಂದ ದೂರವಾಗುತ್ತಿದ್ದಾರೆ. ಅವರಿಗೆ ಕಾಂಗ್ರೆಸ್ ಬಿಟ್ಟರೆ ಬೇರೆ ಆಯ್ಕೆಯೂ ಕಾಣುತ್ತಿಲ್ಲ ಇನ್ನು ಒಕ್ಕಲಿಗರೆಲ್ಲರೂ ಗೌಡರ ಕುಟುಂಬದ ಹಿಂದೆ ಹೋಗುವಷ್ಟು ಗ ಕೆಟ್ಟಿಲ್ಲ, ಸಿಟಿ ಜನಕ್ಕೆ ಗೌಡರ ಬಗ್ಗೆ ಅಸ ಬಿಟ್ಟರೆ ಬೇರಿನ್ನಾವ ಅಭಿಪ್ರಾಯವೂ ಉಳಿದಿಲ್ಲ, ತಮ್ಮ ಬೆಂಬಲಿಗ ಸಮೂ ಹೀಗೆ ಕರಗಿ ಹೋಗುತ್ತಿರುವುದನ್ನು ನೋಡಿ ಗಾಭರಿಯಾಗಿರುವ ದೇವೇ ಗೌಡರೇ ಈಗ ಸಾಲಮನ್ನಾ ನಾಟ ಚಾಲೂ ಮಾಡಿದ್ದಾರೆ. ಆ ಮೂಲ ವಾದರೂ ಗ್ರಾಮೀಣ ಪ್ರದೇಶಗಳ ಜೆಡಿಎಸ್‌ಗೆ ಜನಬೆಂಬಲ ಪಡೆಯು ದುರಾಲೋಚನೆ ಅವರದ್ದು.


ಸಾಲಮನ್ನಾ ಆಗಬೇಕೊ ಬೇಡವೋ ಎಂದ ಯಡ್ಡಿ-ಕುಮಾರಸ್ವಾಮಿ ಹೀಗೆ ಯಾರ್ಯಾರದ್ದೋ ಅನುಮತಿ ಬೇಕಿದ್ದರೆ ಕಾಯಲಿ, ಆದರೆ ಯಾರ ಅಪ್ಪಣೆಗೂ ಕಾಯ ಈಗಿಂದೀಗಲೇ ಸಾರಾಯಿ ಹಾಗೂ ಲಾಟರಿ ನಿಷೇಧಿಸ ಏನಡ್ಡಿ? ಬೇರೇನೂ ಅಲ್ಲ, ಪ್ರಾಮಾಣಿಕ ನಿಲುವಿರದಿರುವು ಅಡ್ಡಿ ಅಷ್ಟೇ.

ಒಂದು ಕಡೆ ಕುಮಾರಸ್ವಾಮಿ ಸಾರಾಯಿ ನಿಷೇಧ ಮಾತಾಡುತ್ತಿದ್ದರೆ ಮತ್ತೊಂದೆಡೆಯಿಂದ ಸಚಿ ರಾಮಚಂದ್ರೇಗೌಡ ಲಾಟರಿ ನಿಷೇಧಿಸುವ ಬೆದರಿ ಹಾಕುತ್ತಿದ್ದಾರೆ. ರಾಜಕಾರಣಿಗಳ ಇಂತಾ ವರಸೆಗಳ ಕಂಡವರೆಲ್ಲಾ ಹೇಳುವುದೇನೆಂದರೆ 'ಹಫ್ತಾ ವಸೂ ಮಾಡಿಕೊಳ್ಳಲ್ಲಷ್ಟೇ ಈ ನಿಷೇದರ ಗುಮ್ಮ ತೋರಿಸಲಾಗುತ್ತಿ ಎಂದು.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಒಂದು ವರ್ಷ ಪೂರೈಸಿದ್ದು ಗೌಡರ ಕುಟುಂಬಕ್ಕೆ ಜಾಕ್‌ಪಾ ಹೊಡೆದಂತಾಗಿದೆ. ಮುಸ್ಲಿಮರ ವಿರುದ್ಧ ದಾ ಮುಂದುವರೆಸಲು ಚಡ್ಡಿಗಳಿಗೆ ಅವಕಾಶ ಕೊಟ್ಟು ತಾ ಸಾರ್ವಜನಿಕ ಹಣವನ್ನು ಲೂಟಿ ಹೊಡೆದು ತ ಶ್ರೀಮಂತಿಕೆ ಹೆಚ್ಚಿಸಿಕೊಂಡಿರುವ ಗೌಡರ ಕುಟುಂ ಕರ್ನಾಟಕದಲ್ಲಿ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿ ಇವರ ಕುಟುಂಬ ರಾಜಕೀಯದ ಪಾಳೇಗಾರಿಕೆ, ಭ್ರಷ್ಟಾಚಾ ಅಬ್ಬರದಲ್ಲಿ ಹಳ್ಳಿಗಾಡಿನ ರೈತರ ದಮನಿತರ ಸಂಕಷ್ಟಗ ಯಾರ ಕಿವಿಗೂ ಬೀಳದಂತಾಗಿವೆ. ಹಾಲಿ 34 ಜ ಸಚಿವ ಸಂಪುಟದಲ್ಲಿ 11 ಲಿಂಗಾಯತರು, 9 ಒಕ್ಕಲಿಗ ತಲಾ ಒಬ್ಬ ಬ್ರಾಹ್ಮಣ ಹಾಗೂ ಶೆಟ್ಟರಿದ್ದಾರೆ. ಅಂದರೆ ಸಚಿವರು ಬಲಿಷ್ಠ ಜಾತಿಗಳವರೇ.

ಪ್ರಮುಖ ಖಾತೆ, ಹುದ್ದೆಗಳಿಗೆಲ್ಲಾ ಒಕ್ಕಲಿ ಲಿಂಗಾಯತರನ್ನಷ್ಟೇ ತಂದು ಕೂರಿಸಲಾಗಿದೆ. ಇವರ ಪಕ್ಷದಲ್ಲಿರುವ ಮಹಿಳೆಯರಿಗೇ ಕಿಲುಬು ಕಾ ಅಧಿಕಾರವನ್ನು ನೀಡದ ಕೋ-ಜಾಗಳು ತಮ್ಮ ಗಂಡಸ್ತನ ಮೆರೆದಿದ್ದಾರೆ.

ಈ ಸರ್ಕಾರಕ್ಕೆ ಒಂದು ವರ್ಷವಾಗಿದ್ದರ ಬಗ್ಗೆ ಅ ಸಡಗರವಾಗಿರುವುದು ಕೇವಲ ಚೆಡ್ಡಿ ಪತ್ರಿಕೆಗಳಿಗೆ ಮ ಇವರೆಲ್ಲಾ ಕೋಟ್ಯಂತರ ರೂಪಾಯಿ ಜಾಹೀರಾತು ಜೇಬಿಗಿಳಿಸಿಕೊಂಡು ಸರ್ಕಾರವನ್ನು ಹ ಹೊಗಳುತ್ತಿದ್ದಾರೆ.



ಹಿಂದೂ ಸಮಾವೇಶ ಕೋಟ್ಯಂತರ ರೂಪಾಯಿ ಗುಳುಂ

ಈ ಹಿಂದೂ ವೀರರಂತೂ ಜನರಿಗೆ ಸರಿಯಾದ ಲೆಕ್ಕ ಕೊಡುವ ಜಾಯಮಾನದವರು ಮೊದಲೇ ಅಲ್ಲ. ಹಾಗಾಗಿ ವಸೂಲಿ-ಖರ್ಚಿನ ನಂತರ ಉಳಿದ ಕೋಟ್ಯಂತರ ರೂಪಾಯಿಗಳನ್ನು ಯಾವ ಭಾರತ ಮಾತೆಯ ಪುತ್ರ ಕದ್ದಿದ್ದಾನೆಂಬ ಲೆಕ್ಕ ಅನ್ಯರಿಗಿರಲಿ, ಸ್ವತಃ ಸಂಘ ಪರಿವಾರದವರಿಗೇ ಗೊತ್ತಾಗುತ್ತಿಲ್ಲ.

ಹೆಸರಿಗದು ಹಿಂದೂ ಸಮಾವೇಶ.......

ಅದೂ ಅಂತಿಂಥ ಸಮಾವೇಶಗಳಲ್ಲ, ವಿರಾಟ್ ಸಮಾವೇಶಗಳು. ಹಾಗಂದ ಮೇಲೆ ಭಾರಿ ಜನಸ್ತೋಮ, ಭರ್ಜರಿ ಮೆರವಣಿಗೆ, ಅಭೂತಪೂರ್ವ ಸಭೆ, ಓತಪ್ರೋತ ಭಾಷಣಗಳೆಲ್ಲಾ ಇದ್ದೇ ಇರಬೇಕು ತಾನೆ, ಹಾಗೆ ನಡೆದಿವೆ ಕೂಡ. ಈ ಬಗ್ಗೆ ಪತ್ರಿಕೆ, ಟಿವಿಗಳಲ್ಲೂ ಭಾರಿ ಸುದ್ದಿಗಳು ಪ್ರಕಟವಾಗುತ್ತಿವೆ.

ಆದರೆ ಇದೇ ಹಿಂದೂ ವಿರಾಟ್ ಸಮಾವೇಶಗಳನ್ನು ನಡೆಸುವ ನೆಪದಲ್ಲಿ ಕರ್ನಾಟಕದಾದ್ಯಂತ ಮುಗ್ಧ ಜನರಿಂದ ಹತ್ತಾರು ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿ ಗುಳುಂ ಮಾಡುತ್ತಿರುವ ಸುದ್ದಿ ಮಾತ್ರ ಗುಟ್ಟಾಗೇ ಉಳಿದಿದೆ. ಕಾಸು ಕೊಡೊ ಕೋಡಂಗಿಗಳಿರುವಾಗ ಇಸ್ಕೋಳ್ಳೋ ಈರಭದ್ರರಿಗೇನು ಕಮ್ಮಿ ಎಂಬಂತಾಗಿದೆ ಈ ಸಮಾವೇಶಗಳ ಹಣಕಾಸಿನ ಅವ್ಯವಹಾರಗಳು.

ಸಂಘ ಪರಿವಾರವು ಈ ವಿರಾಟ್ ಹಿಂದೂ ಸಮಾವೇಶಗಳನ್ನು ನಡೆಸುತ್ತಿರುವ ಅಸಲಿ ಉದ್ದೇಶವೇ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಕನಿಷ್ಠ 15 ಸಾವಿರ 'ಹಿಂದೂ ಓಟ್ ಬ್ಯಾಂಕ್' ಅನ್ನು ನಿರ್ಮಿಸಿಕೊಳ್ಳುವ ದುರುದ್ದೇಶದಿಂದ. ಆದರೆ ಸಂತೆ ಸೇರುವ ಮೊದಲೇ ಗಂಟುಕಳ್ಳರು ಬಂದು ಸೇರುವಂತೆ ಒಂದೆಡೆ ಈ ಸಮಾವೇಶಗಳ ಪ್ಲಾನ್ ನಡೆಯುತ್ತಿರುವಾಗಲೇ ಸಂಘ ಪರಿವಾರದ ಧನದಾಹಿಗಳು ಇದೇ ನೆಪದಲ್ಲಿ ದುಡ್ಡು ದೋಚಲು ಮಾಸ್ಟರ್ ಪ್ಲಾನ್ ಮಾಡಿಕೊಂಡಿದ್ದರು. ಅದರಂತೆ ಈಗ ಕೋಟ್ಯಂತರ ರೂಪಾಯಿ ಗುಳುಂ ಮಾಡಿ ಏನೂ ಅರಿಯದವರಂತೆ 'ಭಾರತ್ ಮಾತಾಕೀ ಜೈ' ಎಂದು ಕಿರುಚುತ್ತಾ ಓಡಾಡಿಕೊಂಡಿದ್ದಾರೆ. ಬೆಂಗಳೂರು, ಮಂಡ್ಯ, ಮೈಸೂರು, ಮಂಗಳೂರು, ಶಿವಮೊಗ್ಗ-ಹೀಗೆ ಹತ್ತಾರು ಕಡೆ ನಡೆದ ಸಮಾವೇಶಗಳಲ್ಲಿ ವಸೂಲಾದ ಹಣವೆಷ್ಟು, ಖರ್ಚಾಗಿದ್ದೆಷ್ಟು ಎಂಬ ಲೆಕ್ಕ ಯಾರಿಗೂ ಗೊತ್ತಾಗುತ್ತಿಲ್ಲ. ಈ ಹಿಂದೂ ವೀರರಂತೂ 'ಜನರಿಗೆ ಸರಿಯಾದ ಲೆಕ್ಕ ಕೊಡುವ ಜಾಯಮಾನದವರು ಮೊದಲೇ ಅಲ್ಲ. ಹಾಗಾಗಿ ವಸೂಲಿ-ಖರ್ಚಿನ ನಂತರ ಉಳಿದ ಕೋಟ್ಯಂತರ ರೂಪಾಯಿಗಳನ್ನು ಯಾವ ಭಾರತ ಮಾತೆಯ ಪುತ್ರ ಕದ್ದಿದ್ದಾನೆಂಬ ಲೆಕ್ಕ ಅನ್ಯರಿಗಿರಲಿ, ಸ್ವತಃ ಸಂಘ ಪರಿವಾರದವರಿಗೇ ಗೊತ್ತಾಗುತ್ತಿಲ್ಲ.

1 ರೂ. ಬಾವುಟ 6 ರೂ.ಗೆ ಮಾರಾಟ

ಕರ್ನಾಟಕದಲ್ಲಿ ಬಿಜೆಪಿ, ಆರ್‌ಎಸ್‌ಎಸ್, ಭಜರಂಗದಳ, ಸಂಘ ಪರಿವಾರದವರ ಯಾವುದೇ ಸಭೆ ಸಮಾರಂಭಗಳು, ರ್‍ಯಾಲಿಗಳು ನಡೆಯಲಿ ಅವುಗಳ ಬ್ಯಾನರ್, ಬಂಟಿಂಗ್ಸ್, ಕೇಸರಿ ಚೆಡ್ಡಿ ಬಾವುಟಗಳೆಲ್ಲಾ ಸಪ್ಲೈ ಆಗುವುದು ಬೆಂಗಳೂರಿನ ಕಾಟನ್‌ಪೇಟೆ ಮೈನ್ ರೋಡಿನಲ್ಲಿರುವ 'ಮಾಸ್ಟರ್ ಇನ್‌ಸುಲೇಷನ್' ಕಂಪನಿಯಿಂದ. ಇದು ಬಿಜೆಪಿ ಲೀಡರ್ ಶ್ರೀಮಾನ್ ಸುಬ್ಬಣ್ಣನವರು ನಡೆಸುತ್ತಿರುವ ಸೈಡ್ ವ್ಯವಹಾರ.

ಒಂದು ಕಾಲದಲ್ಲಿ ಕುಚೇಲನಂತಿದ್ದ ಸುಬ್ಬಣ್ಣ ಎಲೆಕ್ಷನ್ ಬಂದಾಗಲೆಲ್ಲಾ ಇಡೀ ಕರ್ನಾಟಕಕ್ಕೆ ಬಿಜೆಪಿಯ ಬ್ಯಾನರ್, ಪೋಸ್ಟರ್, ಕರಪತ್ರಗಳನ್ನೆಲ್ಲಾ ಮುದ್ರಿಸುವ ಕಾಂಟ್ರ್ಯಾಕ್ಟ್ ಪಡೆದೇ ಇವತ್ತು ಕುಬೇರನಾಗಿ ಹೋಗಿದ್ದಾನೆ. ಚೆಡ್ಡಿ ಚತುರರೆಲ್ಲಾ ಒಂದು ಕಡೆ ರಾಮಮಂದಿರ, ಇಟ್ಟಿಗೆ ಯಾತ್ರೆ, ಗೋರಕ್ಷಣೆ ಎಂದು ಜನರಿಗೆ ಸಗಣಿ ತಿನ್ನಿಸುತ್ತಿದ್ದರೆ ಸುಬ್ಬಣ್ಣ 'ಮಾಸ್ಟರ್ ಇನ್‌ಸುಲೇಷನ್' ಅಂತ ಅಪದ್ಧಗಳನ್ನೆಲ್ಲಾ ಪ್ರಿಂಟ್ ಮಾಡಿಮಾಡಿಯೇ ಕಾಸು ಮಾಡಿಕೊಂಡು ಬಂದಿದ್ದಾರೆ.

ಅದೇರೀತಿ ಈಗ ಹಿಂದೂ ಸಮಾಜೋತ್ಸವದ ಡೀಲುಗಳೂ ನಡೆಯುತ್ತಿವೆ. ಆದರೆ ಈ ಬಾರಿ ಜಾಸ್ತಿ ಲಾಭ ಮಾಡುತ್ತಿರುವವರು ಮಾಸ್ಟರ್ ಇನ್‌ಸುಲೇಷನ್‌ನವರಲ್ಲ, ಬದಲಾಗಿ ಆಯಾ ಊರುಗಳ ಹಿಂದೂ ಸಮಾಜೋತ್ಸವದ ಚೆಡ್ಡಿ ಲೀಡರುಗಳು.

ಒಂದು ಉದಾಹರಣೆ ಮೂಲಕ ಹೇಳಬೇಕೆಂದರೆ ಮಾಸ್ಟರ್ ಇನ್‌ಸುಲೇಷನ್‌ನವರು ಎರಡು ಬದಿಯಿಂದ ಒಂದು ಕೇಸರಿ ಬಾವುಟಕ್ಕೆ, 2 ರೂ. 25 ಪೈಸೆ. ಪ್ಲಸ್ ಬಾವುಟ ನೇತು ಹಾಕುವ ಸಣ್ಣ ಸ್ಟಿಕ್‌ನ ಕೋಲಿಗೆ ಎಂಟಾಣೆಯಂತೆ ಲೆಕ್ಕ, ಹಾಕಿ ಒಟ್ಟು ಎರಡೂ ಮುಕ್ಕಾಲು ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಈ ಕಿಲಾಡಿ ಚೆಡ್ಡಿಗಳು ಸಮಾವೇಶ ನಡೆಯುವ ಊರಿನ ಅಂಗಡಿಗಳು ಮನೆಮನೆಗಳಿಗೆ ತೆರಳಿ ಇದೇ ಬಾವುಟವನ್ನು ಮಾರಿದ್ದು 6 ರೂ.ಗೆ! ಇದೇರೀತಿ 'ಹಿಂದೂ ಎದ್ದರೆ ದೇಶ ಎದ್ದೀತು', 'ಸ್ನೇಹಕ್ಕೆ ಬದ್ಧ ಸಮರಕ್ಕೂ ಸಿದ್ಧ' ಮುಂತಾದ ಬ್ಯಾನರ್‌ಗಳನ್ನು 60 ರೂ.ಗೆ ರೆಡಿ ಮಾಡಿಸಿ ಮುಗ್ಧ ಬೆಂಬಲಿಗರಿಗೆ 250 ರೂ.ಗೆ ಮಾರಿಕೊಂಡಿದ್ದಾರೆ. ಅಂದರೆ 400% ಲಾಭ!!

ಯಾವನೋ ಪೆದ್ದು ಅಂಗಡಿ ಮಾಲೀಕ, ಮುಗ್ಧ ಗೃಹಿಣಿಯರನ್ನೆಲ್ಲಾ ಈ ಬಾವುಟ-ಬ್ಯಾನರ್‌ಗಳನ್ನು ಅವರವರ ಮನೆ-ಅಂಗಡಿ ಮುಂದೆ ನೇತು ಹಾಕಲು ಗೋಗರೆದು ಒಪ್ಪಿಸಿ ಒಂದಕ್ಕೆರಡು ದುಡ್ಡು ಕಿತ್ತು ನಾಪತ್ತೆಯಾಗಿದ್ದಾರೆ. ಈ ಭಾರತ ಮಾತೆಯ ಪುತ್ರರು. ಕರ್ನಾಟಕದಲ್ಲಿ ಇದುವರೆಗೂ ನಡೆದಿರುವ ಡಜನ್‌ಗಟ್ಟಲೆ ಹಿಂದೂ ಸಮಾವೇಶಗಳಲ್ಲಿ ಇಂಥ 10 ಲಕ್ಷ ಬಾವುಟಗಳು ಹಾಗೂ 1 ಲಕ್ಷ ಬ್ಯಾನರ್‌ಗಳನ್ನು ಬಳಸಲಾಗಿದೆ.

ಇದರಲ್ಲಿ ದೋಚಲಾದ ದುಡ್ಡೆಷ್ಟಿರಬೇಕೆಂದು ಲೆಕ್ಕ ಹಾಕಿ ನೋಡಿ.

ರಾಮನ ಲೆಕ್ಕ- ಕೃಷ್ಣನ ಲೆಕ್ಕ

ಹಿಂದೂ ಸಮಾವೇಶದ ಹೆಸರಲ್ಲಿ ವ್ಯಾಪಾರಿಗಳು, ನೌಕರರು, ರಾಜಕಾರಣಿಗಳಿಂದ ವಸೂಲಿ ಮಾಡಿರುವ ದುಡ್ಡು 50 ಕೋಟಿಗೂ ಹೆಚ್ಚೆಂದು ಹೇಳಲಾಗಿದೆ. ಆದರೆ ಯಾವುದಕ್ಕೂ ರಸೀದಿ ಕೊಡದಿರುವುದು, ಖರ್ಚಿನ ಲೆಕ್ಕ ತೋರಿಸದಿರುವುದೇ ವಿಶೇಷ. ಪುಣ್ಯದ ಕೆಲಸ ಮಾಡುವಾಗ ಎಡಗೈಲಿ ಕೊಟ್ಟದ್ದು ಬಲಗೈಗೂ ಗೊತ್ತಾಗಬಾರದೆಂಬ ಮಾತಿದೆಯಲ್ಲ. ಸಂಘ ಪರಿವಾರಿಗಳದ್ದೂ ಅದೇ ಸೂತ್ರ. ಆದರೆ ತಮಾಷೆ ಸಂಗತಿ ಏನೆಂದರೆ ಈ ಸಮಾವೇಶಗಳಿಗೆ ಒರಿಜಿನಲ್ ಚೆಡ್ಡಿಗಳಲ್ಲದವರನ್ನು ಸ್ವಾಗತ ಸಮಿತಿ ಅಧ್ಯಕ್ಷ ಸದಸ್ಯ ಹೀಗೆ ಏನೇನೊ ಪದವಿಗೆ ತರಲಾಗಿತ್ತು. ಆದರೆ ಕನಿಷ್ಠ ಅವರಿಗೂ ಈಗ ವಸೂಲಿ-ಖರ್ಚಿನ ಲೆಕ್ಕ ಕೊಡದೆ ಕತ್ತಲಲ್ಲೇ ಇಡಲಾಗಿದೆ. ಜೇನು ಕಿತ್ತವನು ಕೈ ನೆಕ್ಕದಿರುತ್ತಾನೆಯೇ ಎಂಬಂತಾಗಿದೆ ಇವರ ಲೆಕ್ಕ.

-ವರದಿಗಾರ

ಬ್ರಾಹ್ಮಣ ಸ್ವಾಮಿಗಳಿಗೆ ಸಿಂಹಾಸನ, ಶೂದ್ರರಿಗೆ ಆರ್ಡಿನರಿ ಕುರ್ಚಿ



ಮೊನ್ನೆ ಮಂಗಳೂರಿನ ಹಿಂದೂ ಸಮಾವೇಶ ಮುಗಿದ ಕೂಡಲೇ ಕೊಲ್ಲಿದ ಶೂದ್ರ ಮಠಾಧೀಶರು ಒಂದು ಪತ್ರಿಕಾಗೋಷ್ಠಿ ಕರೆದು 'ಬ್ರಾಹ್ಮಣ-ಶೂದ್ರ ಮಠಾಧೀಶರೆಂಬ ಭೇದಭಾವ, ಮಾಡಿದ ಬಗ್ಗೆ ಗಲಾಟೆ ಮಾಡಿದ್ದಾರೆ. ಪಾಪ ಯಾರದ್ದೋ ಮಾತನ್ನು ನಂಬಿ ಸಮಾವೇಶಕ್ಕೆ ಹೋಗಿದ್ದ ಕೊಲ್ಲದಸ್ವಾಮಿ ತಾವೂ ಭಾಷಣ ಮಾಡಬೇಕೆಂದು ಕೇಳಿದಾಗ ಚೆಡ್ಡಿಗಳು ಅವಕಾಶ ಕೊಡದೆ ಮೂಲೆಯಲ್ಲಿ ಕೂರಿಸಿದ್ದಾರೆ. ಇದಿಷ್ಟೇ ಅಲ್ಲ, ಬೇರೆ ಊರುಗಳಲ್ಲೂ ಬ್ರಾಹ್ಮಣ ಮಠಾಧೀಶರು ಬಂದರೆ ಸಿಂಹಾಸನದಂತ ಕುರ್ಚಿ ಹಾಕಿಸಿ ಲಿಂಗಾಯತ, ಒಕ್ಕಲಿಗ, ಕುರುಬ ಸ್ವಾಮಿಗಳನ್ನು ಆರ್ಡಿನರಿ ಕುರ್ಚಿಗಳಲ್ಲಿ ಕೂರಿಸಲಾಗಿದೆ. ಬೆಂಗಳೂರಿನಲ್ಲೂ ರಂಗರಾಜನ್ ಗುರೂಜಿ ಎಂಬುವನಿಗೆ ಸಿಂಹಾಸನ, ಗಂಟಲು ಹರಿದುಕೊಂಡು ಭಾಷಣ ಮಾಡಿದ ವಿಭೂತಿಪುರದ ಮಹಾಂತಲಿಂಗ ಶಿವಾಚಾರ್ಯ ಹಾಗೂ ಸದಾನಂದಸ್ವಾಮಿ ಮುಂತಾದ ವೀರಶೈವ ಸ್ವಾಮಿಗಳಿಗೆ ಲೋಕಲ್ ಕುರ್ಚಿ.... ಹೀಗೆ ತಾರತಮ್ಯ ಮಾಡುವ ಮೂಲಕ ಬ್ರಾಹ್ಮಣ ಮಠಾದೀಶರೆದುರು ಲಿಂಗಾಯತ-ಒಕ್ಕಲಿಗ ಮಠಾಧೀಶರು ಎರಡನೇ ದರ್ಜೆಯವರೆಂಬ ಮೆಸೇಜನ್ನು ಚೆಡ್ಡಿಗಳು ಬಿತ್ತರಿಸುತ್ತಿದ್ದಾರೆ.

ಇಷ್ಟಕ್ಕೂ ಬಸವಣ್ಣ, ಕನಕದಾಸರ ಅನುಯಾಯಿಗಳೆಂದು ಹೇಳಿಕೊಳ್ಳುವ ಈ ಶೂದ್ರ ಸ್ವಾಮಿಗಳು ಬ್ರಾಹ್ಮಣರ ಅಜೆಂಡಾ ಆಗಿರುವ ಈ ಹಿಂದೂ ಸಮಾಜೋತ್ಸವಕ್ಕೆ ಹೋಗುತ್ತಿರುವುದು ಮೊದಲನೇ ತಪ್ಪಲ್ಲವೆ?

ಧಾರವಾಡದ ಕುರುಬ ಮಠಾಧೀಶರಾದ ಬಸವರಾಜ ದೇವರು ಇಂಥ ಮೇಲ್ಜಾತಿ ಹಿಂದೂ ಸಮಾವೇಶಗಳನ್ನು ಬಹಿಷ್ಕರಿಸಿದ್ದೇ ಅಲ್ಲದೆ ಕನಕಪೀಠದ ಹೊಸ ಧರ್ಮಗುರು ನಿರಂಜನಾನಂದ ಪುರಿ ಸ್ವಾಮಿ ಕೆಲ ಸಮಾವೇಶಗಳಲ್ಲಿ ಭಾಗವಹಿಸಿದ್ದನ್ನು ಖಂಡಿಸುತ್ತಿದ್ದಾರೆ.

ಉಡುಪಿಯ ಕನಕಗೋಪುರ ಕೆಡವಿದವರೊಂದಿಗೆ ಈ ನಿರಂಜನಾನಂದ ಪುರಿ ಈಗ ಕೈ ಜೋಡಿಸುತ್ತಿರುವುದಂತೂ ಕುರುಬ ಸಮುದಾಯದೊಳಗೆ ಭಾರಿ ಅಸಮಾಧಾನ ಸೃಷ್ಟಿಸಿದೆ.

ತಿಪಟೂರಿನಲ್ಲಿ ಅಹಿಂದ ತಿರುಗೇಟು

ತಿಪಟೂರಿನಲ್ಲಿ ನಡೆದ ಹಿಂದೂ ಸಮಾಜೋತ್ಸವಕ್ಕೆ ಅಹಿಂದ ಯುವಕರು ಸರಿಯಾದ ತಿರುಗೇಟು ನೀಡಿದ್ದಾರೆ. ಅಲ್ಲಿನ ಸೂರ್ಯ ಪ್ರಕಾಶ್ ಕೋಲಿ ನೇತೃತ್ವದಲ್ಲಿ ವ್ಯಕ್ತವಾದ ಪ್ರತಿರೋಧ ಎಷ್ಟು ತೀವ್ರವಾಗಿತ್ತೆಂದರೆ ಬೆದರಿ ಕಂಗಾಲಾದ ಚೆಡ್ಡಿಗಳು ಕೊನೆಗೆ ಸೂರ್ಯ ಪ್ರಕಾಶ್‌ರನ್ನು ಪೊಲೀಸರು ಬಂಧಿಸಿ ಮೂರು ದಿನ ಕಸ್ಟಡಿಯಲ್ಲಿರಿಸುವಂತೆ ಒತ್ತಡ ತಂದು ನಂತರವೇ ಹಿಂದೂ ಉತ್ಸವ ನಡೆಸಬೇಕಾಗಿ ಬಂತು.



ಹಾಗೆ ನೋಡಿದರೆ ಬ್ರಾಹ್ಮಣಶಾಹಿ ಸಿದ್ಧಾಂತಗಳ ಈ ಹಿಂದೂ ಸಮಾವೇಶಗಳಿಗೆ ಕರ್ನಾಟಕದ ಉದ್ದಗಲಕ್ಕೂ ಪ್ರತಿರೋಧ ವ್ಯಕ್ತವಾಗಿದೆ. ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಸಮತಾ ಸೈನಿಕ ದಳ, ಕವಿರಂ, ದಲಿತ ಸಂಘಟನೆಗಳು ಹಾಗೂ ಪ್ರಗತಿಪರರೆಲ್ಲಾ ಒಗ್ಗೂಡಿ ಬಸವಣ್ಣ, ಬುದ್ಧ, ಅಂಬೇಡ್ಕರ್, ಕನಕದಾಸರ ಭಾವ ಚಿತ್ರಗಳನ್ನು ಚೆಡ್ಡಿಗಳು ದುರ್ಬಳಕೆ ಮಾಡಿಕೊಂಡಿದ್ದನ್ನು ಪ್ರತಿಭಟಿಸಿ ಜನಜಾಗೃತಿ ಮೂಡಿಸಿದ್ದರು. ತಿಪಟೂರಿನಲ್ಲಿ ಇದು ಸ್ವಲ್ಪ ಬಿರುಸಾಗೇ ನಡೆಯಿತು. ಸೂರ್ಯಪ್ರಕಾಶ್, ಫೈಜಲ್ ಮುಂತಾದವರ ನೇತೃತ್ವದಲ್ಲಿ ಪ್ರಗತಿಪರ ಯುವಜನರು ಮನೆಮನೆಗೆ ತೆರಳಿ ಕರಪತ್ರ ವಿತರಿಸಿ ಹಿಂದೂತ್ವದ ಪೊಳ್ಳುತನವನ್ನು ವಿವರಿಸಿದ್ದರು. ಚೆಡ್ಡಿ ಕಾರ್ಯಕರ್ತರು ಬಂದಾಗ ಬಿಡದೆ ಪ್ರಶ್ನಿಸುವ ಪರಿಸ್ಥಿತಿ ಸೃಷ್ಟಿಸಿದ್ದರು. ಸಮಾವೇಶ ನಡೆಯುವ ದಿನ ಚೆಡ್ಡಿಗಳ ಮೆರವಣಿಗೆಗೆ ಅಹಿಂದ ಬಡಾವಣೆಗಳಲ್ಲಿ ತಡೆಯೊಡ್ಡುವ ಸಿದ್ಧತೆಯೂ ನಡೆದಿತ್ತು. ಇದರಿಂದ ಬೆದರಿದ ಚೆಡ್ಡಿಗಳು ಪೊಲೀಸರಿಗೆ ದೂರು ಹೇಳಿ ಅಹಿಂದ ಸಂವರ್ಧನಾ ಸಮಿತಿಯ ಸೂರ್ಯಪ್ರಕಾಶ್ ಕೋಲಿಯನ್ನು preventive detention ನಡಿ ಅರೆಸ್ಟ್ ಮಾಡಿಸಿದ ನಂತರವೇ ತಮ್ಮ ಚೆಡ್ಡಿ ಮೆರವಣಿಗೆ ಮಾಡಿ ಮುಗಿಸಿದ್ದಾರೆ.


ಸೂರ್ಯಪ್ರಕಾಶ್

ತಿಪಟೂರಿನ ವಿಶ್ವಹಿಂದೂ ಪರಿಷತ್ ಮಹದೇವಯ್ಯ ಈ ಮೊದಲೆಲ್ಲಾ ಎಬಿವಿಪಿ ಮೆಂಬರ್ ಆಗಿದ್ದಾತ. ಹಾಗಾಗಿ ಮೇಲ್ನೋಟಕ್ಕೆ ಖಾಕಿ ಚಡ್ಡಿ ಧಾರಣೆ ಮಾಡಿದ್ದರೂ ಒಳಗಡೆ RSS ಚೆಡ್ಡಿ ಬುದ್ಧಿಯೇ ಇವನಲ್ಲಿ ಇನ್ನೂ ಉಳಿದುಕೊಂಡಿದೆ.

ಒಟ್ಟಾರೆ ತಿಪಟೂರಿನ ಪ್ರಗತಿಪರರು ಹಿಂದೂ ಸಮಾವೇಶದ ವಿರುದ್ಧ ಒಂದು ರಚನಾತ್ಮಕ ಪ್ರತಿಭಟನೆ ತೋರಿ ಇತರರಿಗೂ ಮಾದರಿಯಾದರು.

ಕಡಿಗೂ ನಮ್ಮ ಪಟೇಲ್ರ ಮಗನ್ನ ಗಡಿಪಾರು ಮಾಡಿದ್ರು!

ಬಯಲು ಸೀಮೆಯ ಕಟ್ಟೆ ಪುರಾಣ

ತೆನ್ನಸ್ಪಕ್ಕೆ ತಾನೇ ನಗಾಡಿದ ಸೀರ. ನಗುವಿನ ದೆಸೆಯಿಂದ ಕೆಮ್ಮಿಗೆ ತುತ್ತಾಗಿ ಕ್ಯಾಕರಿಸಿ ಉಗಿದ ನಂತರ,

"ಅದ್ಯಾಕ್ಲ ಅಂತ ಮಾತಂದವುನೆ ಕರಗೆ?" ಎಂದ.

"ಏನಂದವುನೊ?" ಎಂದ ಉಗ್ರಿ.

"ಆನೆ ತೋರದದೊಂದಲ್ಲು ತಿನ್ನದು ಬ್ಯಾರೆ ಹಲ್ಲು ಅಂಗೆ ದ್ಯಾವೇಗೌಡ ಅಂದವುನಲ್ಲ ಯಾಕೆ?"

"ಓಹೊಹೊ ಅದಾ? ಕೆಲವು ಪುಂಡಾನೆ ಜಗಳ ಮಾಡಿಕಂಡೊ ಅಥವಾ ಮಸ್ತಿ ಜಾಸ್ತಿಯಾಗ್ಯೋ ಕ್ಯಾರೆ ಮುರಕಂಡು ಬುಡತವೆ. ಆಗ ಉಳಯದೇ ಒಂದು ಕ್ವಾರೆ. ಆ ಒಂದು ಕ್ವಾರೆಲೆ ಮಾಡಬಾರದ ದಾನ್ಲಿ ಮಾಡತದೆ."

"ಕೋಡಮುರುಕ ಯಾವತ್ತು ಅಂಗೆ ಅಲವೆ?"

"ಅಂಗೆ ದ್ಯಾವೇಗೌಡ್ರು ಕೋಡುಮುರ್ಕ ಆನೆಯಂಗೆ ಒಂದೇ ಒಂದು ಕೋಂಬಲ್ಲು ತೋರತರೆ. ಆದ್ರೆ ವಳಗೆ ಕನಿಷ್ಠ ಹದುನಾರಲ್ಲು ತಿಂತಯಿರತವೆ."

"ಅಂಗರಾನಿಗೆ ಹದುನಾರಲ್ಲೆ?" ಎಂದಳು ಜುಮ್ಮಿ.

"ಯಾವನಿಗ್ಗೊತ್ತೆ. ದ್ಯಾವೇಗೌಡರಲ್ಲಂತು ಸದ್ದಿಕೆ ಅಷ್ಟಲೆ ಅಂತ ತಿಳಕಂಡಿದ್ದೀನಿ. ಈಗ ಮೇಲುನೋಟಕ್ಕೆ ಹತ್ತನ್ನರಡು ಹಲ್ಲು ಕಾಣತವೆ."

"ಅವ್ಯಾವ್ರೂ?"

"ದ್ಯಾವೇಗೌಡ್ರು ಗಂಡ ಹೆಂಡತಿ ಸೇರಿ ಯರಡಲ್ಲು ಅನ್ನಕಂಡ್ರೆ, ನಾಕುಜನ ಮಕ್ಕಳು ಅವುರೆಡ್ತಿರು ನಾಕು ಜನ ಸೇರಿ ಎಷ್ಟಾಯ್ತು?"

"ಯರಡೆಣ್ಣುಮಕ್ಕಳೂ ಇದ್ದವಂತಲ್ಲಾ?"

"ಊ ಅವೆ. ಅವು ನಾಕು ಇವೆಂಟು. ಇನ್ನ ಕುಮಾರ, ಬಾಲಣ್ಣ, ರೇವಣ್ಣ ಮಕ್ಕಳು ಯಲ್ಲ ಸೇರಿ ಹೆಚ್ಚುಕಮ್ಮಿ ಹದುನೆಂಟಲ್ಲಾಯ್ತವೆ. ಸದ್ದಿಕೆ ಅವ್ಯಲ್ಲ ತಿಂತಾ ಇರ ಬಹುದು. ಅದ್ಕೆ ಖರ್ಗೆ ದ್ಯಾವೇಗೌಡ ತೋರದೊಂದಲ್ಲು ತಿನ್ನದು ಹದುನಾರಲ್ಲಲಿ ಅಂದಿರದು."

"ಕರಗೆ ಅದಿಕಾರದಲ್ಲಿದ್ದಾಗ ಏನೂ ತಿನ್ನಲಿಲವ್ರೊ?" ಎಂದ ಕಾಳಮಾವ.

"ಬುಟ್ಟದ್ದನೇ? ಅವುನು ತಿಂದವುನೆ. ಅಂಗೆ ನೋಡಿದ್ರೆ ಇತ್ತೀಚಿನ ಸರ್ಕಾರದಲ್ಲಿ ತಿಂದೋರೆಯಿಲ್ಲಕಣ ಮಾವ" ಎಂದ ಉಗ್ರಿ.

"ಮತ್ತೆ ಮಾತಾಡದ್ಯಾಕೆ ಅವುನಿಗೊಂದಲ್ಲು, ಇವುನಿಗೆ ಕ್ವಾವಲ್ಲು, ಅವುನಿಗೆ ಮುರುಕಲ್ಲು ಅಂತವಾ" ಎಂದು ಕಾಳಮಾವ ಸಿಟ್ಟಾದ.

"ಮಾತಿಗೆ ಅಂತ ಮಾತಾಡತರಷ್ಟೆ ಕಣಮಾವ. ಇವತ್ತು ಯಾವ ಮಂತ್ರಿ ಕೈಯಿ ಸ್ವಚ್ಚಗಿದ್ದತೂ?"

"ಆ ಪಟೇಲ್ರ ಮಗ ಮಂತ್ರಿ ಯಾದನೇನ್ಲ?" ಎಂದ ಕಾಳ ಮಾವ.

"ಇಲ್ಲ ದ್ವಡಪ್ಪ, ಅವುನ ಮಂತ್ರಿ ಮಾಡಬೇಕು ಅಂತ ಇದ್ರಂತೆ. ಆದ್ರೆ ಅವುನು ಮಾಡಿರೊ ಎಜುಕೇಷನ್ನು ದ್ಯಾವೇಗೌಡ್ರ ಮಕ್ಕಳಿಗಿಂತ ಜಾಸ್ತಿಯಿತ್ತಂತೆ. ಅದ್ಕೆ ಗಡಿಪಾರು ಮಾಡಿದರಂತೆ" ಎಂದ ವಾಟಿಸ್ಸೆ.

"ಆಹಹ, ಯಸ್ತ ನೋಡೊಂದು ಸುಳ್ಳ."

"ಸುಳ್ಳೆಯಿರಬವುದು ಕಣೊ ಉಗ್ರಿ. ಆದ್ರೆ ಮಹಿಮಾ ಪಟೇಲನ್ನ ಯಾಕೆ ಮಂತ್ರಿ ಮಾಡಲಿಲ್ಲ ಅಂದ್ರೆ ದ್ಯಾವೇಗೌಡ್ರು ಕೊಡೋ ಕಾರಣ ಸುಳ್ಳೆ ಅಲವೆ?"

"ಅದು ನಿಜವೆಯಾ. ಆದ್ರು ಮಹಿಮನಂಥೋನು ಮಂತ್ರಿಯಾಗಲೇ ಬೇಕಿತ್ತು ಕಣೊ."

"ಅಂಥಾ ಇವುನೇನ್ಲ ಅವುನು?" ಎಂದ ಸೀರ.

"ಏ ಅವುನು ಯಲಕ್ಷನ್ ಮಾಡಿದ್ಯಂಗೆ ಗೊತ್ತೆ ಮಾವ? ನಾನು ಯಾವ ಕಾರಣಕು ದುಡ್ನು ಹಂಚದಿಲ್ಲ, ಕುಡಿಯಕ್ಕೂ ಕೊಡದಿಲ್ಲ ಅಂತ ಹಟ ಮಾಡಿದ. ಕಡಿಗೆ ಕಾರ್ಯಕರ್ತರು ತೀರ ಕಡೆಲಿ ಕೊಡನ ಅಂತ ಸಭೆ ಮಾಡಿದ್ರು."

"ಭಾಳ ಡ್ಯೈ ಚುನಾವಣೆ ಕಣೊ ಅವುಂದು" ಎಂದ ವಾಟಿಸ್ಸೆ.

"ನಿನ್ನಂಥೋರಿಗೆ ಅಂಗನ್ನಸ್ತು. ಆದ್ರೆ ಚನ್ನಗಿರಿ ಜನ ಅವುನ ತೀರ್ಮಾನ ಮೆಚ್ಚಕೊಂಡು ಗೆಲ್ಲಿಸಿದ್ರು."

"ಕಡಿಗೂ ಕೊಡ್ಲಿಲ್ಲ ಅನ್ನು?" ಎಂದಳು ಜುಮ್ಮಿ.

"ಇಲ್ಲ ಕಣೆ. ಒಂದೇ ಒಂದು ಕ್ವಟ್ರೆಚೀಲ ಕೊಡ್ಲಿಲ್ಲ', ಹತ್ತು ರೂಪಾಯಿನೂ ಕೊಡ್ಲಿಲ್ಲವಂತೆ. ಇಡೀ ಕರ್ನಾಟಕದಲ್ಲಿ ಆ ತರ ಚುನಾವಣೆ ಮಾಡಿ ಗೆದ್ದು ಬಂದಿರೊ ಗಂಡುಮಗ ಅವುನ್ನಬ್ಬನೆಯ."

"ಪಾಪ ಅಂಥೋನ್ನ ಮಂತ್ರಿ ಮಾಡಬೇಕಾಗಿತ್ತು ಕಂಡ್ರ."


"ನಿಜ ಕಣಕ್ಕ. ಯಾವನು ಚುನಾವಣೆಗೆ ಹಣ ಖರ್ಚು ಮಾಡಿರದಿಲವ್ರೊ ಅವುನು ಮಂತ್ರಿಯಾದಾಗ ದುಡ್ನನೂ ಹ್ವಡಿಯದಿಲ್ಲ, ಅದಕಾದ್ರು ಅವುನನ್ನ ಮಿನಿಷ್ಟ್ರು ಮಾಡಬವುದಿತ್ತು" ಎಂದ ವಾಟಿಸ್ಸೆ.

"ಸರಿ ಕಣೊ ನೀನೇಳದು. ಇವತ್ತಿನ ದಿವಸದಲ್ಲಿ ಕುಡಿಯಕ್ಕೆ, ತಿನ್ನಕ್ಕೆ ಕೊಡದೆ ಹಣನೂ ಹಂಚಡೆ ಚುನಾವಣೆಲಿ ಗೆದ್ದು ಬಂದಿರೋನು, ನಾಳೆ ಮಿನಿಸ್ಟ್ರಾದರೆ ಇನ್ನು ಏನೇನು ಸುಧಾರಣೆ ತಂದು ಹೆಸುರು ಮಾಡ್ತನೊ ಏನೊ. ಅಂತ ಅನಾಹುತವ ದ್ಯಾವೇಗೌಡ್ಯಾಕೆ ಮೈಮ್ಯಾಲೆ ಯಳಕತ್ತರೆ. ಅದ್ಕೆ ಮಯಿಮಾ ಪಟೇಲ ಏಟೇ ಹಾರ್‍ಯಾಡಿದ್ರು ಮಂತ್ರಿ ಮಾಡಲಿಲ್ಲ."

"ಅವನು ಒಂಥರಾ ಸರಿಲ್ಲ ಕಣೊ ಉಗ್ರಿ" ಎಂದ ವಾಟಿಸ್ಸೆ.

"ಯಾಕ್ಲ ಅಂಗಂತಿ?"

"ಇನ್ನೇನಕ್ಕ ಮತ್ತೆ ದ್ಯಾವೇಗೌಡ ತನ್ನ ಮಕ್ಕಳಲ್ಲಿ



ಒಬ್ಬನ್ನ ಮುಖ್ಯಮಂತ್ರಿ ಮಾಡ್ತನೆ, ಇನ್ನೊಬ್ಬನ್ನ ಯರಡು ಮೂರು ಖಾತೆಯಿರೊ ಮಂತ್ರಿ ಮಾಡ್ತನೆ. ಇಷ್ಟಾದ್ರು ಹೋಗಿ ಆ ದೇವೇಗೌಡನೆದ್ರಿಗೆ ನಿಂತಗಂಡು, ಇದು ಸರಿನೆ ಅಂತ ಪ್ರಶ್ನೆ ಕೇಳಿ ಪಾರ್ಟಿ ಬುಟ್ಟು ಹೋಗ ಬೇಕಾಗಿತ್ತು ಕಣ್ರೊ."

"ಎಲ್ಲಿಗೆ ಅಂತ ಹೋದನೋ?"

"ಅಲ್ಲ ಕಣೊ ಉಗ್ರಿ, ಕುಡಿಯಕ್ಕೆ ತಿನ್ನಕ್ಕೆ ಕೊಡದೆ ಗೆದ್ದು ಬಂದಿರೋನಿಗೆ ಯಾರಂಗಿತದೆ. ಅವುನ ಕ್ಷೇತ್ರದಲ್ಲಿ ಈ ದ್ಯಾವೇಗೌಡನ ಮಾತು ಕೇಳಿ, ಮಕನೋಡಿ ಯಾವನಾರ ಓಟು ಮಾಡಿದ್ದನೆ. ಆ ಚಂದ್ರಾಪಟ್ಟಣದ ಪುಟ್ಟೇಗೌಡನೊ ಅಥವಾ ಆ ಪಾಂಡುಪುರದ ಶಾಸಕನೊ ಆದ್ರೆ ಪಾಪ ದ್ಯಾವೇಗೌಡನತ್ರ ಬದ್ದಿರಬೇಕಾಯ್ತದೆ. ಮಹಿಮನಿಗೆ ಅಂತ ಹಂಗಿಲ್ಲ, ಆದರಿಂದ ಸೆಲಪ್ ಡಿಸಿಸನ್ ತಗೊಬವುದಿತ್ತು"

"ಅವುನು ಶೆಲ್ಪ ಡಿಸಿಸನ್ ತಗಳೋ ತರ ಇಲವಂ ಕಣೊ. ಯಾರೊ ಕಲ್ಕಿ ಭಗವಾನ್ ಅನ್ನೊನಿಗೆ ತಲ ಒಪ್ಪಿಸಿದ್ದನಂತೆ. ಅವುನೇಳಿದಂಗೆ ಕೇಳ್ತನಂತೆ. ಈಗ ಎಲ್ಲೊ ಅವುನು ಯಲ್ಲಾನು ತಡಕೊಂಡು ಸುಮ್ಮನಿ ಅಂದಿರಬೇಕು. ಅದ್ಕೆ ಇವುನು 'ಯಲ್ಲಾನು ಸಯಿ ಗಂಡೋಯ್ತಾ ಅವುನೆ" ಎಂದ ಉಗ್ರಿ

"ಪಟೇಲ್ರ ಮಗನಿಗೆ ವಯಿಸೇಟ್ಟ?" ಎಂದಳ ಜುಮ್ಮಿ.

"ಅವುನು ನಮ್ಮ ವಯಿಸಿನೋನು ಕಣೆ, ಇನ ಹುಡುಗ."

"ಮದಿವಾಗಿದ್ದತೆ?"

"ಪಟೇಲ್ರು ಮಗಲವೆ. ಇಲ್ಲಿಗಂಟ ಮದಿವಾಗ ಅಂಗೆಯಿದ್ದನೆ?"

"ಪಟೇಲ್ರು ಕಾಲಕ್ಕೆ ಸರಿಯಾಗಿ ಮದುವೆ ಮಾ ರತರೆ."

"ಅಲ್ಲಾ ಪಟೇಲ್ರು ಬೇಕಾದೋಟು ಕುಡಿಯೋರಂ ತಿನ್ನೋರಂತೆ. ಅಂಥೋರಿಗೆ ಕುಡಿಯಕ್ಕೆ ತಿನ್ನಕ್ಕೆ ಕೊಡ ಗೆದ್ದು ಬರೋ ಮಗವುನೆ ಅಂದ್ರೆ ಮೆಚ್ಚಬೇಕಾದ್ದೆ ಬುದ್ಧ ಎಂದ ಕಾಳಮಾವ.

"ನಮ್ಮ ಕಾಳದೊಡಪ್ಪ ಮಹಿಮನ್ನ ಮೆಚ್ಚಗಂ ಅಂದ್ರೆ, ಅವುನು ಮಂತ್ರಿಯಾಗದೆಯಿದ್ರು ವ ಸರ್ಟಿಫಿಕೇಟ್ ಸಿಗತು ಬುಡು. ಅಷ್ಟಕೂ ಈ ಸರ್ಕಾ ಡೆಡ್‌ಬಾಡಿ ಮೇಲಿರೊ ಸರ್ಕಾರ. ಅಂದ್ರೆ ಹ್ಯಣ ಮೇಲಿರೊ ಸರ್ಕಾರ. ಇದರಲ್ಲಿ ಮಂತ್ರಿ ಯಾಗ ಯಿದ್ರೆ ವ್ಯಾಲ್ಯುವೇಶನ್ನ ಕಣೊ ಉಗ್ರಿ" ಎಂ ವಾಟಿಸ್ಸೆ.

"ಅದ್ಯಾಕ್ಲ ಹ್ಯಣದ ಮ್ಯಾಗಲ ಸರ್ಕಾ ಅಂತಿ?" ಎಂದು ಜುಮ್ಮಿ ಸಿಟ್ಟಾದಳ

"ಓಹೊ ನಮ್ಮಕ್ಕನಿಗೆ ಪ್ಲಾಸಾಗಲಿ ಡೀಟ್ಯೆಲಾಗಿ ಹೇಳ್ತಿನಿ ಕೇಳಕ್ಕ. ಬಜೆ ಜೊತೆಲಿ ಜೆಡಿಎಸ್ ಸರ್ಕಾರ ನ್ಡಡಿಸಕ್ಕೋ ನನ್ನ ಹ್ಯಣದ ಮೇಲೆ ನೆಡೆಸಬೇಕು ಅಂತ ಯಾರಂದಿದ್ದೇಳು

"ಇನ್ಯಾರು, ದ್ಯಾವೇಗೌಡಂದ ಅಂತ ನೀನೆ ಹೇಳಿದ್

"ಆದ್ರೆ ಕುಮಾರಣ್ಣ ದೇವೇಗೌಡ್ರ ಮಾತ ಮಿ ಬಜೆಪಿ ಜೊತೆ ಸೇರಿ ಸರ್ಕಾರ ಮಾಡಬುಟ್ಟ ಅಂದ್ರೇ ಯ್ತಕ್ಕ?"

"ಏನಾಯ್ತು ಅಂದ್ರೆ ದ್ಯಾವೇಗೌಡ್ರ ಯಣದ ಮಾ ಸರ್ಕಾರ ನ್ಯಡಿತಾ ಅದೆ ಅಂದಂಗೆ ಆಯ್ತಲ್ಲಾ."

"ತಿಳಕಂಡ್ಯ ಡೆಡ್‌ಬಾಡಿ ಮೇಲಿರೊ ಸರ್ಕಾರದ ಮಂತ್ರಿಯಾಗದೋರೆ ಮಾನವಂತ್ರ ಕಣಕ್ಕ. ಇದನ್ನ ಮಯಿಮನಿಗೆ ಹೇಳೊ ಉಗ್ರಿ."

"ನೀನೆ ಹೇಳೊ."

"!"

–ಬಿ. ಚಂದ್ರೇಗೌ

ಸಾರಿಕಾ ಮತ್ತು ಹೆಣ್ಣಿನ ಯಾತನೆ

ನಾಲ್ಕು ದಶಕಗಳ ಹಿಂದೆ, ಬೆಕ್ಕಿನಕಣ್ಣಿನ, ಹಾಲುಗಲ್ಲದ ಈಕೆ ಬಾಲನಟಿಯಾಗಿ ಹಿಂದಿಚಿತ್ರ ಪ್ರೇಕ್ಷಕರ ಮನ ಗೆದ್ದಿದ್ದಳು. ಆನಂತರ, ಮೂರು ದಶಕಗಳ ಹಿಂದೆ, ಈಕೆ ಮೈತುಂಬಿ ಕೊಂಡು ಯುವ ನಟಿಯಾಗಿ ಮಿಂಚಿದ್ದಳಾದರೂ ಆಗ ಹೇಳಿಕೊಳ್ಳುವಂತಹ ಅವಕಾಶಗಳೇನೂ ಈಕೆಗೆ ಸಿಕ್ಕಿರಲಿಲ್ಲ.

ಬಾಲ್ಯದಿಂದಲೂ ಕಷ್ಟ, ದುಃಖಗಳನ್ನು ಕಂಡಿದ್ದ ಈ ಯುವತಿಗೆ ಪ್ರೀತಿ ಎಂಬುದು ದೊರಕಿದ್ದು ಆಕೆಯ ಕೈಹಿಡಿದವನಿಂದ. ಆತನಿಗಾಗಿ ಈಕೆ ತನ್ನ ಹೆತ್ತ ತಾಯಿಯನ್ನೇ ತ್ಯಜಿಸಿದ್ದಳಲ್ಲದೆ, ಚಿತ್ರರಂಗವನ್ನೂ ತೊರೆದಿದ್ದಳು. ಅವನೊಂದಿಗೆ

ಮಹಿಳೆ

17 ವರ್ಷ ಜೀವನ ಸಾಗಿಸಿದ ಈ ಯುವತಿ ಇಬ್ಬರು ಮಕ್ಕಳಿಗೂ ಜನ್ಮ ನೀಡಿದಳು, ಆದರೆ ನೆಮ್ಮದಿ ಎಂಬುದು ಮಾತ್ರ ಅವಳ ಬದುಕಿನಲ್ಲಿ ಬರಲೇ ಇಲ್ಲ, ಕೊನೆಗೆ ತನ್ನ ಗಂಡನಿಂದಲೂ ದೂರಾದ ಈಕೆ ಮತ್ತೆ ತನ್ನ ಕಾಲಮೇಲೆ ನಿಲ್ಲಲು ನೋಡಿದಳು. ಇದು ಸಾರಿಕಾ ಎಂಬ ನಟಿಯ ಪುಟ್ಟ ಪರಿಚಯ.

ಇಲ್ಲಿ ಯಾಕೆ ಸಾರಿಕಾಳ ಬಗ್ಗೆ ಹೇಳಲಾಗುತ್ತಿದೆ ಎಂದರೆ, ಮೊನ್ನೆ ದೇಶದೆಲ್ಲೆಡೆ (ನರಹಂತಕ ನರೇಂದ್ರ ಮೋದಿಯ ಗುಜರಾತ್ ರಾಜ್ಯದ ಹೊರತಾಗಿ) ಬಿಡುಗಡೆಯಾಗಿ, ಪ್ರೇಕ್ಷಕರ ಮತ್ತು ವಿಮರ್ಶಕರ ಮೆಚ್ಚುಗೆ ಪಡೆದಿರುವ 'ಪರ್ಜಾನಿಯಾ' ಚಿತ್ರದಲ್ಲಿ ಈ ಸಾರಿಕಾ ಮಿಂಚಿದ್ದಾಳೆ.

2002 ರಲ್ಲಿ ಗುಜರಾತಿನಲ್ಲಿ ಸಂಘ ಪರಿವಾರಿಗಳು ನಡೆಸಿದ ಮಾರಣಹೋಮಕ್ಕೆ, ದಾದಾ ಮೋದಿ ಎಂಬುವವರ ಪಾರ್ಸಿ ಸಮುದಾಯದ ಕುಟುಂಬ ಕೂಡ ತುತ್ತಾಗಿತ್ತು. ಅಂದಿನ ಗಲಾಟೆಯಲ್ಲಿ ದಾದಾ ಮೋದಿ, ಅವರ ಪತ್ನಿ ರೂಪ (ಸಿನಿಮಾದಲ್ಲಿ ಸಾರಿಕಾಳ ಶೆರ್ನಾಜ್) ಮತ್ತು ಮಗಳು ಬದುಕುಳಿದರಾದರೂ ಅಂದು ನಾಪತ್ತೆ ಆದ ಅವರ ಪುಟ್ಟ ಮಗ ಅಜ್ಹರ್ (ಸಿನಿಮಾದಲ್ಲಿ ಪರ್ಜಾನ್) ಇವತ್ತಿಗೂ ಪತ್ತೆ ಆಗಿಲ್ಲ. ಅಂದಿನ ಗಲಭೆಗಳಲ್ಲಿ ಆ ಹುಡುಗ ಕೊಲೆ ಆಗಿರಬಹುದು ಎಂದು ಹಲವಾರು ಜನ ನಂಬಿದ್ದರೂ, ಇವತ್ತಿಗೂ ಮೋದಿ ಅವರ ಕುಟುಂಬ ಆತ ಒಂದು ದಿನ ತಮಗೆ ಸಿಕ್ಕೇ ಸಿಗುತ್ತಾನೆ ಎಂಬ ಆಶಯದಲ್ಲಿ ಬದುಕುತ್ತಿದೆ.



ಈ ನಿಜಜೀವನದ ಘಟನೆಯನ್ನು ರಾಹುಲ್ ಧೋಲಾಕಿಯಾ ಎಂಬುವವರು 'ಪರ್ಜಾನಿಯಾ' ಚಿತ್ರದಲ್ಲಿ ನಿರೂಪಿಸಿದ್ದಾರೆ. ಅದರಲ್ಲಿ ನಾಪತ್ತೆಯಾದ ಬಾಲಕನ ತಾಯಿಯ ಪಾತ್ರವನ್ನು ನಿರ್ವಹಿಸಿರುವ ಸಾರಿಕಾ ಒಂದು ಕುಟುಂಬದ ದುರಂತವನ್ನು, ಒಂದು ತಾಯಿಯ ಯಾತನೆಯನ್ನು ಎಷ್ಟು ಮನಮುಟ್ಟುವಂತೆ ತೆರೆದಿಟ್ಟಿದ್ದಾರೆಂದರೆ ಆಕೆಯೊಂದಿಗೆ ಚಿತ್ರ ಪ್ರೇಕ್ಷಕರೂ ಬಿಕ್ಕಿಬಿಕ್ಕಿ ಅಳುತ್ತಿದ್ದಾರೆ.

ಅದ್ಯಾವುದೋ ಕಾರ್ಯಕ್ರಮದಲ್ಲಿ ಶಿಲ್ಪಾಶೆಟ್ಟಿ ಎಂಬ ನಟಿ "ನಾನು ಭಾರತವನ್ನು ಪ್ರತಿನಿಧಿಸುತ್ತಿದ್ದೇನೆ" ಎಂದು ಹೇಳಿದ್ದಳು. ಆದರೆ ಆಕೆಗಿಂತ ಪ್ರಸ್ತುತ ಭಾರತವನ್ನು ನಮಗೆ ತೋರಿಸಿರುವವಳು ನಟಿ ಸಾರಿಕಾ.

ಓರ್ವ ಸಾಮಾನ್ಯ ಗೃಹಿಣಿಯ ಪಾತ್ರಕ್ಕೆ ಪರಕಾಯಪ್ರವೇಶ ಮಾಡಿರುವ ಸಾರಿಕಾ, ತಾನು ಹೆತ್ತಮಗನನ್ನು ಕಳೆದುಕೊಂಡು ಆತನಿಗಾಗಿ ಆರು ವರ್ಷಗಳ ನಂತರವೂ ಕಾಯುತ್ತಿರುವ ತಾಯಿಯ ಪಾತ್ರದ ಮುಖಾಂತರ ನಮ್ಮ ಸಮಾಜದಲ್ಲಿ ಅಡಗಿರುವ ದ್ವೇಷ, ಹಿಂಸೆ, ಮೂಲಭೂತವಾದವನ್ನು ತೆರೆದಿಟ್ಟಿದ್ದಾರೆ.

ಅದಕ್ಕೆ ಸಾರಿಕಾಗೆ ಕಣ್ಣೀರಿನ ಶುಭಾಷಯಗಳು....


–ಸಾವಂತಿ

"ನನ್ನ ಮುದ್ದು ಕೋತಿ"

ವಿನಾದರೊಂದು ಕೇಳುವಾಗ ಸಂಕೋಚವಿರುತ್ತದೆ; ಪ್ರತೀ ಸಲ ದೀಪಾವಳಿ ಸಂಚಿಕೆ ರೂಪಿಸುವಾಗಲೂ ಓದುಗರಿಂದ ಲೇಖನ ಆಹ್ವಾನಿಸುವಾಗ ಏನನ್ನು ಕೇಳುವುದು, ಯಾವ ವಿಷಯ ಸೂಚಿಸುವುದು ಎಂಬ ಸಮಸ್ಯೆ ಏಳುತ್ತದೆ. ಹೊಸದಿರಬೇಕು, ಅರ್ಥಪೂರ್ಣವಾಗಿರಬೇಕು, ರಂಜನೀಯವಾಗಿದ್ದರೂ ಅಗ್ಗವಾಗಿರಬಾರದು, ಘನತೆಯಿಂದ ಕೂಡಿದ್ದರೂ ಬೋರಿಂಗ್ ಆಗಿರಬಾರದು.... ನಮ್ಮ ಕಣ್ಣಾಮುಚ್ಚಾಲೆ ನೀವು ಗಮನಿಸಿರಬಹುದು. ಇದು ನಮ್ಮ ಪ್ರಶ್ನೋತ್ತರದ ಅಂಕಣ. ತಮಾಷೆ, ಕಿಲಾಡಿತನ, ಅಲ್ಪಸ್ವಲ್ಪ ಪೋಲಿತನ ಎಲ್ಲ ಇದ್ದರೂ ನಮ್ಮ ಪತ್ರಿಕೆಯ ಸಿದ್ಧಾಂತ ಬಿಟ್ಟುಕೊಡಕೂಡದು, ನಗಿಸುವ ಆತುರದಲ್ಲಿ ಅಭಿರುಚಿ, ವೈಚಾರಿಕತೆ ಬಿಟ್ಟು ಕೊಡಕೂಡದು; ಭಾಷೆಯ ಸಾಮರ್ಥ್ಯದಿಂದ ಹಿಡಿದು ಪ್ರಶ್ನೆಯ ಆದಷ್ಟೂ ಸಾಧ್ಯತೆಗಳನ್ನು ಹುಡುಕುವವರೆಗೆ ಉತ್ತರಗಳಿರಬೇಕು.

ಈ ಸಲ ದೀಪಾವಳಿ ಸಂಚಿಕೆಗೆ ವಿಷಯಗಳನ್ನು ಸೂಚಿಸಿದ ನಮಗೆ ಅಚ್ಚರಿ ಕಾದಿತ್ತು. 'ಮುರಿದು ಬಿದ್ದ ನನ್ನ ಮೊದಲ ಕನಸು' ಎಂಬುದನ್ನು ಎತ್ತಿಕೊಂಡ ನೂರಾರು ಜನ ತರುಣರು ನನಗೆ ಬೆರಗಾಗುವಷ್ಟು ಸರಳವಾಗಿ, ನೇರವಾಗಿ, ಸ್ಪಷ್ಟವಾಗಿ ತಮ್ಮ ತೊಳಲಾಟ ಹೇಳಿಕೊಂಡಿದ್ದಾರೆ; ತಮ್ಮ ಕನಸು ಮುರಿದುಬಿದ್ದ ಪರಿ ವರ್ಣಿಸಿದ್ದಾರೆ. ನಿರುದ್ಯೋಗ, ತಮಗೆ ಇಷ್ಟವಲ್ಲದ ಉದ್ಯೋಗ, ಜೊತೆಗಾರ್ತಿ, ಕುಟುಂಬದ ಕಷ್ಟಗಳು; ಪ್ರತಿಭೆ ಕಮರಿ ಹೋದದ್ದು, ಆದರ್ಶ ಛಿದ್ರಗೊಂಡದ್ದು... ಓದುತ್ತಾ ಓದುತ್ತಾ ನಿಟ್ಟುಸಿರುಬಿಟ್ಟೆ. ಇವುಗಳಲ್ಲಿ ಎಲ್ಲವನ್ನೂ ಆರಿಸಲು ಆಗುತ್ತಿಲ್ಲ ಎಂದು ಬೇಸರಪಟ್ಟೆ.

ಅಲ್ಲಿಂದ ಇನ್ನೊಂದು ರಾಶಿಗೆ ಕೈ ಹಾಕಿದೆ. ಅದು 'ನನ್ನ ಮುದ್ದು ಕೋತಿ' ಎಂಬ ಇನ್ನೊಂದು ಸರಣಿ. ಇಲ್ಲಿ ಬಂದಿರುವ ವರ್ಣನೆಗಳಂತೂ ನನಗೆ ಅಚ್ಚುಮೆಚ್ಚಾದವು. ವಿಷಯ ನಿರ್ಧರಿಸುವಾಗ ಸ್ವಲ್ಪ ಹಿಂಜರಿದಿದ್ದೆ; ಸಂಸಾರಿಗಳು ತಮ್ಮ ಜೊತೆಗಾರ, ಜೊತೆಗಾರ್ತಿಯ ಬಗ್ಗೆ ಬರೆಯಲಾರರು ಎಂದು ತಿಳಿದಿದ್ದೆ. ನನ್ನ ಎಣಿಕೆ ತಪ್ಪಾಗುವಂತೆ ಬಂದವು; ಅದೂ ಎಷ್ಟು ಸೊಗಸಾಗಿ! "ಪತ್ರಿಕೆ" ಕಳೆದ ಎಂಟೂವರೆ ವರ್ಷದಿಂದ ಎಷ್ಟು ಜನಕ್ಕೆ ಅನುಭವವನ್ನು ಸ್ವೀಕರಿಸುವ, ವ್ಯಕ್ತಪಡಿಸುವ ಕಲೆ, ಕಸುಬು ಕಲಿಸಿದೆಯೋ ಗೊತ್ತಿಲ್ಲ, ಇಲ್ಲಿ ಪತಿಗಳು, ಪತ್ನಿಯರು ತಮ್ಮ ಸಂಗಾತಿಯ ಬಗ್ಗೆ ಬರೆದಿರುವ ರೀತಿ ನಿಜಕ್ಕೂ ರೋಚಕವಾಗಿದೆ, ವಿಶಿಷ್ಟ ರೀತಿಯಲ್ಲಿದೆ. ಕಲ್ಪಿಸಿಕೊಳ್ಳಿ. ಸ್ವಲ್ಪ ಕಿವುಡ ಎಂದು ಅರಿಯದೆ ಕಟ್ಟಿಕೊಂಡ ಗಂಡ; ಆತನ ಕಿವುಡು ಬೆಳೆಯುತ್ತ ಹೋದರೂ ಆತನ ಅಪರಂಜಿಯಂಥ ಗುಣ, ಆತನ ಪ್ರೀತಿ ತುಂಬಿದ ವ್ಯಕ್ತಿತ್ವ, ಒಮ್ಮೊಮ್ಮೆ ಮಾತಾಡುವಾಗ ತಲೆರೋಸಿದರೂ 'ತನ್ನ ಮುದ್ದು ಕೋತಿ'ಯ ಬಗ್ಗೆ ಅಪಾರ ಸಹನೆ ಮುತ್ತು ಪ್ರೀತಿ. ಇನ್ನೊಬ್ಬಾಕೆ ಗ್ಲೈಡರ್ ಗಂಡನನ್ನು ಪಡೆದು ಆತ ನಿಜಕ್ಕೂ ಕೋತಿಯಂತೆ ಹಾರಾಡುವುದನ್ನು, ಹಾರಾಟಕ್ಕೆ ಪ್ರಶಸ್ತಿ, ಸಂಭಾವನೆ ಪಡೆಯುವುದನ್ನು ಕಂಡೂ ಆಕೆಗೆ ಆತನ ಕ್ಷೇಮದ ಬಗ್ಗೆ ಆತಂಕ..... ಎಲ್ಲವನ್ನೂ ಹಾಕಲು ಆಗದಿದ್ದುದಕ್ಕೆ ಮತ್ತೆ ನೋವು.




ಅಕ್ಟೋಬರ್ 9, 1988

ಒಂದು ಉತ್ತರ

ಮೊನ್ನೆ ನಾನು ವಿ.ಪಿ. ಸಿಂಗ್ ಅವರಿಗೆ ಬರೆದ ಬಹಿರಂಗ ಪತ್ರವನ್ನು ಅಖಿಲ ಭಾರತ ಮಟ್ಟದ ಕೆಲವರಿಗೆ ಕಳಿಸಿದ್ದೆ, ಅವುಗಳಲ್ಲಿ ಒಬ್ಬರು ಟೆಲಿಗ್ರಾಫ್ ಪತ್ರಿಕೆಯ ಸಂಪಾದಕ ಎಂ.ಜೆ. ಅಕ್ಬರ್. ಈತ ನನಗೆ ತಮ್ಮನಿದ್ದಿದ್ದರೆ ಆತನ ವಯಸ್ಸಿನವರು; ಜಾತಿ, ರಾಜಕೀಯ, ಶಿಕ್ಷಣ ಮುಂತಾದ್ದರ ಬಗ್ಗೆ ಹೆಚ್ಚುಕಮ್ಮಿ ನನ್ನ ಹಾಗೇ ಯೋಚಿಸುವವರು. "ನಿಮ್ಮ ಪತ್ರ ಈಗ ತಾನೆ ಓದಿದೆ. ಎಂದಿನಂತೆ ನಿಮ್ಮ ಅನ್ನಿಸಿಕೆ ಮತ್ತು ರಾಜಕೀಯ ವಿಶ್ಲೇಷಣೆ ಅದ್ಭುತ ಒಳನೋಟಗಳಿಂದ ಕೂಡಿದೆ ಮತ್ತು ದಿಟ್ಟವೂ ಸ್ಪಷ್ಟವೂ ಆಗಿದೆ" ಎಂದು ಬರೆದಿದ್ದಾರೆ. ನಾನು ಸಾಧಾರಣವಾಗಿ ಈ ಅಖಿಲ ಭಾರತ ಬುದ್ಧಿಜೀವಿಗಳಿಂದ ಉತ್ತರವನ್ನೇ ನಿರೀಕ್ಷಿಸುವುದಿಲ್ಲ. ಯಾಕೆಂದರೆ ಎಲ್ಲರೂ ಪುರುಸೊತ್ತಿಲ್ಲದ ಜನ. ಆದರೆ ಈ ಎಂ.ಜೆ. ಅಕ್ಬರ್ ಅವರ ಅಭಿಪ್ರಾಯ ದಿಂದ ನನಗಾದ ಖುಷಿಯಲ್ಲಿ ನೀವೂ ಪಾಲುಗೊಳ್ಳಬೇಕೆಂದು ಮಾತ್ರ ಇಲ್ಲಿ ಹೇಳಿದ್ದೇನೆ.

ವಿ.ಪಿ. ಸಿಂಗ್ ಅವರಿಗೆ ಬರೆದ ಪತ್ರದಲ್ಲಿ ನಾನು ಹೇಳಿದ ಒಂದು ಮಾತು ಈಗ ನೆನಪಾಗುತ್ತಿದೆ. ನಮ್ಮ ಇಡೀ ಭಾರತದ ರಾಜಕಾರಣ, ಪುಢಾರಿಗಳು ಮತ್ತು ವಂಚಕರಿಂದ ತುಂಬಿದೆ. ಇವರೊಂದಿಗೆ ಅಧಿಕಾರಿಗಳು, ವರ್ತಕರು, ಉದ್ಯಮಿಗಳು ಸೇರಿಕೊಂಡಿದ್ದಾರೆ. ವಿ.ಪಿ. ಸಿಂಗ್ ಅವರನ್ನೊಳಗೊಂಡು ಈಗಿರುವ ರಾಜಕಾರಣಿಗಳಲ್ಲಿ ಯಾವನೊಬ್ಬನಿಗೂ ದಿಟ್ಟವಾಗಿ ಯೋಚಿಸುವ, ಅದ್ಭುತವಾಗಿ ಕನಸುವ ಶಕ್ತಿ ಕೂಡ ಕಂಡುಬರುತ್ತಿಲ್ಲ.






ಪ್ರೀತಿಶ್ ಹೇಳಿದ್ದು

ಇದೇ ಸಮಯದಲ್ಲಿ ಮೊನ್ನೆ ಹೇಳಲು ಮರೆತದ್ದನ್ನು ಹೇಳಲೇಬೇಕು. ಎರಡು ತಿಂಗಳ ಕೆಳಗೆ, ಬೆಂಗಳೂರಲ್ಲಿ ಪ್ರೀತಿಶ್ ನ್ಯಾಂಡಿ (ಇವರು 'ಇಲಸ್ಟ್ರೇಟೆಡ್ ವೀಕ್ಲಿ'ಯ ಸಂಪಾದಕರೆಂದು ಬಲ್ಲಿರಿ) ನನ್ನನ್ನು ಊಟಕ್ಕೆ ಕರೆದಿದ್ದರು. ನಾನು ಸಾಮಾನ್ಯವಾಗಿ ಪಾರ್ಟಿ, ಊಟ ಮುಂತಾದ್ದಕ್ಕೆ ಹೋಗುವುದಿಲ್ಲ, ಆ ಗದ್ದಲದಲ್ಲಿ ಊಟ, ಮಾತು ಎರಡೂ ಸರಿಹೋಗುವುದಿಲ್ಲ. ಆದರೆ ಪ್ರೀತಿಶ್ ವೈಯಕ್ತಿಕವಾಗಿ ಹೇಳಿಕಳಿಸಿದ್ದರಿಂದ ಹೋಗದಿರುವುದು ಸರಿಯಲ್ಲ ಎಂದು ಹೋದೆ. ಪ್ರೀತಿಶ್ ಅಕ್ಬರ್ ತರಹವೇ ತರುಣ ಸಂಪಾದಕ. ಆಗತಾನೇ ಹೆಗಡೆಯವರು ದೇವೇಗೌಡ-ಅಜಿತ್‌ಸಿಂಗ್ ಅವರ ಸಂಭಾಷಣೆಯನ್ನು ಕದ್ದು ಕೇಳಿದ್ದು, ಸಂಭಾಷಣೆಯ ಪೂರ್ಣ ಪಾಠ ಎಕ್ಸ್‌ಪ್ರೆಸ್‌ನಲ್ಲಿ ಬಂದಿತ್ತು. ನಾನು ಕಂಡೊಡನೆ ಪ್ರೀತಿಶ್ ಈ ಬಗ್ಗೆ ಸಿಟ್ಟನಿಂದ ಮಾತಾಡಿದರು; 'ಇದು ವಾಟರ್ ಗೇಟ್‌ಗಿಂತಲೂ ದುಷ್ಟ ಕೆಲಸ-ಇದನ್ನು ಸರಿಯಾಗಿ ತನಿಖೆ ಮಾಡಿ ಹೆಗಡೆಯ ಬಣ್ಣ ಬಯಲು ಮಾಡಬೇಕು' ಎಂದು ಹೇಳಿದರು. ಅಷ್ಟೇ ಅಲ್ಲ, ನನ್ನಲ್ಲಿ ಪೂರ್ಣ ವಿಶ್ವಾಸ ಸೂಚಿಸಿದ ಪ್ರೀತಿಶ್, "ಈ ಹೆಗಡೆ ಮುಂಬೈಗೆ ಬಂದಿದ್ದಾಗ ನನ್ನನ್ನು ಕಂಡು ನಿಮ್ಮ ಬಗ್ಗೆ ಸಲ್ಲದ ಮಾತಾಡಿದರು; 'ಆತ ಗೊತ್ತಲ್ಲ, ಬ್ಲಾಕ್‌ಮೇಲ್, ಲಂಚ ಇತ್ಯಾದಿಗೆ ಪ್ರಖ್ಯಾತಿ' ಎಂದು ಹೇಳಿ ನಿಮ್ಮ ಮಾತುಗಳಿಗೆ ಪ್ರಾಮುಖ್ಯ ನೀಡಬಾರದು ಎಂದು ಹೇಳಿದರು. ನಾನು ನಿಮ್ಮ ಬಗ್ಗೆ ತಿಳಿದಿದ್ದೆ. ಈತನ ಬೊಗಳೆಗೆ ಪ್ರಾಮುಖ್ಯ ಕೊಡುವವ ನಾನಲ್ಲ" ಎಂದು ಹೇಳಿದರು. ಪ್ರೀತಿಶ್ ಮಾತಾಡಿದ ಮೂರು ವಾರದಲ್ಲಿ ಹೆಗಡೆ ದೊಡ್ಡ ನಾಟಕ ಆಡುತ್ತಲೇ ತೊಲಗಬೇಕಾಯಿತು.

ಕುಡುಕರ ಸಂಗ ಮಾನಭಂಗ, ಹುಡ್ಗಿಯರ ಸಂಗ?

ಕುಮಾರಸ್ವಾಮಿ, ಕನಕಪುರ
'ಟೈಮ್ಸ್ ಆಫ್ ಇಂಡಿಯಾ' ಎಂಬ ಕನ್ನಡ ಪತ್ರಿಕೆ ಇದೆಯಂತೆ?
* ಇದೆ, ಆದರೆ ಅದರಲ್ಲಿ ವಿಜಯಕರ್ನಾಟಕದ ಜನಿವಾರದ ಬದಲು, Infosysನ ಹೈಟೆಕ್ ಅಗ್ರಹಾರ ರಾರಾಜಿಸುತ್ತಿದೆ.

ಪಿ. ಪುಷ್ಪ, ಬೆಂಗಳೂರು
ಉಡುಪಿಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಏನು ಚರ್ಚೆ ಆದರೆ ಚೆಂದ?
* ಏನೇ ಚರ್ಚೆ ಆದರೂ ಪತ್ರೊಡೆಯಲ್ಲಿ ಕೊತ್ತಂಬರಿ, ಕೋಸಂಬ್ರಿಯಲ್ಲಿ ಉಪ್ಪು ಕಡಿಮೆ ಆದರೆ ಗಾಢ ಚರ್ಚೆಯಂತೂ ಶತಸಿದ್ಧ.



ಎಂ.ಎಸ್. ಮಂಜರ್, ಬಂಡಳ್ಳಿ
ದೇವೇಗೌಡರಿಗೆ ಕರ್ನಾಟಕದ ಪಿತಾಮಹ ಎಂಬ ಬಿರುದು ಕೊಟ್ಟರೆ?
* ಆದರೂ ಭಸ್ಮಾಸುರ ಎಂಬ ಅಪಕೀರ್ತಿ ಹೋಗಲ್ಲ.

ಡಿ.ಎಲ್. ಶ್ವೇತಾ, ಹರಪನಹಳ್ಳಿ
ಇಂದಿನ IT-BT ಯುಗದಲ್ಲೂ ವೀಸಾ ಪಡೆಯಲು ಹೆಬ್ಬೆಟ್ಟಿನ ಗುರುತು ಬೇಕಂತೆ?
* ತಂತ್ರಜ್ಞಾನದಿಂದ ಏನೇನು ಅಪಾಯ ಇದೆ, ಲೆಕ್ಕಹಾಕಿ.

ಬಿ.ಚಂದ್ರೇಗೌಡ, ಬೆಂಗಳೂರು
ಕೃತಿಚೋರರ ಹಾವಳಿಯ ಹಾಗೆ ಪ್ರಶ್ನೆ ಚೋರರ ಹಾವಳಿಯೂ ಹೆಚ್ಚಾಗುತ್ತಿದೆಯಲ್ಲ?
* ಇದರಿಂದ ಯಾರೂ ಮಾನನಷ್ಟ ಮೊಕದ್ದಮೆ ಹಾಕಲ್ಲ ಎಂಬುದೊಂದೇ ನೆಮ್ಮದಿ.

ಎಸ್. ಶಶಿಧರ, ದಾವಣಗೆರೆ
ಮಠಾಧೀಶರಿಗೆ ಮೊಟ್ಟೆಯ ಮೇಲೇಕೆ ಸಿಟ್ಟು?
* ಚಿಕನ್ ಸಿಗದೇ ಇರುವಂತಾದರೆ ಎಂಬ ಭಯ ಪಾಪ!

ಎಸ್.ಕೆ. ಉಮಾ, ಸೊಂದೇಕೊಳ
ರೈತರ ಸಾಲಮನ್ನಾನೋ, ಸರಕಾರ ಮನ್ನಾನೋ?
* ಮನ್ನಾ ಗೊತ್ತಿಲ್ಲ, ಆದರೆ ಅಧಿಕಾರ ಮಾತ್ರ ಮುನ್ನ.

ಅಂಬುಬಾ, ಶೋರಾಪೂರ
ಗಂಡಂದರಿಗೆ ಮಂಪರು ಪರೀಕ್ಷೆ ಮಾಡಿಸಿದರೆ?
* ಕುಟುಂಬ ನ್ಯಾಯಾಲಯ ಸಿಬ್ಬಂದಿಗೆ ಬಿಡುವೆ ಇಲ್ಲದಂತಾಗುತ್ತದೆ.

ಕೆ.ಶ್ರೀನಿವಾಸ್, ಮಂಡ್ಯ
ಶಿಲ್ಪಾಶೆಟ್ಟಿಯ ಮುಂದಿನ ಚಿತ್ರಕ್ಕೆ ಏನು ಹೆಸರಿಡಬಹುದು?
* ಬಿಗ್ ಬ್ರದರ್ ಎಂಬ ಜಾಕ್‌ಪಾಟ್.

ಅಕ್ಕಿ ಕೊಟ್ರೇಶ, ಉಪನಾಯಕನಹಳ್ಳಿ
ಚಿತ್ರನಟಿ ರಮ್ಯಾಗೆ ಚಿತ್ರಗಳಿಗಿಂತ ಚಿತ್ರಾನ್ನ ತುಂಬಾ ಇಷ್ಟವಂತೆ?
* ಇದು ಆಕೆಯ ಕಾಲ್‌ಶೀಟ್ ಸಿಗದ ಚಿತ್ರಾನ್ನ ಪಾರ್ಟಿಗಳ ದೂರು.

ಬೋರ್‍ವೆಲ್ ಪುತ್ತು, ಉಪ್ಪಿನಂಗಡಿ
ತೀರ್ಥಾಟನಾಪ್ರಿಯ ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಮಾಡುವ ಬದಲು ಯಾವುದಾದರೂ ಮಠಕ್ಕೆ ಸ್ವಾಮಿಯನ್ನಾಗಿ ಮಾಡಬಹುದಿತ್ತಲ್ಲಾ?
* ಉಡುಪಿ, ಮಂತ್ರಾಲಯ, ಶೃಂಗೇರಿ, ಧರ್ಮಸ್ಥಳಗಳ ಗರ್ಭಗುಡಿಗೆ ಈ ಶೂದ್ರ ಶಿಖಾಮಣಿಗೆ ಪ್ರವೇಶ ಇದ್ದರೆ ತಾನೆ ಈ ಪ್ರಶ್ನೆ.

ಆಶಾ ಚಂದ್ರಶೇಖರ್, ಚಿಕ್ಕಮಾವಳ್ಳಿ
ಕುಮಾರಸ್ವಾಮಿ ಕಂಡವರ ಮನೆಯಲ್ಲಿ ಮಲಗುವ ಸಲಹೆ ಅನಿತಕ್ಕನದಾ ಅಥವಾ ದೇವೇಗೌಡರದಾ?
* ಅವರಿಬ್ಬರಿಂದಲೂ ಬಚಾವಾಗಲು ಕುಮಾರನೇ ಕಂಡುಹಿಡಿದುಕೊಂಡಿರುವ ಪರಿಹಾರ ಸೂತ್ರ.

ವೈ.ಎ. ಸಂತೋಷ್, ಕಂಪ್ಲಿ
ಪಾಪದ ದುಡ್ನಾಗ ತೀರ್ಥಯಾತ್ರೆ ಮಾಡಿದ್ರೆ ಪುಣ್ಯ ಬರುತ್ತಾ?
* ಪಾಪಿಗಳ ದುಡ್ಡು ಪಡೆಯುವ ತಿರುಪತಿ ತಿಮ್ಮಪ್ಪ ಇನ್ನೆಷ್ಟು ಪಾಪ ಸಂಗ್ರಹಿಸಬಹುದು.


ಸೀನಣ್ಣ, ಮೈಸೂರು
ಚಡ್ಡಿಗಳೇಕೆ ಚೆಡ್ಡಿ ಸಮಾರಂಭಗಳಲ್ಲಿ ಮಾತ್ರ ಚೆಡ್ಡಿ, ಆನಂತರ ಚೆಡ್ಡಿ ಹಾಕದೆಯೇ ಓಡಾಡುತ್ತಾರಲ್ಲ?
* ಆದರೂ ಚೆಡ್ಡಿ ಬುದ್ಧಿ ಬಿಡಲ್ವಲ್ಲ.

ಅಬ್ದುಲ್ ರಜಾಕ್, ದೇವದುರ್ಗ
ಕುಡುಕರ ಸಂಗ ಮಾನಭಂಗ, ಹುಡ್ಗಿಯರ ಸಂಗ?
* 60 ಕೊಡುವ ಕಿಕ್ಕಿಗಿಂತ 16 ಕೊಡುವ ಕಿಕ್ಕು, ಭಾರೀ ಮಜಾ.

ಬಹುಮಾನಿತ ಪ್ರಶ್ನೆ

ಥೀ ತುಂಟಿ!

ಹನುಮಂತನನ್ನು ಬಹಳ ಇಷ್ಟಪಡುತ್ತಿದ್ದ ಮೂವರು ಗೆಳೆಯರು- ಅವರಲ್ಲಿ ಒಬ್ಬ ಹಿಂದೂ, ಒಬ್ಬ ಮುಸಲ್ಮಾನ್, ಮತ್ತೊಬ್ಬ ಸಿಖ್. ಹನುಮಂತ ನಿಜವಾಗಲೂ ಯಾವ ಸಮುದಾಯಕ್ಕೆ ಸೇರಿದ್ದ ಎಂಬುದರ ಬಗ್ಗೆ ಚರ್ಚಿಸುತ್ತಿದ್ದರು. ತನ್ನ ಗೆಳೆಯರ ವಾದವನ್ನು ಕೇಳಿ ಕೆಂಡಮಂಡಲವಾದ ಹಿಂದೂ ಯುವಕ "ಅದು ಹೇಗೆ ಹನುಮಾನ್ ಮುಸ್ಲಿಮ್ ಸಮುದಾಯಕ್ಕೆ ಸೇರಿದ್ದ ಎಂದು ವಾದಿಸುತ್ತೀಯ?" ಎಂದು ತನ್ನ ಮುಸ್ಲಿಮ್ ಗೆಳೆಯನನ್ನು ಕೇಳಿದ. ಆಗ ಆತ "ನೋಡು ನಮ್ಮಲ್ಲಿ ರೆಹಮಾನ್, ಸುಲೈಮಾನ್ ತರಹದ ಹೆಸರುಗಳಿವೆ. ಆದ್ದರಿಂದ ಹನುಮಾನ್ ಕೂಡ ಮುಸ್ಲಿಮ್ ಸಮುದಾಯದವನೇ" ಎಂದು ಉತ್ತರಿಸಿದ. ಸಿಖ್ ಗೆಳೆಯನತ್ತ ತಿರುಗಿದ ಹಿಂದೂ "ಅಲ್ಲಾ ರಾಮಾಯಣ ಬರೆದ ಸಾವಿರಾರು ವರ್ಷಗಳ ನಂತರ ನಿಮ್ಮ ಧರ್ಮ ಹುಟ್ಟಿಕೊಂಡಿದ್ದು. ಆದರೂ ಆತ ಸಿಖ್ ಸಮುದಾಯದವನು ಎಂದು ಹೇಗೆ ಹೇಳುತ್ತೀ?" ಎಂದು ಕೇಳಿದ. ಅದಕ್ಕೆ ಸಿಖ್ "ನೋಡು, ಅಪಹರಣವಾದ ಮಹಿಳೆ ಹನುಮಂತನಿಗೆ ಗೊತ್ತಿರಲಿಲ್ಲ, ಆಕೆಯ ಗಂಡನೂ ಅವನಿಗೆ ಗೊತ್ತಿರಲಿಲ್ಲ, ಅವಳನ್ನು ಅಪಹರಿಸಿದವನ ಬಗ್ಗೆಯಂತೂ ಯಾವ ದ್ವೇಷವೂ ಇರಲಿಲ್ಲ. ಆದರೂ ಅವನು ಇನ್ನೊಬ್ಬನ ಹೆಂಡತಿಯನ್ನು ಹುಡುಕಲು ಹೊರಟು, ಇಡೀ ನಗರಕ್ಕೆ ತನ್ನ ಬಾಲದಿಂದ ಬೆಂಕಿ ಹಚ್ಚಿ ಭಸ್ಮಮಾಡಿದ. ಅಂತಹವನು ಸಿಖ್ ಸಮುದಾಯಕ್ಕೆ ಸೇರದೆ ಇನ್ನೇನಾಗಿರುತ್ತಾನೆ" ಎಂದು ಉತ್ತರಿಸಿದ.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಒಂದು ವರ್ಷದಲ್ಲಿ ಕೋ-ಜಾ ಸರ್ಕಾರ ಕಡಿದುಹಾಕಿದ್ದೇನು?

ಜನವರಿ 31ರ ಸಂಚಿಕೆಯ ನಮ್ಮ ಪ್ರಶ್ನೆ: ಇಂಗ್ಲಿಷ್ ಬಾರದವರು ನಕ್ಸಲೈಟ್ ಆಗ್ತಾರಂತೆ?

ನಿಮ್ಮ ಉತ್ತರ: 'ನಕ್ಸಲೈಟ್' ಇರಲಿ, ಮಂತ್ರಿ, ಪ್ರಧಾನಿಗಳಾಗುವುದೇ ನಿಜವಾದ ದುರಂತ

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕೆ. ಶ್ರೀನಿವಾಸ್, ಮಂಡ್ಯ

ವೀರೇಂದ್ರ ಹೆಗ್ಗಡೆ ಕಾಲೇಜಲ್ಲಿ ನಂಗಾನಾಚ್

ತಲೇಕೊಳ್ಳಲಿಕ್ಕೆ ಈತ ಧರ್ಮಾಧಿಕಾರಿ. ದಿನ ಬೆಳಗಾದರೆ ನಾಕು 'ಎದ್ದೇಳು ಮಂಜುನಾಥ...' ಎಂದು ಸಾಕ್ಷಾತ್ ದೇವರನ್ನೇ ನಿದ್ರೆಯಿಂದ ಎಬ್ಬಿಸುವಂಥ ದೈವಭಕ್ತ. ಆದರೆ ತನ್ನದೇ ಡೆಂಟಲ್ ಕಾಲೇಜಿನ ಹುಡುಗ-ಹುಡುಗಿಯರನ್ನು ರಾತ್ರಿ ಪೂರ್ತಿ ಕುಡಿದು ಪೋಲಿ ಡ್ಯಾನ್ಸ್ ಮಾಡಲು ಅವಕಾಶ ಕೊಡುತ್ತಾರೆ. ಇನ್ನು ಬೆಳಗ್ಗೆ ಎಬ್ಬಿಸಿ ಓದಿಕೊಳ್ತಿಪ್ಪಾ ಎನ್ನುವ ಮಾತೆಲ್ಲಿ ಬರಬೇಕು ಎಂದರೆ 'ಇದೇನಪ್ಪಾ ಪ್ರಾರಬ್ಧ' ಅಂತಾ ನಿಮಗನ್ನಿಸಬಹುದೇನೊ?

ಆದರಿದು ನಿಜ.


ಮೊನ್ನೆ ಜನವರಿ 21ರ ರಾತ್ರಿ ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥ ಡೆಂಟಲ್ ಸೈನ್ಸ್ ಕಾಲೇಜಿನ (SDMDS) ಅಷ್ಟೂ ವಿದ್ಯಾರ್ಥಿ-ವಿದ್ಯಾರ್ಥಿನಿಯರೆಲ್ಲಾ Extract ಎನ್ನುವ ಪೋಲಿ ಕಾರ್ಯಕ್ರಮ ವೊಂದನ್ನು ಕಾಲೇಜಿನ ಕ್ಯಾಂಪಸ್ಸಿನಲ್ಲೇ ನಡೆಸಿ ರಾದ್ಧಾಂತ ಮಾಡಿಕೊಂಡಿದ್ದಾರೆ. ಸ್ವತಃ ಪ್ರಭಾರಿ ಪ್ರಿನ್ಸಿಪಾಲ್ ಡಾ. ಶ್ರೀನಾಥ್ ಕೊಠಾರಿ ಹಾಜರಿದ್ದು ಹುಡುಗಿಯರ ಬೆತ್ತಲೆ ಕುಣಿತ, ಮದ್ಯ-ಗಾಂಜಾ ಗಳ ಸರಬರಾಜಿನ ಉಸ್ತುವಾರಿ ನೋಡಿಕೊಂಡು ಚಪ್ಪಾಳೆ ತಟ್ಟುತ್ತಾ ಕೂತಿದ್ದನೆಂಬ ಸುದ್ದಿಯಂತೂ ಹುಬ್ಬಳ್ಳಿ ಧಾರವಾಡದ ಜನರಿಗೆ ವಾಕರಿಕೆ ತರಿಸಿಬಿಟ್ಟದೆ. ನಂತರ ಇವೆಲ್ಲಾ ದೊಡ್ಡ ಗಲಾಟೆ ಯಾಗಿ, ಜನರೂ ಬೀದಿಗಿಳಿದು ಪ್ರತಿಭಟಿಸಿದ ಕಾರಣ ಧಾರವಾಡ ವಿದ್ಯಾನಗರದ ಇನ್ಸ್‌ಪೆಕ್ಟರ್ ಮುರಗೋಡ್ ಒಂದು ಕೇಸ್ ಬುಕ್ ಮಾಡಿದ್ದಾರೆ.

ಪ್ರಿನ್ಸಿಪಾಲ್ ಶ್ರೀನಾಥ್ ಕೊಠಾರಿ, ದೈಹಿಕ ಶಿಕ್ಷಣ ನಿರ್ದೇಶಕ ಶಿವಪ್ಪ ಕೊಪ್ಪಳ, ಹಾಸ್ಟೆಲ್ ವಾರ್ಡನ್ ಪ್ರಕಾಶ್ ಕೊಪ್ಪಳ ಆರೋಪಿಗಳಾಗಿದ್ದಾರೆ. ಇವರ ಜೊತೆಗೆ ಅಶ್ಲೀಲ ಕುಣಿತ-ಕುಡಿತ ಮುಂತಾದ 'ಸಾಂಸ್ಕೃತಿಕ ಚಟುವಟಿಕೆ' ಯಲ್ಲಿ ನಿರತರಾಗಿದ್ದ ಸ್ಟೂಡೆಂಟ್ಸ್‌ಗಳಾದ ವರುಣ್ ಶೆಟ್ಟಿ, ಆದರ್ಶ ಕುಡ್ವಾ, ಉತ್ತಮ್ ಶೆಟ್ಟಿ ಎಂಬ ಹುಡುಗರೂ, ಪೂಜಾ ಬಾಳಿಗಾ, ಸೋನಾಲಿ, ಸ್ನೇಹ, ಆಕಾಂಕ್ಷ ದೀಪ ಎಂಬ ಪೆದ್ದು ಸುಂದರಿಯರ ವಿರುದ್ಧವೂ ಕೇಸು ಬಿದ್ದಿವೆ.

ಅಲ್ಲಿಗೆ ದೇವರುದಿಂಡಿರು, ಧರ್ಮ-ಕರ್ಮಗಳ ಹೆಸರಿನಲ್ಲಿ ವಿದ್ಯಾವ್ಯಾಪಾರ ನಡೆಸುತ್ತಿರುವ ಧರ್ಮಾಧಿ ಕಾರಿ ವೀರೇಂದ್ರ ಹೆಗ್ಗಡೆಯ ಜನ್ಮ ಸಾರ್ಥಕವಾ ದಂತಾಯಿತಲ್ಲವೆ?


ಹಲ್ಕಾ ಸಂಸ್ಕೃತಿಯ ಕಾಲೇಜು

1986ರಲ್ಲಿ ಧಾರವಾಡದಲ್ಲಿ ಧರ್ಮಸ್ಥಳ ಮಂಜುನಾಥನೆಂಬ ದೇವರ ಹೆಸರಿನಲ್ಲಿ ಶುರುವಾದ ಈ SDM ಡೆಂಟಲ್ ಕಾಲೇಜಿಗೆ ಇವತ್ತು 5 ಸ್ಟಾರ್ ಸ್ಥಾನಮಾನವಿದೆ. 5 ಸ್ಟಾರ್ ಅಂದರೆ ಅತ್ಯುತ್ತಮ ಶೈಕ್ಷಣಿಕ ಹಾಗೂ ಸಂಶೋಧನಾತ್ಮಕ ವಾತಾವರಣ, ಸೌಲಭ್ಯಗಳಿರುವ ಕಾಲೇಜು ಎಂದರ್ಥ. ಡಾ. ಚಾವಾಭಾಸ್ಕರ ರಾವ್ ಕಾಲೇಜು ಶುರುವಾದಾಗಿನಿಂದ ಪ್ರಿನ್ಸಿಪಾಲರಾಗಿದ್ದಾರೆ. 1987 ರಲ್ಲಿ ಸಣ್ಣದೊಂದು ದಂತ ವೈದ್ಯಕೀಯ ಆಸ್ಪತ್ರೆಯಾಗಿ ಪ್ರಾರಂಭವಾಗಿ 89ರ ವೇಳೆಗೆ ಹುಬ್ಬಳ್ಳಿ-ಧಾರವಾಡ ನಡುವೆ ಹತ್ತೆಕರೆ ಭೂಮಿ ವಶಪಡಿಸಿಕೊಂಡು ಮೇಲೆದ್ದ ಕಟ್ಟಡಗಳಿಂದಾಗಿ SDM ಅವಳಿನಗರಗಳಲ್ಲಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಎನಿಸಿ ಕೊಂಡಿತ್ತು.



ಇವತ್ತು ಹತ್ತಿರತ್ತಿರ 250 ಡೆಂಟಲ್ ವಿದ್ಯಾರ್ಥಿ ಗಳಿರುವ, ಒಬ್ಬೊಬ್ಬರಿಂದಲೂ 2 ರಿಂದ 5 ಲಕ್ಷದ ತನಕ ಡೊನೇಶನ್ ಸುಲಿಯುವ ಕಾಲೇಜಾಗಿಯೂ SDM ಕುಖ್ಯಾತಿ ಪಡೆದಿದೆ. ಇಷ್ಟು ಕಾಸು ಕೊಟ್ಟು ಇಲ್ಲಿಗೆ ಬರುತ್ತಿರುವವರ ಪೈಕಿ ಹೆಚ್ಚಿನವರು ಉತ್ತರ ಭಾರತದ ಶ್ರೀಮಂತರ ಮಕ್ಕಳು. ಈ ಹಡಬೆಗಳ ಓಡಾಟ, ಖರ್ಚು ಮಾಡುವ ಪರಿ ಹೇಗಿದೆಯೆಂದರೆ ಇವರ ಶೋಕಿಗಳನ್ನು ಪೂರೈಸಲೆಂದೇ ಅವಳಿ ನಗರದ ಸುತ್ತಾಮುತ್ತಾ ಅರ್ಧ ಡಜನ್ ಡಾಬಾಗಳು, ಡ್ರೈವ್ ಇನ್ ರೆಸ್ಟೋರೆಂಟ್‌ಗಳು ತಲೆ ಎತ್ತಿವೆ. ಅಲ್ಲೆಲ್ಲಾ ಹುಡುಗಿಯರೊಂದಿಗೆ ತಿಂದು-ಕುಡಿದು ಗಾಂಜಾ ಸೇದಿ ಸುಸ್ತಾದ ಮೇಲೆ ವಿಶ್ರಾಂತಿ ಪಡೆಯಲು ಜಾಗ ಬೇಡವೆ? ಹಾಗಾಗಿ Travel inn, ಮಯೂರ ರೆಸಾರ್ಟ್, ರೆಡ್‌ಫೋರ್ಟ್‌ನಂತಹ ಲಾಡ್ಜ್‌ಗಳೂ ತಲೆ ಎತ್ತಿವೆ.

ಅವಳಿ ನಗರದ ಗಾಂಜಾ ಸ್ಮಗ್ಲರ್ ಮಗಜಿ ಕೊಂಡಿಗಂತೂ ಈಗ ಬಿಡುವಿರದಷ್ಟು ಕೆಲಸ. ನಿತ್ಯ ನೂರಾರು ಹುಡುಗ-ಹುಡುಗಿಯರ ಗಾಂಜಾ ಬೇಡಿಕೆ ಪೂರೈಸಬೇಕಲ್ಲ ಅವನು, ಪಾಪ ಇರೋನೊಬ್ಬ ಎಷ್ಟೂಂತ ಕಷ್ಟಪಡಲು ಸಾಧ್ಯ!



ಚಾವಾ ಭಾಸ್ಕರ್‌ರಾವ್

ಇವೆಲ್ಲಾ SDM ಕಾಲೇಜಿನ ನಿತ್ಯದ ರಾಮಾಯಣಗಳು. ಅದೇನೆ ಇರಲಿ. ಜನವರಿ 21 ರಂದು ನಂಗಾನಾಚ್ ನಡೆಯುವ ಹೊತ್ತಿಗಾಗಲೇ ಕಾಲೇಜಿನ ಸತ್ತೂರ ಬಡಾವಣೆಯ ಜನರ ಸೈರಣೆ ಮೀರಿಹೋಗಿತ್ತು. ಹುಡುಗರ ನಿತ್ಯ ಕುಡಿತ, ಕುಣಿತ ಗಲಾಟೆಗಳಿಂದ ರೋಸಿಹೋಗಿದ್ದ ಅವರಿಗೆ ಜನವರಿ 21ರ 'ಎಕ್ಸ್‌ಟ್ರಾಕ್ಟ್'ನ ಹಲ್ಕಾ ಪ್ರೋಗ್ರಾಂ ಕುದ್ದು ಹೋಗುವಂತೆ ಮಾಡಿತ್ತು. ಅವತ್ತಿನ ಕಾರ್ಯಕ್ರಮಕ್ಕೆ ಪೊಲೀಸರು ಸಂಜೆ 6 ರಿಂದ ರಾತ್ರಿ 10 ಗಂಟೆವರೆಗೆ ನಡೆಸಲಷ್ಟೇ ಅನುಮತಿ ಕೊಟ್ಟಿದ್ದರು. ಆದರೆ ರಾತ್ರಿ ಹತ್ತು ಗಂಟೆಯ ನಂತರವೇ ಮಂಜುನಾಥ ದೇವರ ಈ ಶಿಷ್ಯರು ಎಲ್ಲವನ್ನೂ ಎಕ್ಸ್‌ಟ್ರ್ಯಾಕ್ಟ್ (ಹೊರತೆಗೆಯಲು) ಬಯಸಿದ್ದರು. ಅವರ ಮೋಜಿಗೆಂದೇ ತೃಪ್ತಿ ಇಂಟರ್‌ನ್ಯಾಷನಲ್ ಹೊಟೇಲಿನಿಂದ ಲಿಕ್ಕರ್ ಸರಬರಾಜಾಗಿತ್ತು, ಗಾಂಜಾ ಸಪ್ಲೈಯರ್ ಮಗಜಿ ಕೊಂಡಿ, ನೇತ್ರಾಜೆ, ಬೋ... ಮುಂತಾದವರೂ ತಮ್ಮ ಕೈಲಾದಷ್ಟು ಪೂರೈಸಿದ್ದ... ಹುಡುಗಿಯರೂ ಅರೆಬೆತ್ತಲಾಗಿ ಹುಡುಗರೂ ಥಿಲ... ಜಮಾಯಿಸಿ ಬಿಟ್ಟಿದ್ದರು. ಸ್ವತಃ ಅವಿವೇಕಿ ಪ್ರಿನ್ಸಿಪಾ... ಶ್ರೀನಾಥನೆ ಜೊಲ್ಲು ಸುರಿಸುತ್ತಾ ಚಕ್ಕಳಬಕ್ಕಳ ಹಾ... ಕೊಂಡೇ ಕುಳಿತುಬಿಟ್ಟಿದ್ದ.


ಇಷ್ಟೆಲ್ಲಾ ಸೌಲಭ್ಯ ಕಲ್ಪಿಸಿದ ಮೇಲೆ ಲಂ... ಲಗಾಮೇನು, ಕುಡಿದು ರಿಚ್ಚಾಗಿದ್ದ ಹುಡುಗ-ಹುಡು... ಯರ ಅರೆಬೆತ್ತಲೆ ನಂಗಾನಾಚ್ ಚಾಲೂ ಆಗೇಬಿಟ್ಟಿ... ಯಾವ್ಯೊಳೂ ಯಾವನ್ನ ತಬ್ಬಿಕೊಂಡಳೊ, ಯಾ... ಕೈ-ಕಾಲುಗಳು ಯಾವ್ಯಾವ ಸಂದಿಗೊಂದಿಗಳಲ್ಲಿ ತೂ... ಕೊಂಡವೊ ಬಲ್ಲವರ್ಯಾರು. ಒಟ್ಟಿನಲ್ಲಿ ಸಿಟಿಗಳ... ನಡೆಯುವ ಕ್ಯಾಬರೆ, ಲೈವ್‌ಬ್ಯಾಂಡ್‌ಗಳನ್ನು ಮೀರಿ... ವಂತಹ ನಂಗಾನಾಚ್ ಒಂದು ಧರ್ಮ... ಮಂಜುನಾಥನ ಹೆಸರಿನ ಕಾಲೇಜಿನಲ್ಲಿ ನಡೆ... ಹೋಯಿತು.

ಮಂಜುನಾಥ ಸ್ವಾಮಿಯೇನೋ 'ಬೇ... ಭಕ್ತರನ್ನು ಬೇಗ ಬಂದು ಎಬ್ಬಿಸುತ್ತಾರಲ್ಲ' ಎಂ... ರಾತ್ರಿ ಬೇಗನೆ ನಿದ್ರೆ ಹೋದನೇನೊ. ಆ... ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವ... ಯಾವ ದಿಕ್ಕಿಗೆ ಮುಖ ಮಾಡಿ ಮಲಗಿದ್ದರ... ಮಾತೆತ್ತಿದರೆ ಹಿಂದೂ ಧರ್ಮ, ಹಿಂದ... ಸಂಸ್ಕೃತಿ ಎಂದೆಲ್ಲಾ ಬೊಂಬಡಾ ಹಾಕುವ ... ಧರ್ಮಾಧಿಕಾರಿ ತನ್ನ ಯಜಮಾನಿಕೆ... ಕಾಲೇಜಿನಲ್ಲಿ ಯಾವ ಸಂಸ್ಕೃತಿ ಬೆಳೆ... ಎಂದು ಒಂದು ಸಾರಿ ಇಣುಕಿ ನೋ... ಬಾರದಾ? ಈಗ ನಂಗಾನಾಚ್ ಆರೋ... ಪದ ಮೇಲೆ ವಿದ್ಯಾನಗರ ಪೊಲೀಸ... ಸೆಕ್ಷನ್ 109/36, 37 ರಡಿ ಕ್ರಿಮಿನ... ಕೇಸು ಹಾಕಿದ್ದಾರೆ. ಜನ ಬೀದಿಗಿಳಿ... ಗಲಾಟೆ ಮಾಡುತ್ತಿದ್ದಾರೆ. ಪತ್ರಿಕೆಗ... ಉಗಿದು ಬರೆದಿವೆ. ಇಷ್ಟಾದ... ಮ್ಯಾನೇಜ್‌ಮೆಂಟಿನ ಭಂಡ... ಎಷ್ಟಿದೆಯೆಂದರೆ ಕ್ಯಾಬರೆ ... ಡಾ. ಶ್ರೀನಾಥ ಕೊಠಾರಿ... ಈಗಲೂ ಕಾಲೇಜಿನ ಪ್ರಭ... ಪ್ರಿನ್ಸಿಪಾಲ್ ಆಗಿ ಮುಂದುವ... ದ್ದಾನೆ.

ಇನ್ನೊಂದು ಮುಖ್ಯ ವಿಷ... ಏನೆಂದರೆ SDM ಕಾಲೇಜಿ... ನಂಗಾನಾಚ್ ನಡೆದಿರುವ್ದು ಇದೇ ಮೊದಲ ಸಲವಲ್ಲ. ... ವರ್ಷ ಜನವರಿ ತಿಂಗ... ಇಂತಹ ಅರೆಬೆತ್ತಲೆ ಕುಣಿತ, ... ತವೂ ಇಲ್ಲಿ ನಡೆಯುತ್ತಿತ್ತು. ಆ... ವಿಷಯ ಹೊರಬೀಳುತ್ತಿರ... ಅಷ್ಟೆ. ಆದರೆ ಈ ಬಾರಿ ಕಾಲೇ... ಕೆಲ ಸಿಬ್ಬಂದಿಯ... ನಂಗಾನಾಚ್ ಬಗ್ಗೆ ಅಸಹ್ಯ ಪಟ್ಟುಕೊಂಡು ಪೊಲೀ... ಸುದ್ದಿ ಮುಟ್ಟಿಸಿದ್ದಾರೆ. ಜೊತೆಗೆ ಜನವರಿ 21ರ ಶುರುವಾದ ನಂಗಾನಾಚ್ ಬೆಳಗಿನ ಜಾವ 4 ಗಂಟೆ ವರೆಗೂ ಮುಂದುವರೆದಿತ್ತಲ್ಲಾ, ಇವರ ಹಾಡು ಕುಣ... ಗಲಾಟೆಗಳಿಂದ ರೋಸಿ ಹೋಗಿದ್ದ ಸತ್ತೂರ್ ಬಡಾ... ಜನರೂ ಪೊಲೀಸರಿಗೆ ದೂರಿದ್ದರು.

ಇನ್ಸ್‌ಪೆಕ್ಟರ್ ಮುರಗೋಡ್ ಬಂದು ... ಕ್ರಿಮಿನಲ್ ಕೇಸ್ ಜಡಿದಿದ್ದಾರೆ.

ಎಲ್ಲಿಗೆ ಬಂತು SDM ಕಾಲೇಜಿನ ಮಯ... ವೀರೇಂದ್ರ ಹೆಗ್ಗಡೆಗಂತೂ ಎಚ್ಚರವಿಲ್ಲ ನೀನಾದರೂ 'ಎದ್ದೇಳು ಮಂಜುನಾಥ'.





ಧರ್ಮಸ್ಥಳ ಮಂಜುನಾಥ ಕಾಲೇಜಿನ ಸುಸಂಸ್ಕೃತ ವಿದ್ಯಾರ್ಥಿಗಳ ಶೋ

ಪಿ. ಲಂಕೇಶ್ ಆದರ್ಶ ಶಾಲೆ ಪ್ರಶಸ್ತಿ

ಗೈಡ್ ಪತ್ರಿಕಾ ಬಳಗವು ಈ ವರ್ಷದಿಂದ ಅತ್ಯುತ್ತಮ ಸರ್ಕಾರಿ ಶಾಲೆಗಳಿಗೆ (1 ರಿಂದ 10ನೇ ತರಗತಿವರೆಗೆ) ನೀಡಲಿರುವ ಪ್ರಶಸ್ತಿ ಇದು.

20 ವರ್ಷಗಳ ಕಾಲ ಶಿಕ್ಷಕರಾಗಿದ್ದ ಪಿ. ಲಂಕೇಶ್ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯನ್ನು ಆಶಿಸಿದ್ದರು. ಈ ನಾಡಿನ ಖ್ಯಾತ ಪತ್ರಕರ್ತರಾಗಿ ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸುವ ಬಗ್ಗೆ, ಉತ್ತಮ ವಾತಾವರಣ, ಶಿಕ್ಷಕ-ವಿದ್ಯಾರ್ಥಿಗಳ ನಡುವಿನ ಕಲಿಕೆ ರಚನಾತ್ಮಕ-ಒಡನಾಟಗಳ ಬಗ್ಗೆ ಕಾಳಜಿ ತೋರಿದ್ದವರು.

'ಗೈಡ್'ನ ಕಾಳಜಿಗಳೂ ಇದೇನೆ.

ಈಗ ನೀವು ಮಾಡಬೇಕಿರುವುದು ಇಷ್ಟೆ. ನೀವು ಕಂಡಿರುವ ಇಂತಹ ಅತ್ಯುತ್ತಮ ಸರ್ಕಾರಿ ಶಾಲೆಯ ಬಗ್ಗೆ ನಮಗೆ ವಿವರಗಳ ಸಮೇತ ಬರೆದು ಫೋಟೋದೊಂದಿಗೆ ಕಳುಹಿಸಿ. ಶಿಕ್ಷಣ ತಜ್ಞರಿರುವ ತೀರ್ಪುಗಾರರು ಈ ವರ್ಷದ 'ಆದರ್ಶ ಸರ್ಕಾರಿ ಶಾಲೆ'ಯನ್ನು ಆರಿಸುತ್ತಾರೆ. ಬರುವ ಮಾರ್ಚ್ 8 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಲಂಕೇಶ್ ಹಾಗೂ ಗೈಡ್ ಪತ್ರಿಕೆಯ ವಾರ್ಷಿಕೋತ್ಸವದಲ್ಲಿ ಆದರ್ಶ ಶಾಲೆಯ ಮುಖ್ಯಸ್ಥರನ್ನು ಸನ್ಮಾನಿಸಿ "ಪಿ. ಲಂಕೇಶ್ ಆದರ್ಶ ಶಾಲೆ ಪ್ರಶಸ್ತಿ" ನೀಡಲಾಗುವುದು.



ಆದರ್ಶ ಶಾಲೆಯ ಬಗ್ಗೆ ನಮ್ಮ ಓದುಗರು, ಅದೇ ಶಾಲೆಯ ವಿದ್ಯಾರ್ಥಿಗಳು, ಸ್ವತಃ ಶಿಕ್ಷಕರೂ ಬರೆದು ತಿಳಿಸಬಹುದು. ನಿಮ್ಮ ಬರಹ ನಮಗೆ ಫೆಬ್ರವರಿ 15 ರೊಳಗೆ ತಲುಪಲೇಬೇಕು.

ಮುಂದಿನ ಗೈಡ್ ಸಂಚಿಕೆಯಲ್ಲಿ ವಿಜೇತರ ವಿವರ ಪ್ರಕಟಿಸಲಾಗುವುದು.

ಮನುಷ್ಯನ ನೀಚತನ

ಅಫ್ಜಲ್ ಗುರುವನ್ನು ಆದಷ್ಟು ಬೇಗ ಗಲ್ಲಿಗೇರಿಸಬೇಕು ಎಂದು ಬಿಜೆಪಿಗಳು ಬೊಬ್ಬೆಹಾಕುತ್ತಿವೆ. ಬಿಜೆಪಿಯಂತೆಯೇ ಹಿಂದೂತ್ವ ಎಂಬ ವಿಕೃತ ಸಿದ್ಧಾಂತದಿಂದಲೇ ಜನಿಸಿದ ಬಾಳ್ ಠಾಕ್ರೆ ಎಂಬಾತ ಅಫ್ಜಲ್ ಗುರು ಸಲ್ಲಿಸಿರುವ ಕ್ಷಮಾದಾನಪತ್ರವನ್ನು ತಿರಸ್ಕರಿಸದೇ ಭಾರತದ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ತಮ್ಮ ಅವಿವೇಕತನವನ್ನು ಪ್ರದರ್ಶಿಸಿದ್ದಾರೆ ಎಂದು ಮೊನ್ನೆ ಅಸಂಬದ್ಧವಾಗಿ ಕೂಗಾಡಿದ್ದಾನೆ.


ಬಿಜೆಪಿಗಳಿಗೂ, ಠಾಕ್ರೆಗೂ ಅಫ್ಜಲ್ ಗುರು ಹೆಣದ ಮೇಲೆ ತಮ್ಮ ದ್ವೇಷದ ರಾಜಕೀಯ ಮಾಡುವ ತವಕ. ಆದರೆ ಮರಣ ದಂಡನೆಯಡಿ ಸಾವಿನದವಡೆಯಲ್ಲಿ ಬದುಕುತ್ತಿರುವ ಅಫ್ಜಲ್ ಗುರುವಿನ ಒಡಹುಟ್ಟಿದ ಸಹೋದರರೇ ಆತನ ಹೆಸರಲ್ಲಿ ವಸೂಲಾತಿಗಿಳಿದಿರುವುದು ಒಂದು ದೊಡ್ಡ ದುರಂತ.

ಸಂಸತ್ತಿನ ಮೇಲೆ ಡಿಸೆಂಬರ್ 13, 2001ರಲ್ಲಿ ನಡೆದ ದಾಳಿಗೆ ಸಂಬಂಧಿಸಿದಂತೆ ಅಫ್ಜಲ್ ಗುರುವನ್ನು ಬಂಧಿಸಿ ಐದು ವರ್ಷಗಳೇ ಆದವು. ಈ ಐದು ವರ್ಷಗಳ ಅವಧಿಯಲ್ಲಿ ಆತನ ಪರವಾಗಿ ನ್ಯಾಯಾಲಯದಲ್ಲಿ ನಿಂತಿದ್ದು ಆತನ ಹೆಂಡತಿ ತಬಸ್ಸುಮ್. ಒಂದು ದಿನವೂ ಅಫ್ಜಲ್ ಗುರುವನ್ನು ನೋಡಲು ಬಾರದಿದ್ದ, ಆತನಿಗೆ ಓರ್ವ ವಕೀಲನಾದರೂ ಸಿಗಲೆಂದು ಪ್ರಯತ್ನಿಸದಿದ್ದ ಆತನ ಸಹೋದರರು ಮಾತ್ರ ಆತನ ಹೆಸರಿನಲ್ಲಿ ಕಾಶ್ಮೀರಿಗಳಿಂದ ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಆ ಹಣದಲ್ಲಿ ಅಫ್ಜಲ್‌ಗಾಗಲೀ, ಅವನ ಪತ್ನಿ ತಬಸ್ಸುಮ್‌ಗಾಗಲೀ ನಯಾಪೈಸೆಯನ್ನೂ ನೀಡದೆ ತಮಗೆ ಬೇಕಿರುವ ಕಾರ್, ಕಾರ್ಖಾನೆ, ಸೈಟುಗಳನ್ನು ಕೊಂಡಿದ್ದಾರೆ.



ಅಫ್ಜಲ್ ಗುರು

ಮೊನ್ನೆ ಪತ್ರಕರ್ತರೊಂದಿಗೆ ಮಾತನಾಡುತ್ತಾ "ಅಫ್ಜಲ್‌ನನ್ನು ಗಲ್ಲಿಗೇರಿಸಬಾರದೆಂದು ಇವತ್ತು ಕಾಶ್ಮೀರದಲ್ಲಿ ಪ್ರತಿಭಟಿಸುತ್ತಿರುವವರ್‍ಯಾರೂ ಇಲ್ಲಿವರೆಗೂ ನನ್ನ ಸಹಾಯಕ್ಕೆ ಬಂದಿಲ್ಲ" ಎಂದು ತಬಸ್ಸುಮ್ ಹೇಳಿದಾಗ ಅದು ಸ್ಥಳೀಯ ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಕಟಗೊಂಡಿತು. ಅದನ್ನು ನೋಡಿ ಕಾಶ್ಮೀರದಲ್ಲಿನ ವಿವಿಧ ಸಂಘಟನೆಗಳ ನಾಯಕರು ದಂಗಾದರು. ಒಬ್ಬೊಬ್ಬರಾಗಿ ತಬಸ್ಸುಮ್‌ಗೆ ಫೋನ್ ಮಾಡಿದ ಅವರೆಲ್ಲರೂ "ಅಫ್ಜಲ್‌ಗೆ ಸಹಾಯ ಮಾಡಲೆಂದು ನಾವು ಅವನ ಸಹೋದರರಾದ ಐಜಲ್ ಮತ್ತು ಯಾಸಿನ್‌ಗೆ ಹಣ ನೀಡಿದ್ದೇವೆ" ಎಂದು ಹೇಳಿದಾಗಲೇ ಆ ಸಹೋದರರ ಬಣ್ಣ ಬಯಲಾಗಿದ್ದು.



ಐಜಲ್ ಗುರು

"ಒಂದೆಲ್ಲ, ಅಫ್ಜಲ್‌ನನ್ನು ನನ್ನ ಮಗನಂತೆ ಪ್ರೀತಿಸುತ್ತಿದ್ದೆ, ಆದರೆ ಈಗ ಅವನನ್ನು ನೆನಪಿಸಿಕೊಂಡರೆ ನನ್ನ ರಕ್ತ ಕುದಿಯುತ್ತದೆ" ಎಂದು ಹೇಳುವ ಐಜಲ್‌ಗೆ ಅದೇ ಅಫ್ಜಲ್‌ಗುರುಗೆ ಸಹಾಯ ಮಾಡಲೆಂದು ಕಣ್ಣೀರು ಇಡುತ್ತಾ ಹಣ ಬೇಡಿದ್ದು ಸುಲಭವಾಗಿತ್ತು.

ಮನುಷ್ಯನ ನೀಚತನಕ್ಕೆ, ಇದಕ್ಕಿಂತ ಉದಾಹರಣೆ ಬೇಕಾ....

ಅದ್ಯಾಕ್ ಗೌಡ್ರೆ ಎಂಟನೇ ಕ್ಲಾಸಿಗೆ ಇಸುಗೂಲು ಬುಟ್ರಿ?

ನಮ್ಮ ಮಂಡಲ ಪಂಚಾಯ್ತಿಯ ಮಾಜಿ ಛೇರ್ಮನ್ ದೇವೇಗೌಡರು, ನಿಗಮ ಮಂಡಳಿಗಳಿಗೆ ಅತೃಪ್ತ ಶಾಸಕರನ್ನು ನೇಮಕ ಮಾಡಲೆಂದು ಸ್ವತಃ ತಾವೇ ಕುಳಿತರಂತಲ್ಲಾ. ಈ ಸುದ್ದಿ ಗೊತ್ತಾದ ಕೂಡಲೇ ಮೀಸಲು ಶಾಸಕ ಅನ್ನದಾನಿ ತಾನೂ ಯಾವುದಾದರೂ ಒಂದು ನಿಗಮದ ಕುರ್ಚಿ ಹಿಡಿಯುವ ಸಲುವಾಗಿ ದೇವೇಗೌಡರ ಎದುರು ವಿಧೇಯನಾಗಿ ನಿಂತನಂತಲ್ಲಾ. ಇಂತಹ ಸಮಯದಲ್ಲಿ ಗೌಡರು ಅಭಿನಯ ಸಾಮ್ರಾಟನಂತೆ ದಿವ್ಯ ನಿರ್ಲಕ್ಷ್ಯವನ್ನು ಅಭಿನಯಿಸಲಾಗಿ ಅನ್ನದಾನಿ ಪೆಚ್ಚಾದನಂತಲ್ಲಾ. ಆತ ಕೊಠಡಿಯಿಂದ ಹೊರಗೋಗಿ ನಿಂತು, ಗೌಡರ ಗಮನ ಸೆಳೆದು ಕನಿಷ್ಠ ಕನ್ನಡ ಸಂಸ್ಕೃತಿ ಇಲಾಖೆಯ ಕುರ್ಚಿಯನ್ನಾದರೂ ಹಿಡಿಯಲೆಂದು ತಾರಕಸ್ವರದಲ್ಲಿ ಇಂಪಾಗಿ "ಕಿನ್ನರಿ ನುಡಿಸೋಣ ದನಿ ಚಂದವೊ ಬೆರಳಿನಂದವೊ ಎಲ್ಲೋ ಜೋಗಪ್ಪ ನಿನ್ನ ಅರಮನೇ" ಎಂದು ಹಾಡಲು ಶುರುಮಾಡಿದನಂತಲ್ಲಾ, ಇದನ್ನು ಕೇಳಿ ಸಿಟ್ಟಾದ ದೇವೇಗೌಡರು "ಏನದು ಗಲಾಟೆ?" ಎಂದು ಹೊರಬಂದು ನೋಡಿದರೆ ಅನ್ನದಾನಿ ಅಧಿಕಾರದ ಹಸಿವಿನಿಂದ ಕಣ್ಮುಚ್ಚಿ ಹಾಡುತ್ತಿದ್ದನಂತಲ್ಲ, ಅವಾಕ್ಕಾದ ಗೌಡರು "ಅಲ್ಲಯ್ಯಾ ಅನ್ನದಾನಿ, ಶಾಸನ ಮಾಡತಕ್ಕಂತಹ ಅಧಿಕಾರವಿರುವ ಶಾಸಕ ನೀನು. ಅಂತಾದ್ದರಲ್ಲಿ ಹಾಡನ್ನು ಹೇಳ್ತಿಯಲ್ಲಾ, ಮೊದಲು ಇಂತಹ ದುರಭ್ಯಾಸಗಳನ್ನು ಬಿಡು" ಎಂದು ಒಳಗೋದರಂತಲ್ಲಾ, ಥೂತ್ತೇರಿ!



* * * * * * * *

ಇತ್ತ ಭೂಸೇನಾ ನಿಗಮದ ಕುರ್ಚಿಯನ್ನು ಉಗ್ರವಾಗಿ ನಿರಾಕರಿಸಿರುವ ಆರಗದ ಜ್ಞಾನೇಂದ್ರನೆಂಬ ತೀರ್ಥಹಳ್ಳಿ ಶಾಸಕ ತನ್ನ ನಿರಾಕರಣೆಗೆ ಸಕಾರಣವೊದಗಿಸುವಲ್ಲಿ ವಿಫಲವಾಗಿದ್ದರೂ ಅವರ ಸಾಧನೆಗಳನ್ನು ಅನಿವಾರ್ಯವಾಗಿ ನಾವು ಗುರುತಿಸಲೇಬೇಕಲ್ಲಾ. ಸಮಾಜವಾದಿ ಹೋರಾಟದ ಗೋಪಾಲಗೌಡರ ಊರಿನವನಾದ ಜ್ಞಾನೇಂದ್ರ, ಎಲ್ಲೂ ಅಂತಹ ಧೀಮಂತನ ಹೆಸರನ್ನೇಳದೆ, ಗೋಲ್ವಾಲ್ಕರನ ಜಪ ಮಾಡುವುದೂ ಅಲ್ಲದೆ, ತೀರ್ಥಹಳ್ಳಿಯಂತಹ ಕ್ಷೇತ್ರಕ್ಕೆ ನರಹಂತಕ ಮೋದಿಯನ್ನು ಕರೆಸಿ ಬಿಜೆಪಿಯ ಯಾರೂ ಮಾಡದ ಸಾಧನೆ ಮಾಡಿದ್ದಾರಂತಲ್ಲಾ. ಅಲ್ಲದೆ ಈತ ಮೂರು ಬಾರಿ ಗೆದ್ದು ಮಂತ್ರಿಯಾಗಬೇಕೆಂದು ಹಗಲು ರಾತ್ರಿ ಕನಸು ಕಾಣುತ್ತಿರಬೇಕಾದರೆ, ಕಳಪೆ ಕಾಮಗಾರಿಯ ಭೂಸೇನಾ ನಿಗಮದ ಅಧ್ಯಕ್ಷನಾಗುವುದು ಸುತರಾಂ ಇಷ್ಟವಿಲ್ಲವಂತಲ್ಲಾ, ಅಷ್ಟಕ್ಕೂ, ಈ ನಿಗಮ ಮಂಡಳಿಗಳ ಅಧಿಕಾರವೇನೆಂದರೆ ಇದಕ್ಕೊಬ್ಬ ಅಧ್ಯಕ್ಷವಿಲ್ಲದಿದ್ದರೂ ನಡೆದುಕೊಂಡು ಹೋಗುತ್ತೆ, ಈವರೆವಿಗೂ ನಡೆದಿಲ್ಲವೆ ಹಾಗೆ. ಏನಪ್ಪಾ ಎಂದರೆ, ಮಂಡಳಿ ಕುರ್ಚಿಯಲ್ಲಿ ಕುಳಿತು ಕಾರಾಶೇವು ತಿನ್ನಬಹುದು, ಕಾಫಿ, ಟೀ ಕುಡಿಯಬಹುದು, ಸರ್ಕಾರದ ಹಾದರಕ್ಕೆ ಹುಟ್ಟಿದವರಂತೆ ಅತೃಪ್ತಿಯಿಂದ ಕಾಲ ಹಾಕಬಹುದು. ಇಷ್ಟೇ ನೋಡಿ ನಿಗಮ ಮಂಡಳಿ-ಯಾಚಕ ಎಂದು ಸಾರ್ವಜನಿಕರು ಆಡಿಕೊಳ್ಳುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * * * * * *

ವಿಧಾನಸೌಧದ ಫೈಲುಗಳು, ರೇವಣ್ಣನ ರಗಳೆ, ಬಾಲಣ್ಣನ ಕಿರಿಕಿರಿ, ಅಪ್ಪನ ಅಸಂಬದ್ಧ ಸಲಹೆ ಇವೆಲ್ಲವುಗಳಿಂದಲೂ ತಾತ್ಕಾಲಿಕವಾಗಿ ಮುಕ್ತಿ ಪಡೆಯಲೆಂದು ಕುಮಾರಸ್ವಾಮಿ ಹಳ್ಳಿಯಲ್ಲಿ ಮಲಗುವ ನಾಟಕ ಕಡೆಗೂ ದಾವಣಗೆರೆ ಡಿ.ಸಿ. ಮೇಲೆ ಶಾನೆ ಪರಿಣಾಮ ಬೀರಿದೆಯಂತಲ್ಲಾ. ಅಲ್ಲಿನ ಡಿ.ಸಿ.ಯೂ ಕೂಡ ಹಳ್ಳಿಯನ್ನು ಹುಡುಕಿಕೊಂಡು ಹೋಗಿ, ಯಾವುದೋ ಮಕ್ಕಳ ಹಾಸ್ಟಲಿನಲ್ಲಿ ಮಲಗಿದ್ದು, ಕುಳಿತದ್ದು ಮತ್ತು ಕಕ್ಕಸು ಮಾಡಿದ್ದು, ಕಡೆಗೆ ಉಚ್ಚೆ ಹುಯ್ದು ಜಾಗವನ್ನು ಬಿಡದೆ ತೋರಿದ ಉದಯ ಟಿವಿಯ ಹುಚ್ಚರು, ಡಿ.ಸಿ. ಸಾಹೇಬರು ನಿದ್ರೆಯಲ್ಲಿ ಏನು ಕನವರಿಸಿದರೆಂಬುದನ್ನು ಮಾತ್ರ ತೋರಲಿಲ್ಲವಂತಲ್ಲಾ, ಡಿ.ಸಿ.ಯಾದವನು ತನ್ನ ಆಡಳಿತ ಕಟ್ಟಕಡೆವರೆಗೂ ತಲುಪಬೇಕಾದರೆ ಹೋಗಿ ಮಲಗುವುದಕ್ಕಿಂತ, ಪ್ರತಿ ಹೋಬಳಿಗೂ ಜಿಲ್ಲಾ ಕಚೇರಿಯನ್ನೇ ತೆಗೆದುಕೊಂಡು ಹೋಗಿ ಗ್ರಾಮೀಣ ಜನರ ಸಮಸ್ಯೆ ಬಗೆಹರಿಸಬಹುದೆಂಬುದನ್ನು ಈ ಡಿ.ಸಿ.ಗೆ ಯಾರಾದರೂ ಹೇಳಿಕೊಡಬೇಕಿದೆಯಲ್ಲಾ, ಇದೇನಾದರೂ ಆಗಲಿ ನಟ ಭಯಂಕರ ಶಿವರಾಂ ಎಂಬುವನಿಂದ ಮುಕ್ತಿ ಪಡೆದು ಚೇತರಿಸಿಕೊಳ್ಳುತ್ತಿರುವ ದಾವಣಗೆರೆಗೆ ಮತ್ತೊಬ್ಬ ಮಲಗುವ ಗಿರಾಕಿ ದೊರಕಿದನಲ್ಲಾ ಎಂದು ಮಂಡಿ ವರ್ತಕರು ಶಾನೆ ಹೊಟ್ಟೆಕಿಚ್ಚಿನಿಂದ ಆಡಿ ಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!!

* * * * * * * *

ನೂತನ ಸಹಕಾರ ಸಚಿವರಾದ ಜಿ.ಟಿ. ದೇವೇಗೌಡರನ್ನು ಮಾತನಾಡಿಸಿ ಅಭಿನಂದಿಸಬೇಕೆನಿಸಿದಾಗ ಆ ಕೂಡಲೇ ಅವರಿಗೆ ಫೋನ್ ಮಾಡಲಾಗಿ ಸುಮಾರು ಹೊತ್ತು ಫೋನ್ ರಿಂಗಾದ ನಂತರ "ಹಲೋ ಯಾರು" ಎಂದರು.

"ನಾನು ಸಾರ್ ಯಾಹೂ, ಹಿಂದೊಮ್ಮೆ ಫೋನ್ ಮಾಡಿದ್ದೆ, ಅಂತೂ ಮಂತ್ರಿಯಾದರಲ್ಲ, ಅಭಿನಂದನೆ ಸಾರ್."

"ಥ್ಯಾಂಕ್ಯು ಯಾವೂ ಅವರೆ."

"ಮಂತ್ರಿಯಾಗಿದ್ದಕ್ಕೆ ಸಂತೋಷವಾಯ್ತ ಸಾರ್?"

"ರಿಯಲಿ ಐ ಯಾಂ ವೆರಿ ಹ್ಯಾಪಿ."

"ತಾವು ಕೇವಲ ಎಂಟನೆ ತರಗತಿ ಓದಿದ್ರೂ ಎಷ್ಟು ಚೆನ್ನಾಗಿ ಇಂಗ್ಲಿಷ್ ಮಾತಾಡ್ತಿರಲ್ಲ ಸಾರ್?"

"ಎಂಟನೆ ತರಗತಿ ಅಂದ್ರೆ ಈ ಕಾಲದ್ದಲ್ಲ ಕಂಡ್ರೀ. ನಮ್ಮ ಕಾಲದ ಎಂಟನೆ ಕ್ಲಾಸು ಇವತ್ತಿನ ಹದಿನಾರನೆ ಕ್ಲಾಸಿಗೆ ಸಮ."

"ಅದ್ಯಾಕ್ ಸಾರ್ ಎಂಟನೇ ತರಗತಿಗೇ ಸ್ಕೂಲ್ ಬಿಟ್ರಿ?"

"ಎಂಟನೆ ತರಗತಿವರೆಗೂ ಓದಿದ್ದಿನಲ್ಲ ಅದ್ವೇಳಿ? ನಿಜವಾಗ್ಲು ನನಿಗೆ ಸ್ಕೂಲಿಗೆ ಹೋಗಕ್ಕೆ ಇಷ್ಟ ಇರಲಿಲ್ಲ. ಆದ್ರು ಯಂಗೊ ಎಂಟನೆ ಕ್ಲಾಸ್‌ವರೆಗೂ ಹೋದೆ. ಗಣಿತ ಇಂಗ್ಲಿಸ್ ನನಿಗೆ ಏನು ಮಾಡಿದ್ರು ತಲಿಗತ್ತಲಿಲ್ಲ, ಇನ್ನ ಎಸೆಸೆಲ್ಸಿವರಿಗು ಓದಿದ್ರೆ ಅದೇ ಇಂಗ್ಲಿಸ್ ಗಣಿತ ಹೋಯ್ತವೆ. ಏನು ಮಾಡದು ಅಂತ ಯೇಚ್ನೆ ಮಾಡಿ, ಇಸುಗೂಲಿಗೋಗದ್ನೆ ಬುಟ್ಬು ರಾಜಕೀಯಕ್ಕೆ ಬಂದೆ."

"ಒಳ್ಳೆದು ಮಾಡಿದ್ರಿ, ಸಾರ್. ಈಗ ಸಹಕಾರ ಸಚಿವರಾಗಿದ್ದೀರಲ್ಲ, ಈ ಖಾತೆಗೆ ಓದಿನ ಅಗತ್ಯ ಇಲ್ಲವೆ?"

"ಇಲ್ಲ, ಖಂಡಿತ ಇಲ್ಲ, ಇದೊಂತರ ಬಡ್ಡಿ ವ್ಯವಹಾರದ ಖಾತೆ. ಸಾಲ ಕೊಟ್ಟದ್ರೆ ನಿಗದಿಯಾಗಿ ಬಡ್ಡಿ ವಸೂಲಿ, ಮರುಸಾಲ, ಜಪ್ತಿ ಅಥವಾ ಪೂರ ಮಾಫಿ, ಇಷ್ಟೆ ಈ ಇಲಾಕೆ ಹಣೆ ಬರ. ಈಗ ಯಂಗಿದ್ರೂ ಸಾಲ ವಸೂಲಿನೆ ನಿಲ್ಲಿಸಿ ಮನ್ನಾ ಮಾಡನ ಅಂತ ಇದ್ದಿವಿ. ಆದ್ರಿಂದ ಈ ಖಾತೆಗೆ ವಿಶೇಷವಾದ ಓದಿನ ಹಿನ್ನೆಲೆ ಬೇಕಾಗಿಲ್ಲ. ಅವಿದ್ಯಾವಂತ್ರೂ ಈ ಖಾತೆ ನೋದಿಕಬವುದು."

"ನಿಜ, ಹಿಂದೆ ಈ ಖಾತೆ ನಿರ್ವಹಿಸಿದೋರ ಇತಿಹಾಸ ನೋಡಿದ್ರೆ, ಅವ್ರುರು ನಿಮ್ಮಂಥೋರೆಯಾ."

"ಇವತ್ತು ವಿದ್ಯೆ ಮುಖ್ಯ ಅಲ್ಲ ಕಂಡ್ರಿ. ಅಪ್‌ಟರಾಲ್ ದಿಪ್ಲಮೋ ಮಾಡಿದ್ದ ವ್ಯಕ್ತಿ ಪ್ರಧಾನಿ ಯಾಗಿದ್ದು ಬಂದ್ರು, ಇದಕೇನೇಳ್ತಿರಿ?"

"ಏನು ಹೇಳಂಗಿಲ್ಲ, ಡಿಪ್ಲಮೋ ವ್ಯಕ್ತಿ ಪ್ರಧಾನಿಯಾದ ಅಂದ್ರೆ ಎಂಟನೇ ತರಗತಿ ವಿದ್ಯಾರ್ಥಿ ಮುಖ್ಯಮಂತ್ರಿನೂ ಆಗಬವುದು."

"ಅಲ್ವೆ ಮತ್ತೆ? ಇವತ್ತು ಯಾರು ಕೇಳ್ತರೆ ಸ್ವಾಮಿ ಡಿಗ್ರಿಯಾ? ನನ್ನ ಜ್ವತೆ ಓದಿ ನನಿಗಿಂತ ಮುಂದಕೋಗಿ ಡಿಗ್ರಿ ಮಾಡಿದೋರು ಕ್ಲಲಿಸಿಲ್ದೆ ಅಲಿತಾ ಅವ್ರುರೆ. ನಾನು ಓದಿದ್ರೆ ಅವ್ರುರಂಗೇ ಅಲಿಬೇಕಾಗಿತ್ತು, ಏನೊ ದೇವ್ರುರು ವಳ್ಳೆ ಬುದ್ದಿ ಕೊಟ್ಟ, ಇಸುಗೂಲು ಬುಟ್ಟೆ, ಇವತ್ತು ಮಂತ್ರಿಯಾದೆ."

"ಒಳ್ಳೆದು ಸಾರು. ಸಹಕಾರಿ ಸಾಲ ಇವತ್ತು ಐದು ಸಾವಿರ ಕೋಟಿ ರೈತರ ಮೇಲೆ ಇದೆ. ಅದನ್ನ ಮನ್ನಾ ಮಾಡ್ತಿರ ಗೌಡ್ರೆ?"

"ಮಾಡಬೇಕು ಅಂತ ಕುಮಾರಸ್ವಾಮಿಗೇಳಿದ್ದೀನಿ. ಮನ್ನಾ ಮಾಡಿದ್ರೆ ಅವ್ರುರಿಗೆ ಪುನಃ ಸಾಲ ಕೊಡಬೇಕಾಯ್ತದೆ. ಆಗ ಎಲ್ಲಿಂದ ತರನ ಅಂತ ಯಲ್ಲ ಯೋಚನೆ ಮಾಡ್ತಯಿದ್ದಿವಿ."

"ಸಾಲ ಮನ್ನಾ ಮಾಡಕ್ಕೆ ಹೆದರಬೇಡಿ ಸಾರ್. ಯಾಕಂದ್ರೆ ಇನ್ನು ಎಂಟು ತಿಂಗಳಲ್ಲಿ ನಿಮ್ಮ ಖಾತೆ ಬದಲಾಗುತ್ತೆ, ಆಗ ಬಂದೋರೇನಾರ ಆಗ್ಲಿ ಈಗಂತೂ ನೀವು ಸಾಲ ಮನ್ನಾ ಮಾಡಿ ನಮ್ಮ ರೈತರು ನಿಮ್ಮನ್ನ ನೈನಕಳಂಗೆ ಮಾಡಿ."

"ಮಾಡಬವುದು ಕಂಡ್ರಿ. ಆದ್ರು ಸಾಲ ಮನ್ನಾ ಅಷ್ಟು ಸುಲಭನೇ? ಅದ್ಕೆ ನಾನು ಎಲ್ಲೂ ಅಂಗಂತ ಹೇಳಕ್ಕೋಗಿಲ್ಲ. ಯಾವ್ನೊ ಪೋಲೀ ಬಡ್ಡೆತ್ತವು ದ್ಯಾವೇಗೌಡ ರೈತರ ಸಾಲ ಮನ್ನಾ ಮಾಡ್ತಿನಿ ಅಂದವ್ರುನೆ ಅಂತ ಬರದುಬುಟ್ಟವೆ."



"ಅಂಗರೆ ನೀವಂಗೆ ಹೇಳಿಲ್ಲವ ಸಾರ್?"

"ನಮ್ಮ ತಾಯಾಣೆ ಹೇಳಿಲ್ಲ ಕಂಡ್ರಿ. ಆ ದ್ಯಾವೇಗೌಡ್ರು ಹೇಳಿರಬೌದು."

"ಅಂಗಾದ್ರೆ ನಿಮ್ಮತ್ರ ಕೈಸಾಲ ಈಸಗಂಡಿರೊ ರೈತರ ಸಾಲಮನ್ನಾ ಮಾಡ್ತಿನಿ ಅಂದಿದ್ನೆ ಅಂತ ಹೇಳಿ ಬುಡಿ."

"ಥೂ, ನಾನ್ಯಾವ ರೈತರಿಗೂ ಸಾಲ ಕೊಟ್ಟಿಲ್ಲ ಕಂಡ್ರಿ, ನಾನೇ ಬೇಕಾದೋಟು ಜನಗಳತ್ರ ಈಸಗಂಡಿದ್ದೀನಿ!"

"ಥೂ, ಥೂ, ಥೂತ್ತೇರಿ!!!"

–ಯಾಹೂ



ಕೊಂದವನು ಕಾಶಂಪೂರ್ ಭಂಟ!

ಸೆರಿಸುಮಾರು ಒಂದು ಡಜನ್ ಖಾಕಿಧಾರಿ ಪೊಲೀಸರು ಎದುರಿಗೇ ಇದ್ದರೂ ಪೊಲೀಸ್ ರಕ್ಷಣೆ ಯಲ್ಲೇ ಬಂದಿದ್ದವರನ್ನು ಹಂತಕರ ಹಿಂಡೊಂದು ಹಿಡಿದು ಕತ್ತರಿಸುತ್ತಿದ್ದರೂ ಅದನ್ನು ಜೊತೆಗೇ ಇದ್ದ ಪೊಲೀಸರು ನಿಂತು ನೋಡುತ್ತಾರೆಂದರೆ ಏನರ್ಥ?

ಟೇಪ, ಪೊಲೀಸರ ಕೈಯಲ್ಲೇ ರಿವಾಲ್ವರ್ ಇತ್ತಲ್ಲ! ಕಣ್ಣೆದುರೇ ಕೊಲ್ಲುತ್ತಿದ್ದವನ ಮೇಲೆ ಗುಂಡು ಹಾರಿಸ ಬಹುದಿತ್ತಲ್ಲ! ಪ್ರಾಣ ಉಳಿಸಬಹುದಿತ್ತಲ್ಲ?

ಇದು ಹಿರಿಯ ಕಾಂಗ್ರೆಸ್ ನಾಯಕ, ಮಾಜಿ ಅರಣ್ಯ ಮಂತ್ರಿ ಮತ್ತು ಹಾಲಿ ಔರಾದ್ ಶಾಸಕ ಗುರುಪಾದಪ್ಪ ನಾಗಮಾರಪಲ್ಲಿಯ ಮಗ ವಿಜಯ್ ಕುಮಾರ್ ನಾಗಮಾರಪಲ್ಲಿ ಹತ್ಯೆಯ ನಂತರವೂ ಕಾಡುವ ಪ್ರಶ್ನೆ.

ಕೇಸರಿ ಪೊಲೀಸು! ಶಿವಸೇನೆ ಹಂತಕ! ಕೊಲೆಯಾದವನು ಕಾಂಗ್ರೆಸ್ ಮುಖಂಡ!

ಎಲ್ಲೋ ಕೊಲೆ ನಡೆದರೆ; ಮೊದಲೇ ಪ್ರಾಣ ರಕ್ಷಣೆ ಕೇಳಿಯೂ ಅದನ್ನು ಪೊಲೀಸರು ನಿರ್ಲಕ್ಷಿಸಿದ್ದರೆ ಅದಕ್ಕೊಂದು ಸಮರ್ಥನೆಯಿರುತ್ತದೆ. ಆದರೆ ವಿಜಯ್ ಕುಮಾರ್ ಕೋ-ಜಾ ಸರ್ಕಾರದ ಪೊಲೀಸರ ಕಣ್ಣೆದುರಲ್ಲೇ ದಾರುಣವಾಗಿ ಕೊಲೆಯಾಗಿದ್ದಾರೆ. ಪೊಲೀಸ್ ರಕ್ಷಣೆ ಸಮೇತ ಹೋಗಿಯೂ ಅನ್ಯಾಯವಾಗಿ ಬಲಿಯಾಗಿದ್ದಾರೆ. ಅವರ ಜೊತೆಗಿದ್ದ ಮತ್ತೊಬ್ಬ ಕಾಂಗ್ರೆಸ್ ನಾಯಕ ಸುಭಾಷ್ ಶೆಟಗಾರ್‌ರನ್ನೂ ಶಿವಸೇನೆಯ ಹಂತಕರು ತಲವಾರುಗಳಿಂದ ಕತ್ತರಿಸಿದ್ದಾರೆ. ಅಷ್ಟೇ ಏಕೆ, ರಕ್ಷಣೆಗೆಂದು ಬಂದಿದ್ದ ಬೀದರ್ ನ್ಯೂಟನ್ ಪೊಲೀಸ್ ಠಾಣೆಯ ಪಿಎಸ್‌ಐ ಸುಭಾಷ್ ಗಜರೆಯನ್ನೂ ಹಂತಕ ಪಡೆ ಹಿಡಿದು ಗಾಯಗೊಳಿಸಿದೆ.



ಸಚಿವ ಕಾಶಂಪೂರ್

ಇಷ್ಟಾಗ್ಯೂ ಕನಿಷ್ಠ ತನ್ನ ಪ್ರಾಣ ರಕ್ಷಣೆಗಾದರೂ ಓರ್ವ ಪೊಲೀಸ್ ಅಧಿಕಾರಿ ಗುಂಡು ಹಾರಿಸದೇ ಮೇಲಧಿಕಾರಿಗಳ ಆದೇಶಕ್ಕಾಗಿ ಕಾಯುತ್ತಾನೆಂದರೆ ಅದನ್ನು ನಂಬಬೇಕಾ?

ಪೊಲೀಸರೇನೂ ನಿರಕ್ಷರಕುಕ್ಷಿಗಳಲ್ಲ. ಯಾರೇ ಒಬ್ಬ ದುಷ್ಕರ್ಮಿ ಮತ್ತೊಬ್ಬನನ್ನು ಕೊಲ್ಲುತ್ತಿದ್ದರೆ ಅಂಥವನನ್ನು ನಿರ್ದಾಕ್ಷಿಣ್ಯವಾಗಿ ಗುಂಡಿಟ್ಟು ಕೊಲ್ಲುವ ಅಧಿಕಾರ ಪೊಲೀಸರಿಗಿದೆ. ಹಿಡಿಯಲು ಹೋದ ಪೊಲೀಸರ ಮೇಲೆ ಮಚ್ಚು ಬೀಸಿದನೆಂದು ಅದೆಷ್ಟು ರೌಡಿಗಳನ್ನು ಪೊಲೀಸರು ಎನ್‌ಕೌಂಟರ್ ಮಾಡಿ ಕೊಂದಿಲ್ಲ? **Right of self defence** ಅಂದರೆ ಆತ್ಮರಕ್ಷಣೆಯ ಹಕ್ಕನ್ನೂ ಮರೆತು ಬೀದರ್ ಪೊಲೀಸರು ಓರ್ವ ಜನನಾಯಕನನ್ನು ತಮ್ಮ ಕಣ್ಣೆದುರೇ ಕೊಲ್ಲಲು ಬಿಟ್ಟಿದ್ದಾರೆಂದರೆ ಇದಕ್ಕಿಂತ ಅಕ್ಷಮ್ಯವುಂಟೆ? ಹಂತಕರ ಹಿಂಡು ಶಿವಸೇನೆಯವರಾದರೆ, ರಾಜ್ಯದಲ್ಲಿ ಬಿಜೆಪಿಯೇ ಅಧಿಕಾರದಲ್ಲಿದ್ದರೆ ಕಾಂಗ್ರೆಸ್ ನಾಯಕನೊಬ್ಬ ಸಾಯಲೇಬೇಕೆ? ನಡೆದ ಘಟನೆಯೇ ಇಂಥದ್ದೊಂದು ಗುಮಾನಿಯನ್ನು ಸಮರ್ಥಿಸುವಂತಿದೆ. ಈ ಪ್ರಕರಣದಲ್ಲಿ ನಾಗಮಾರಪಲ್ಲಿ ಮಗ ವಿಜಯ್‌ಕುಮಾರ್ ನಿಜಕ್ಕೂ ಮುಗ್ಧ. ಗುರಪಾದಪ್ಪನವರ ದೊಡ್ಡ ಮಗ ಉಮಾಕಾಂತ್ ಮತ್ತು ಮೂರನೇ ಮಗ ಸೂರ್ಯಕಾಂತ್‌ಗಿರುವಷ್ಟು ನಟೋರಿಟಿ ಎರಡನೇ ಮಗ ವಿಜಯ್‌ಕುಮಾರ್‌ಗಿಲ್ಲ.

ಸ್ವಭಾವತ ಸಜ್ಜನ ವಿಜಯ್‌ಕುಮಾರ್ ಗುರುಪಾದಪ್ಪ-ಸರಸ್ವತಿ ದಂಪತಿಗಳ ಎರಡನೇ ಮಗ. ವೃತ್ತಿಯಲ್ಲಿ ಕಂಟ್ರಾಕ್ಟರ್. ತಂದೆಯ ಹಾದಿಯಲ್ಲೇ ಬೀದರ್‌ನ ಡಿಸಿಸಿ ಬ್ಯಾಂಕಿಗೆ ನಿರ್ದೇಶಕರಾದರು. ನಾರಂಜಾ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಗೂ ಆಯ್ಕೆಯಾದರು. ಸಣ್ಣದೊಂದು ಸೈಟಿಗೆ ರೌಡಿ ಹಿಂಡು ಕಟ್ಟಿಕೊಂಡು ಬಡಿದಾಟಕ್ಕೆ ಹೋಗುವ ಜಾಯಮಾನವೇ ಆತನದಲ್ಲ. ಹೇಳಿಕೇಳಿ ಉದ್ಯಮಿಯಾಗಿದ್ದ ವಿಜಯ್‌ಕುಮಾರ್ ಇಲ್ಲಿಗೆ ವರ್ಷದ ಹಿಂದೆ ಬೀದರ್‌ನ ಮೈಲೂರ್ ರಸ್ತೆಯಲ್ಲೊಂದು ಹೀರೋ ಹೋಂಡಾ ಷೋರೂಮ್ ತೆರೆದಿದ್ದರು.

ವಯಸ್ಸು ಕೂಡ ಚಿಕ್ಕದೇನಲ್ಲ. ನಲವತ್ತೈದಾಗಿತ್ತು. ಒಬ್ಬ ಮಗ ಇಂಜಿನಿಯರಿಂಗ್ ಓದುತ್ತಿದ್ದರೆ ಮತ್ತೊಬ್ಬ ಪಿಯುಸಿ. ಗುರುಪಾದಪ್ಪನವರ ಇಡೀ ಕುಟುಂಬದಲ್ಲಿ ಅಪ್ಪನ ಉತ್ತರಾಧಿಕಾರಿ ಅಂತಿದ್ದರೆ ಅದು ವಿಜಯ್‌ಕುಮಾರ್ ಮಾತ್ರ. ಹಾಗಂತ ಬೀದರ್ ಜನರೇ ನಂಬಿದ್ದಾರೆ. ಇಂಥವನನ್ನು ಭೂವ್ಯಾಜ್ಯದ ಕೊಚ್ಚೆಗೆಳೆದವನು ಖದೀಮ ಮಿಲ್ಟ್ರಿ ಅಧಿಕಾರಿ ಅಬ್ರಹಾಂ. ಬೀದರ್‌ನ ಶಿವನಗರ ಏರಿಯಾದ ನಾಂದೇಡ್ ಮುಖ್ಯರಸ್ತೆಯಲ್ಲಿ ಈತನಿದ್ದ ಎರಡೆಕರೆ ಜಮೀನು ಇಷ್ಟೆಲ್ಲ ರಕ್ತಪಾತಕ್ಕೆ ಕಾರಣವಾದೀತೆಂಬ ಲೆಕ್ಕಾಚಾರ ತಾನೇ ಯಾರಿಗಿತ್ತು?

ವಂಚಕ ಅಬ್ರಹಾಂ ತನ್ನ ಚಿದ್ರಿಯ-ಸ.ನಂ. 101/1A ನಲ್ಲಿ ಒಂದೆಕರೆ ಮೂವತ್ತೆರಡು ಗುಂಟೆ ಮತ್ತು ಸ.ನಂ. 69(U)ನಲ್ಲಿದ್ದ ಇಪ್ಪತ್ತೊಂಬತ್ತು ಗುಂಟೆ ಜಮೀನನ್ನು 1990 ರಲ್ಲಿ ವಿಜಯ್‌ಕುಮಾರ್ ಸೇರಿದಂತೆ ಒಟ್ಟೂ ನಲವತ್ತೊಂಬತ್ತು ಜನಕ್ಕೆ ಸೈಟು ವಿಂಗಡಿಸಿ ಮಾರಿಬಿಟ್ಟ. ಆಗಿನ್ನೂ ಜಮೀನಿನ ಬೆಲೆ ಈಪಾಟಿ ಏರಿರಲಿಲ್ಲ. ಹಾಗೇ ಮಾರಿದವನು ಅದನ್ನು

ರಾ. ಸೋಮನಾಥ್

ಕಾನೂನುಬದ್ಧವಾಗೇ ರಿಜಿಸ್ಟರ್ ಮಾಡಿಸಿಕೊಟ್ಟ. ಆದರೆ ಅಬ್ರಹಾಂ ಎಂಥಾ ಪಾಖಂಡಿಯೆಂದರೆ ಒಮ್ಮೆ ಮಾರಿದವನು ದುಡ್ಡು ಕೈಸೇರಿದ ಮರುಗಳಿಗೆಯಲ್ಲೇ ಅದನ್ನು ಬೀದರ್‌ನ ಖತರ್‌ನಾಕ್ ರೌಡಿ ವೆಂಕಟ್ ಎಂಬಾತನಿಗೆ ಒಪ್ಪಿಸಿ ಆತನಿಗೂ ಜನರಲ್ ಪವರ್ ಆಫ್ ಅಟಾರ್ನಿ ಮಾಡಿಕೊಟ್ಟ!

ಸೈಟಿನ ಆಸೆಯಲ್ಲಿ ಜಮೀನಿಗೆ ಬಂದರೆ ಅಲ್ಲಿ ರೌಡಿ ವೆಂಕಟ 'ಕ್ಲಾಸಿಕ್ ಡಾಬಾ' ತೆರೆದು ಕೂತಿದ... ಕೇಳಿದ್ದಕ್ಕೆ ವಂಚಕ ಅಬ್ರಹಾಂ ತಿಪ್ಪೇ ಸಾರಿಸುತ್ತಿದ್ದ... ಸೈಟು ಕೊಂಡವರಲ್ಲಿ ಪ್ರಮುಖರಾಗಿದ್ದ ಗುರು, ಭರತ... ಬಸವರಾಜ್ ಇತ್ಯಾದಿಗಳೆಲ್ಲ ಸೇರಿ 1992 ರ... ಬೀದರ್‌ನ ಸತ್ರ ನ್ಯಾಯಾಲಯದ ಮೊರೆ ಹೊಕ್ಕರು... ಅಲ್ಲಿ ತಡವಾಗುತ್ತೆ ಎಂದು 1995 ರಲ್ಲಿ ಕೇಸನ್ನು... ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಕ್ಕೆ ಹಾಕಿಕೊಂಡರು... ಅನ್ಯಾಯವಾಗಿ ಸತತ ಹನ್ನೊಂದು ವರ್ಷಗಳ ತನ... ನ್ಯಾಯಾಲಯದಲ್ಲಿ ತಿಣುಕಾಡಿದ ವಿಜಯ್‌ಕುಮಾ... ಮತ್ತು ಸಂಗಡಿಗರಿಗೆ ಕೊನೆಗೂ ನ್ಯಾಯ ಸಿಕ್ಕಿದ್ದು ಕಳೆದ ಜನವರಿ 27 ರಂದು!

ವಿಜಯ್‌ಕುಮಾರ್ ಸೇರಿದಂತೆ ನಲವತ್ತೊಂ... ಜನಕ್ಕೆ ಅಬ್ರಹಾಂ ಜಮೀನು ಮಾರಿದ್ದನ್ನು ಕೋರ್ಟು ಎತ್ತಿ ಹಿಡಿದಿತ್ತು. ರೌಡಿ ವೆಂಕಟನ ಜಿಪಿಎ ಅನ್ನು ಅಸಿಂಧುಗೊಳಿಸಿತ್ತು. ಇಂಥದೊಂದು ತೀರ್ಪನ್ನು ಹಿಡಿದೇ ನಾಗಮಾರಪಲ್ಲಿ ಮಗ ವಿಜಯ್‌ಕುಮಾರ್... ಗುರು, ಭರತ್ ಮುಂತಾದವರೆಲ್ಲ ಇದೇ ಫೆಬ್ರವರಿ ... ರಂದು ಜಿಲ್ಲಾಧಿಕಾರಿ ಮನೀಷ್ ಮೌದ್ಗಿಲ್... ರನ್ನು ಕಂಡಿದ್ದಾರೆ. ಆದರೆ ಡೀಸಿ ಸಾಹೇಬರಿ... ಅಸಡ್ಡೆ. ಎಷ್ಟೆಂದರೂ ವಿಜಯ್‌ಕುಮಾ... ಕಾಂಗ್ರೆಸ್ಸು ಮತ್ತು ಜಮೀನಿಗೆ ವಕ್ಕರಿಸಿ... ರೌಡಿ ವೆಂಕಟ್ ಶಿವಸೇನೆ-ಬಿಜೆಪಿಯವನು...

ಕೋರ್ಟ್ ಆದೇಶ ಹಿಡಿದು ಬಂದ... ರನ್ನು ಡೀಸಿ ಪ್ರೋತ್ಸಾಹದ ಮಾತಾ... ಕಳಿಸಿದ್ದರೂ ಸಾಕಿತ್ತು. ಬದಲಿಗೆ ನೋಡೋ... ಮಾಡೋಣ ಅಂದರು. ಕೋರ್ಟ್ ಆದೇಶದ ಸರ್ಟಿಫೈಡ್ ಕಾಪಿ ತನ್ನಿ ಎಂದು ಪಿಳ್ಳೆನೆಪವೊಡ್ಡಿ ಸಾಗ ಹಾಕಿಬಿಟ್ಟರ... ಯಾವತ್ತು ಜಿಲ್ಲಾಧಿಕಾರಿಯಿಂದ ಉತ್ತೇಜ... ಪ್ರತಿಕ್ರಿಯೆ ಸಿಗಲಿಲ್ಲವೋ ವಂಚಿತರ ತಂಡ... ಅಡಿಷನಲ್ ಎಸ್ಪಿ ಎನ್.ಎಂ. ದೌಲಾರ್‌ರನ್ನು ಕಂಡು ಅಂಗಲಾಚಿದೆ. ಈ ದೌಲಾ...



ವಿಜಯಕುಮಾರ್ ಶವದ ಮುಂದೆ ನಾಗಮಾರಪಲ್ಲಿ ಕುಟುಂಬ

ತಂದೆಗೆ ತಕ್ಕ ಮಕ್ಕಳು

ಮಾಜಿ ಮಂತ್ರಿ ಹಾಲಿ ಶಾಸಕ ಗುರುಪಾದಪ್ಪನಿಗೆ ಏಳು ಜನ ಮಕ್ಕಳು. ಅವರಲ್ಲಿ ಇಬ್ಬರು ಹೆಣ್ಣು ಉಳಿದ ಐದು ಜನ ಪುತ್ರರು. ಉಮಾಕಾಂತ್, ವಿಜಯ್‌ಕುಮಾರ್, ಸೂರ್ಯಕಾಂತ, ಮಲ್ಲಿಕಾರ್ಜುನ, ನಾಗರಾಜ ಎಂಬ ಈ ಐದು ಜನರಲ್ಲಿ ಉಮಾಕಾಂತನೇ ತಂದೆಯ ವಾರಸುದಾರನಾಗಿ ಗೋಚರಿಸುತ್ತಿದ್ದಾನೆ. ಅಪ್ಪ ಸ್ಥಾಪಿಸಿದ ಡಿಸಿಸಿ ಬ್ಯಾಂಕಿನ ಡೈರೆಕ್ಟರ್ ಆಗಿರುವ ಉಮಾಕಾಂತ್ ಮಾಡದ ಕೆಲಸಗಳೇ ಈಗ ಉಳಿದಿಲ್ಲ. ತಂದೆಯ ಚುನಾವಣಾ ಪ್ರಚಾರದಲ್ಲಿ ಇವನದೇ ಕಾರುಬಾರು. ಅಂತೆಯೇ ಮುಂದಿನ ದಿನಗಳಲ್ಲಿ ಈತನದೇ ರಾಜ್ಯಭಾರ! ತನ್ನ ಹತ್ತಿಪ್ಪತ್ತು ಗೂಂಡಾಗಳನ್ನು ಕಟ್ಟಿಕೊಂಡು ಈತ ಹೊರ ನಡೆದನೆಂದರೆ ಎಂಥ ಡೀಲುಗಳನ್ನೂ ಕುದುರಿಸಬಲ್ಲ ಚತುರ.

ಈತನ ಗುಂಡಾಗಿರಿಗೆ ಬೇಸತ್ತ ಗಡಿಭಾಗದ ಜನ ಅನೇಕರು ನಕ್ಸಲ್ ಚಳವಳಿಯಲ್ಲಿ ಸೇರಿದ್ದಾರೆ. ಇದೇ ಕಾರಣಕ್ಕಾಗಿ 1990 ರಲ್ಲಿ ಈತನ ಮೇಲೆ ನಕ್ಸಲ್‌ರು ಅಟ್ಯಾಕ್ ಕೂಡ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಅಂದಿನಿಂದ ಇಡೀ ಕುಟುಂಬಕ್ಕೆ ಪೊಲೀಸ್ ಸೆಕ್ಯೂರಿಟಿ ಇದೆ. ಆದರೆ ಹತ್ಯೆಯಾದ ವಿಜಯ್‌ಕುಮಾರನಿಗಿರಲಿಲ್ಲ. ಸಂಪನ್ನನಾಗಿದ್ದ ಈತನಿಗೆ ರಕ್ಷಣೆಯ ಅಗತ್ಯವೂ ಇರಲಿಲ್ಲ. ಇನ್ನುಳಿದಂತೆ ಸೂರ್ಯಕಾಂತ ಎಂಬಾತ ಕಳೆದೆರಡು ವರ್ಷಗಳ ಹಿಂದೆ ಬೆಂಗಳೂರಿನ ಹೋಟೆಲ್‌ವೊಂದರಲ್ಲಿ ಕುಮಾರಸ್ವಾಮಿಯ ಮಗನಂತೆ ಪುಂಡಾಟಿಕೆ ನಡೆಸಿದ್ದನ್ನು ಇಲ್ಲಿ ದಾಖಲಿಸಬಹುದು. ಮಲ್ಲಿಕಾರ್ಜುನ, ನಾಗರಾಜ ಎಂಬಿಬ್ಬರು ಎಂ.ಜಿ. ರೋಡ್‌ನಲ್ಲಿ ಟೆಕ್ಸ್‌ಟೈಲ್ ಬಿಸಿನೆಸ್ ಮಾಡುತ್ತಿದ್ದಾರೆ. ಈ ಮೂರು ಜನರನ್ನು ಔರಾದ್ ಹಾಗೂ ಬೀದರ್ ಜನತೆ ನೋಡಿಯೇ ಇಲ್ಲ.

ಗುರುಪಾದಪ್ಪನ ಪಾದಪೂಜೆ

ಮಾಜಿ ಮಂತ್ರಿ ಹಾಲಿ ಶಾಸಕ ಗುರುಪಾದಪ್ಪ ನಾಗಮಾರಪಲ್ಲಿ ಹೊರಟರೆ ಸಾಕು ಹತ್ತೆಂಟು ಕಾರುಗಳು ಹಿಂಬಾಲಿಸುತ್ತವೆ. ಈತ ಕಾರಿನಿಂದಿಳಿದಾಗ ಇಂದಿಗೂ ಈತನ ಪಾದ ಮುಟ್ಟಿ ನಮಸ್ಕರಿಸಲು ನೂರಾರು ಜನ ಸೇರುತ್ತಾರೆ. 1985 ರ ಸುಮಾರಿನಲ್ಲಿ ಉಂಟಾದ ಆಂಟಿ ಕಾಂಗ್ರೆಸ್ ಮೂವಮೆಂಟ್‌ನಲ್ಲಿ ರಾಜಕೀಯಕ್ಕಿಳಿದ ಗುರುಪಾದಪ್ಪ ಜೆ.ಎಚ್. ಪಟೇಲ್ ಹಾಗೂ ಧರ್ಮಸಿಂಗ್‌ರ ಸರ್ಕಾರದಲ್ಲಿ ಅರಣ್ಯ ಸಚಿವನಾಗಿದ್ದಾರೆ. ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಡಿಸಿಸಿ ಬ್ಯಾಂಕ್‌ಗಳನ್ನು ಸ್ಥಾಪಿಸುವ ಮೂಲಕ ಸಾಮಾನ್ಯ ಜನರ ಹಣವನ್ನು ಕೊಳ್ಳೆ ಹೊಡೆದು ಆಗರ್ಭ ಶ್ರೀಮಂತನಾದ ನಾಮಮಾರಪಲ್ಲಿಯನ್ನು ಬೀದರ್ ಜನತೆ ಇಂದಿಗೂ ಸಾಹೇಬ್ರೆ, ಧಣಿ ಎಂದು ಸಂಬೋಧಿಸುತ್ತಾರೆ.

ಶಿವರಂಜನ್ ಸತ್ಯಂಪೇಟೆ

45 ಸಾವಿರ ರೂ. ಚಪ್ಪಲಿ, 15 ಲಕ್ಷದ ಕೈಗಡಿಯಾರ, 2 ಲಕ್ಷದ ಮೊಬೈಲ್, 8 ಬೆರಳಿಗೂ ಚಿನ್ನದುಂಗುರ ಹಾಕಿಕೊಂಡು ಶುಭ್ರ ಶೈಲ್ಯದಾರಿಯಾಗಿ ಹೊರಬರುವ ಈತ ಅಕ್ಷರಶಃ ಬೀದರ್ ಜಿಲ್ಲೆಯ ದೊರೆಯೆ! ಯಾವುದೇ ರೀತಿಯ ತಗಡು ರಾಜಕೀಯ ಮಾಡದ ಈತ ಬೆಂಗಳೂರು ಹಾಗೂ ಬೀದರ್ ಸೇರಿದಂತೆ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಮಾಡಿಟ್ಟಿದ್ದಾನೆ. ಇಂಥ ಮಹಾರಾಜಾ ಮಲಗುವುದು ಕೇವಲ ಮೂರೇ ಮೂರು ಸ್ಥಳಗಳಲ್ಲಿ, ಒಂದು ಬೆಂಗಳೂರಿನ ಮನೆ, ಇನ್ನೊಂದು ಬೀದರ್‌ನ ಡಿಸಿಸಿ ಬ್ಯಾಂಕ್‌ನ ಗೆಸ್ಟ್‌ಹೌಸ್, ಮತ್ತೊಂದು ಹೈದ್ರಾಬಾದ್‌ನಲ್ಲಿ. ಇದಕ್ಕೆ ಮುಖ್ಯ ಕಾರಣವೆಂದರೆ ಈತ ಕುಡಿಯುವ 'ಹೈ ಕ್ವಾಲಿಟಿ ಡ್ರಿಂಕ್ಸ್' ಎಂಬ ಗಾಳಿ ಸುದ್ದಿಯೂ ಇದೆ.

ಪ್ರತಿ ಬಾರಿಯೂ ಔರಾದ್ ಕ್ಷೇತ್ರದಿಂದ ಆರಿಸಿ ಬರುವ ಈತ ತನ್ನ ಕ್ಷೇತ್ರವನ್ನು ಇಂದಿಗೂ ತಿರುಗಿ ನೋಡಿಲ್ಲ. ಇಲ್ಲಿ ರಸ್ತೆ, ವಿದ್ಯುತ್ ಮುಂತಾದ ಕನಿಷ್ಠ ಸೌಲಭ್ಯಗಳು ಸಿಗುತ್ತಿಲ್ಲ. ಅಂತೆಯೇ ನಂಜುಂಡಪ್ಪ ವರದಿ ಪ್ರಕಾರ ಇಡೀ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಕ್ಷೇತ್ರವೆಂದು ಬರುದಾಂಕಿತವಾಗಿದೆ.

ಎಸ್ ನಾಯಕ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ಡೆಪ್ಪ ಕಾಶಂಪೂರ್ ಸಾಹೇಬರ ನಿಯತ್ತಿನ ಮನುಷ್ಯ. ಹಾಗಿ ಕಾಂಗ್ರೆಸ್‌ನವರ ಕೆಲಸ ಮಾಡಿಕೊಟ್ಟರೆ ಎಲ್ಲಿ ತ್ರಿಗಳು ಮುನಿಸಿಕೊಂಡಾರೋ ಎಂಬ ಅಳುಕು. 'ವತ್ತು ದಿನ ಕಾಯಿರಿ ಎಸ್ಪಿ ಸಾಹೇಬರ ಹತ್ರ ಮಾತಾಡಿ ಡಿಸೈಡ್ ಮಾಡ್ತೀನಿ' ಎಂದು ಸಾಗ ಹಾಕಿದ್ದಾರೆ.

ಅಲ್ಲಿಗೆ ನಿವೇಶನದಾರರ ಹತಾಶೆ ಮುಗಿಲು ಮುಟ್ಟಿದೆ. ಒಮ್ಮೆ ಕೋರ್ಟ್ ಆದೇಶ ಬಂದ ಬಿಸಿಯಲ್ಲಿ ಖಾಲಿ ಮಾಡಿಸದೇ ಹೋದರೆ ರೌಡಿ ವೆಂಕಟನಿಗೆ ಹೈಕೋರ್ಟಿಗೆ ಹೋಗಲು ಸಮಯ ಸಿಕ್ಕಿಬಿಡುತ್ತದೆ. ಆಗ ಇನ್ನೂ ಹತ್ತು ವರ್ಷ ಕಾಯುವವರ್ಯಾರು?

ಹೀಗೆ ಲೆಕ್ಕ ಹಾಕಿದ ಗುರು ಮತ್ತು ಭರತ್ ಮಾಸ್ಟರ್ ಪ್ಲಾನ್ ಮಾಡಿದ್ದಾರೆ. ಹೇಗೂ ಗುರುಪಾದಪ್ಪನವರ ಮಗ ವಿಜಯ್‌ಕುಮಾರ್‌ಗೆ ಒಳ್ಳೇ ಹೆಸರಿದೆ. ಅವರನ್ನೇ ಮುಂದಿಟ್ಟುಕೊಂಡು ಕ್ಲಾಸಿಕ್ ಡಾಬಾ ತೆರವುಗೊಳಿಸುವುದು. ಜೊತೆಗೆ ಪೊಲೀಸರನ್ನೂ ಕರೆದೊಯ್ದರೆ ವೆಂಕಟ ಸೊಲ್ಲೆತ್ತದೆ ಜಾಗ ಖಾಲಿ ಮಾಡುತ್ತಾನೆ ಎಂದೇ ಎಲ್ಲರೂ ಲೆಕ್ಕ ಹಾಕಿದ್ದಾರೆ. ಆದರೆ ಗುರು ಮತ್ತು ಭರತ್ ವಿಜಯ್‌ಕುಮಾರ್



ಹಂತಕ ಕೃಷ್ಣ

ಮನಕ್ಕೆ ತಾರದೇ ಮತ್ತೊಂದು ಯಡವಟ್ಟು ಮಾಡಿದ್ದಾರೆ. ಯಾವುದಕ್ಕೂ ಇರಲಿ ಎಂದು ಎರಡು ಟ್ರ್ಯಾಕ್ಟರ್‌ಗಳ ತುಂಬ ಒಂದಷ್ಟು ಜನರನ್ನು ಜಮಾಯಿಸಿ ಬೀದರ್‌ನ ಏರ್‌ಫೋರ್ಸ್ ರೋಡ್ ಕ್ರಾಸ್‌ನ ಆಸುಪಾಸು ನಿಲ್ಲಿಸಿರುವ ವ್ಯವಸ್ಥೆಯನ್ನು ಮಾಡಿದ್ದಾರೆ.

ಆದರೆ ವಿಜಯ್‌ಕುಮಾರ್‌ಗೆ ಇದ್ಯಾವುದರ ಅರಿವೆಯಿಲ್ಲ. ಜೊತೆಗೆ ಪೊಲೀಸರು ಇರುತ್ತಾರೆಂದು ಗುರು ಮತ್ತು ಭರತ್ ಹೇಳಿದ್ದನ್ನು ನಂಬಿದ್ದಾರೆ. ಪಾತಕಿ ವೆಂಕಟ್‌ನ ಕ್ರಿಮಿನಲ್ ರೆಕಾರ್ಡ್ ಮೊದಲೇ ಗೊತ್ತಿತ್ತಾದ್ದರಿಂದ ತನ್ನ ಲೈಸೆನ್ಸಿದ್ದ ರಿವಾಲ್ವರನ್ನೂ ಜೊತೆ ಒಯ್ದಿದ್ದಾರೆ. ಶುಕ್ರವಾರ ಅಪರಾಹ್ನ 12.30ರ ಹೊತ್ತಿಗೆ ವಿಜಯ್ ಕುಮಾರ್ ಸೇರಿದಂತೆ ಸರಿಸುಮಾರು ಮೂವತ್ತು ಮಂದಿ ನಿವೇಶನದಾರರು ಕ್ಲಾಸಿಕ್ ಡಾಬಾ ಹೊಕ್ಕಿದ್ದಾರೆ. ವೆಂಕಟ್‌ನಿಗೆ ಕೋರ್ಟ್ ಆದೇಶವನ್ನು ತೋರಿಸಿದ್ದಾರೆ.

ಆದರೆ ಧೂರ್ತ ವೆಂಕಟನಿಗೆ ಹುಚ್ಚು ಧೈರ್ಯ. ಬೀದರ್ ಜಿಲ್ಲಾ ಉಸ್ತುವಾರಿ ಮಂತ್ರಿ ಬಂಡೆಪ್ಪ ಕಾಶಂಪೂರ್ ಸಾಹೇಬರ ಅಭಯಹಸ್ತ, ಮತ್ತೊಂದೆಡೆ ಖಾಜಾ ತಮ್ಮ ಮಾರುತಿಯ ಕುಮ್ಮಕ್ಕು. ಇನ್ನು ಪೊಲೀಸರು ಯಾವ ಲೆಕ್ಕ?

ಹಾಗೆಂದೇ ಲೆಕ್ಕ ಹಾಕಿದ ಪಾತಕಿ ವೆಂಕಟ್ ತನ್ನ ತಮ್ಮಂದಿರಾದ ಭೀಮರಾವ್ ಮತ್ತು ಕೃಷ್ಣರ ಕೈಗೆ ಉದ್ದುದ್ದ ತಲವಾರು ಕೊಟ್ಟೇ ಅಣಿಗೊಳಿಸಿದ್ದ. ವಿಷಯ ಮೊದಲೇ ಗೊತ್ತಿತ್ತಾದ್ದರಿಂದ ಬೀದರ್ ಅಕ್ಕಪಕ್ಕದ ಲಂಬಾಣಿ ತಾಂಡಾಗಳಿಂದ ಹತ್ತಿಪ್ಪತ್ತು ಹುಡುಗರನ್ನೂ ಜಮಾಯಿಸಿ ಅವರ ಕೈಗೆ ಖಾರದ ಪುಡಿ ಕೊಟ್ಟಿದ್ದ. ಮಾತಿಗೆ ಮಾತು ಬೆಳೆದಿದೆ. ಅಷ್ಟರಲ್ಲೇ ಪೊಲೀಸರಿದ್ದ ರಕ್ಷಕ್ ವಾಹನವೂ ಬಂದಿದೆ. ಜೊತೆಗೆ ಬೀದರ್ ನ್ಯೂಟೌನ್ ಪೊಲೀಸ್ ಠಾಣೆಯ ಎಸ್.ಐ. ಸುಭಾಷ್ ಗಜರೆ, ಮಹಿಳಾ ಎಸ್ಐ ಮಲ್ಲಮ್ಮ ಚೌಬಿ, ಎಎಸ್ಐ ಮಾರುತಿ ಮುಂತಾದವರೂ ಆಗಮಿಸಿದ್ದಾರೆ. ಪೊಲೀಸರು ಬಂದರಲ್ಲ; ಒಂದೋ ಜಗಳ ಬಿಡಿಸಬೇಕು ಅಥವಾ ಗುಂಪನ್ನು ಚದುರಿಸಬೇಕು. ಎರಡೂ ಆಗದಿದ್ದರೆ ಕೋರ್ಟ್ ಆದೇಶವನ್ನು ವಿವರಿಸಿ ಕ್ಲಾಸಿಕ್ ಡಾಬಾ ಖಾಲಿ ಮಾಡಿಸಬೇಕು.

ದುರಂತವೆಂದರೆ ಬಂದ ಪೊಲೀಸರು ಇದ್ಯಾವುದನ್ನೂ ಮಾಡದೇ ತಮಾಷೆ ನೋಡುತ್ತಿದ್ದರು. ಇದರಿಂದ ಇನ್ನಷ್ಟು ಉತ್ತೇಜಿತನಾದ ಪಾತಕಿ ವೆಂಕಟ್ ಮತ್ತವನ ಗುಂಪು ಇದ್ದಕ್ಕಿದ್ದಂತೆ ವಿಜಯ್‌ಕುಮಾರ್ ಮತ್ತು ಸಂಗಡಿಗರ ಕಣ್ಣಿಗೆ ಖಾರದ ಪುಡಿ ಎರಚಿದ್ದಾರೆ. ತಲವಾರುಗಳಿಂದ ಮೊದಲು ವಿಜಯ್‌ಕುಮಾರ್‌ರನ್ನು ಕತ್ತರಿಸಿದ್ದಾರೆ. ಜೊತೆಗಿದ್ದ ಭರತ್ ಶೆಟಗಾರ್‌ಗೆ ಕತ್ತಿಯೇಟು ಬಿದ್ದಿದೆ. ಈಗಲಾದರೂ ಸಬ್‌ಇನ್ಸ್‌ಪೆಕ್ಟರ್ ಗಜರೆ ವೆಂಕಟ್ ಮೇಲೆ ಫೈರ್ ಮಾಡಬಹುದಿತ್ತು. ಅದೇನು ದುರಸ್ಸಿನಲ್ಲಿತ್ತೋ, ರಿವಾಲ್ವರ್ ಹಿಡಕೊಂಡೇ ನಿಂತಿದ್ದಾರೆ



ವಿಜಯಕುಮಾರ್ ಹತ್ಯೆಗೀಡಾದ ಕ್ಲಾಸಿಕ್ ಡಾಬಾ

ವೆಂಕಟನಿಗೆ ಇನ್ನೂ ಉತ್ತೇಜನ ಸಿಕ್ಕಂತಾಗಿದೆ. ವಿಜಯ್‌ಕುಮಾರ್ ನೆಲಕ್ಕೆ ಬಿದ್ದು ಒದ್ದಾಡುತ್ತಿದ್ದರೆ ವೆಂಕಟ್ ಅವರ ಸೊಂಟದಲ್ಲಿದ್ದ ರಿವಾಲ್ವರ್ ಕಿತ್ತುಕೊಂಡಿದ್ದೇ ಎದೆ, ಹೊಟ್ಟೆ ಎಂದು ನೋಡದೇ ಮೂರು ಸುತ್ತು ಫೈರ್ ಮಾಡಿದ್ದಾನೆ.

ಕಾಲ ಮಿಂಚಿಹೋಗಿತ್ತು. ಯಾವಾಗ ಖಾರದ ಪುಡಿ ಎರಚಿ ತಲವಾರು ಬೀಸಿದರೋ ವಿಜಯ್‌ಕುಮಾರ್ ಜೊತೆ ಬಂದಿದ್ದ ನಿವೇಶನದಾರರು ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ವೆಂಕಟ್ ಹಾರಿಸಿದ ಗುಂಡು ಒಂದಿಬ್ಬರು ದಾರಿಹೋಕರಿಗೂ ಬಿದ್ದಿದೆ. ಆಸ್ಪತ್ರೆಗೆ ತರುತ್ತಿದ್ದಂತೆ ಗುರುಪಾದಪ್ಪನವರ ಮಗ ವಿಜಯ್‌ಕುಮಾರ್ ಪ್ರಾಣ ಹಾರಿಹೋಗಿತ್ತು. ಜೊತೆಗೇ ಭರತ್ ಶೆಟಗಾರ್‌ನನ್ನು ಹೈದರಾಬಾದಿಗೆ ಸಾಗಿಸಲಾಯಿತ್ತಾದರೂ ಆತ ಬದುಕುವುದು ಕಷ್ಟ. ಅತ್ತ ವಿಷಯ ತಿಳಿದ ವಿಜಯ್‌ಕುಮಾರ್ ಅತ್ತೆ ಬಸಮ್ಮಬಾಯಿ ಗುರುಬಸಪ್ಪ ಯಾಕಾರ ಆಘಾತಕ್ಕೀಡಾಗಿ ಮಹಾರಾಷ್ಟ್ರದ ಲಾತೂರ್‌ನ ಆಸ್ಪತ್ರೆಯೊಂದರಲ್ಲಿ ಪ್ರಾಣಬಿಟ್ಟಿದ್ದರು.

ಪ್ರಾಣ ಕಾಯದ ಸರ್ಕಾರ ಈಗ ತಿಪ್ಪೆ ಸಾರಿಸುತ್ತಿದೆ. ಪೊಲೀಸರನ್ನು ಸಸ್ಪೆಂಡ್ ಮಾಡಿ ಪ್ರಕರಣವನ್ನು ಸಿಓಡಿ ತನಿಖೆ ಮಾಡಿ ಏನು ಪ್ರಯೋಜನ? ಹೋದ ಪ್ರಾಣ ಬರುತ್ತಾ?

ಕೋ-ಜಾ ಸರ್ಕಾರದ ಪೊಲೀಸ್ ಪಕ್ಷಪಾತಕ್ಕೆ ಇದಕ್ಕಿಂತ ಸಾಕ್ಷಿ ಬೇಕಾ?

ಶಿವಸೇನೆ ಹಂತಕ ವೆಂಕಟ್ ಸಾಕಿದ್ದು ಬಿಜೆಪಿ, ಬೆಳೆಸಿದ್ದು ಕಾಶಂಪೂರ್

ಬೀದರ್ ಶಾಸಕ ಬಂಡೆಪ್ಪ ಕಾಶಂಪೂರ್ ಜಿಲ್ಲಾ ಉಸ್ತುವಾರಿ ಮಂತ್ರಿಯಾದ ಮರುಕ್ಷಣವೇ ಮಾಡಿದ ಘನಂಧಾರಿ ಕೆಲಸವೇನು ಗೊತ್ತೆ?

ಬೀದರ್‌ನ ಮುಸ್ಲಿಂ ಪಾತಕಿಗಳು ಮತ್ತು ಶಿವ ಸೇನೆಯ ಹಂತಕರನ್ನೆಲ್ಲ ಸಾರಾಸಗಟಾಗಿ ಜೆಡಿಎಸ್ ತೆಕ್ಕೆಗೆ ತಂದದ್ದು. ಹಾಗೇ ಕಾಶಂಪೂರ್ ನೆರಳಿಗೆ ಬಂದವರ ಪೈಕಿ ಅತ್ಯಂತ ನಟೋರಿಯಸ್ ಹಿನ್ನೆಲೆಯಿದ್ದವರು ಬೀದರ್ ಮುನ್ಸಿಪಲ್ ಕೌನ್ಸಿಲರ್‌ಗಳಾದ ಜಾವಿದ್ ಮತ್ತು ನಿಸಾರ್. ಜಾವಿದ್ ಖತರ್‌ನಾಕ್ ರೌಡಿಯಾದರೆ ನಿಸಾರ್; ಖಾಜಾ ಮೋಯಿನುದ್ದೀನ್ ಎಂಬಾತನನ್ನು ಕೊಂದು ಜೈಲು ಕಂಡಿದ್ದ. ಇವರಿಬ್ಬರನ್ನು ಬಿಟ್ಟರೆ ಕಾಶಂಪೂರ್ ತೆಕ್ಕೆಗೆ ಬಂದ ಮೂರನೇ ಪಾತಕಿಯೇ ವೆಂಕಟ್!

ಈತನ ವಿರುದ್ಧ ಬೀದರ್‌ನ ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ಕಮ್ಮಿಯೆಂದರೂ ಎಂಟು ಕ್ರಿಮಿನಲ್ ಕೇಸುಗಳಿವೆ. ಕುಡಿದನೆಂದರೆ ಮನುಷ್ಯನೇ ಅಲ್ಲ. ಕಳೆದ ಗಣಪತಿ ಹಬ್ಬದಲ್ಲಿ ಕುಡಿದು ತಲವಾರೆತ್ತಿಕೊಂಡು ಮೋಹನ್ ಮಾರ್ಕೆಟ್ಟಿನ ಮೇಲೆ ದಾಳಿ ನಡೆಸಿದ್ದ. ಕೈಗೆ ಸಿಕ್ಕವರನ್ನೆಲ್ಲ ಕತ್ತರಿಸಿ, ಕಂಡಕಂಡ ಅಂಗಡಿಗಳನ್ನೆಲ್ಲ ಪುಡಿಗೈದಿದ್ದ.

ಇಂಥಾ ಪಾತಕಿಯನ್ನು ಬಿಜೆಪಿಗೆ ಸೇರಿಸಿಕೊಂಡು ಪೋಷಿಸಿ ಬೆಳೆಸಿದ್ದು ಬೀದರ್‌ನ ಮಾಜಿ ಬಿಜೆಪಿ ಶಾಸಕ ರಮೇಶ್‌ಕುಮಾರ್ ಪಾಂಡೆ. ಈತ ಹೇಳಿಕೇಳಿ ರಜಪೂತ್ ಮತ್ತು ಹುಟ್ಟಾ ಆರೆಸ್ಸೆಸ್. ಬಹುಜನ ಸಮಾಜ ಪಕ್ಷದಿಂದ ಗೆದ್ದು ಶಾಸಕರಾಗಿದ್ದ ಝುಲ್ಫಿಕರ್ ಹಷ್ಮಿಯ ವಿರುದ್ಧ ಕೆಲವೇ ಮತಗಳ ಅಂತರದಿಂದ ಗೆದ್ದಿದ್ದ ರಮೇಶ್‌ಕುಮಾರ್ ಪಾಂಡೆಗೆ ತನ್ನದೇ ಪಕ್ಷದ ಬೀದರ್ ಮುನ್ಸಿಪಾಲ್ಟಿ ಅಧ್ಯಕ್ಷ ಲಿಂಗಾಯತರ ಚಂದ್ರಶೇಖರ್ ಪಾಟೀಲರನ್ನು ತುಳಿಯಬೇಕಿತ್ತು.

ಅದು ಬಿಜೆಪಿಯೊಳಗಿನ ಲಿಂಗಾಯತ ವರ್ಸಸ್ ಮರಾಠಾ ಕಚ್ಚಾಟದ ಪ್ರತಿಫಲವಾಗಿತ್ತು. ಮುನ್ಸಿಪಾಲಿಟಿ ಅಧ್ಯಕ್ಷ ಚಂಪಾ ಅಲಿಯಾಸ್ ಚಂದೂ ಪಾಟೀಲನ ತಮ್ಮಂದಿರೂ ರೌಡಿಗಳೆ. ಒಂದು ಹಂತದಲ್ಲಿ ಚಂದೂ ಪಾಟೀಲನ ರೌಡಿ ಬ್ರದರ್‌ಗಳ ವಿರುದ್ಧ ಸೆಡ್ಡು ಹೊಡೆದ ಮರಾಠರ ವೆಂಕಟ್ ಮೂಲತಃ ಭಾಲ್ಕಿ ತಾಲ್ಲೂಕು ಚಳಕಾಪುರದವನು. ಪ್ರಾರಂಭದಲ್ಲಿ ಬೀದರ್ ಬೀದಿಗಳಲ್ಲಿ ಸೈಕಲ್ ರಿಕ್ಷಾ ತುಳಿದುಕೊಂಡಿದ್ದ. ಕ್ರಮೇಣ ಶಿವ ಸೇನೆಯ ಹುಡುಗರ ಜೊತೆಬಿದ್ದು ಮೋಹನ್ ಮಾರ್ಕೆಟ್ ಏರಿಯಾದಲ್ಲಿದ್ದ ಪಾರ್ಕ್‌ನಲ್ಲಿ ಗಣೇಶೋತ್ಸವ ಶುರು ಹಚ್ಚಿಕೊಂಡ. ಗಣೇಶನ ಪೆಂಡಾಲ್ ಇದ್ದ ಜಾಗದಲ್ಲೇ ಶಿವಸೇನಾ ಬೋರ್ಡ್ ಬರೆಸಿ ಹಾಕಿದ.

ಆಗ ರಮೇಶ್‌ಕುಮಾರ್ ಪಾಂಡೆಯೇ ಬೀದರ್ ಶಾಸಕನಾಗಿದ್ದರಿಂದ ವೆಂಕಟ್ ಅಟ್ಟಹಾಸಕ್ಕೆ ಅಂಕುಶವೇ ಇಲ್ಲದಂತಾಯ್ತು. ಇವತ್ತು ಗುರುಪಾದಪ್ಪನವರ ಮಗ ವಿಜಯ್‌ಕುಮಾರ್ ಕೊಲೆಯಾಗಿದ್ದಾರೆಂದರೆ ಅವತ್ತು ಅದಕ್ಕೆ ಬೀಜ ಬಿತ್ತಿದ್ದೇ ಮಾಜಿ ಶಾಸಕ ಪಾಂಡೆ. ಅಬ್ರಹಾಂನ ಎರಡೆಕರೆ ಖಾಲಿ ಜಾಗವನ್ನು ನಾಗಮಾರಪಲ್ಲಿ ಪುತ್ರನ ಕಡೆಯವರು ಖರೀದಿಸಿದ್ದಾರೆಂದು ಗೊತ್ತಾಗಿದ್ದೇ ಎಮ್ಮೆಲ್ಲೇ ಪಾಂಡೆ ರೌಡಿ ವೆಂಕಟ್‌ನನ್ನು ಛೂಬಿಟ್ಟ. ತಾನೇ ನಿಂತು ವೆಂಕಟನ ಮೂಲಕ ಟ್ರ್ಯಾಕ್ಟರ್ ಹೊಡೆಸಿ ಶೆಡ್ಡು ಕಟ್ಟಿಸಿದ. ಮುಂದೆ ಅದೇ ಕ್ಲಾಸಿಕ್ ಡಾಬಾ ಆಯಿತು.



ಹಂತಕ ವೆಂಕಟ್

ಅಷ್ಟರಲ್ಲೇ ಮುನ್ಸಿಪಲ್ ಚುನಾವಣೆ ಬಂದು ಎಮ್ಮೆಲ್ಲೆ ಪಾಂಡೆಯೇ ಮೇಲೆ ಬಿದ್ದು ವೆಂಕಟ್‌ಗೆ ಬಿಜೆಪಿ ಟಿಕೆಟ್ ಕೊಟ್ಟು ಶಿವನಗರ ವಾರ್ಡಿಗೆ ನಿಲ್ಲಿಸಿದ. ವೆಂಕಟ್ ಹೀನಾಯವಾಗಿ ಸೋತ. ಆದರೆ ಗುರು ಪಾಂಡೆಯ ವಿರುದ್ಧವೇ ತಿರುಗಿಬಿದ್ದ. ಪಾಂಡೆ ತನಗೆ ದುಡ್ಡು ಕೊಡದೇ ಇದ್ದುದರಿಂದಲೇ ತಾನು ಸೋತೆ ಎಂದು ಊರೆಲ್ಲಾ ವಿಷ ಕಾರಿದ. ಅಲ್ಲಿಗೆ ವೆಂಕಟ್‌ನ ಬಿಜೆಪಿಯ ಹಂಗು ತೀರಿಹೋಗಿತ್ತು. ಶಿವಸೇನೆಗೆ ಜಿಲ್ಲಾಧ್ಯಕ್ಷನಾದ. ಬೀದರ್ ಸುತ್ತಮುತ್ತಲ ಲಂಬಾಣಿ ತಾಂಡಾಗಳ ಹುಡುಕ ಪಡ್ಡೆಗಳನ್ನು ಕಟ್ಟಿಕೊಂಡು ಎಲ್ಲೆಂದರಲ್ಲಿ ಹಾವಳಿಯಿಡುತ್ತಿದ್ದ.

ಇಂಥವನನ್ನು ಕಳೆದ ವಿಧಾನಸಭೆ ಚುನಾವಣೆಯ ಹೊತ್ತಿಗೆ ತನ್ನ ಬುಟ್ಟಿಗೆ ಹಾಕಿಕೊಂಡಿದ್ದು ಜಿಲ್ಲಾ ಉಸ್ತುವಾರಿ ಮಂತ್ರಿ ಕಾಶಂಪೂರ್. ವೆಂಕಟ್ ಹೆಸರಿಗಷ್ಟೇ ಶಿವಸೇನೆ ಜಿಲ್ಲಾಧ್ಯಕ್ಷನಾದರೂ ವಾಸ್ತವವಾಗಿ ಕಾಶಂಪೂರ್ ಬಂಟನೆ.

ಸದ್ಯ ಕಾಶಂಪೂರ್ ಮಟ್ಟಿಗೆ ದೊಡ್ಡ ಅಪಾಯ ಅಂತಿದ್ದರೆ ಅದು ಮಾಜಿ ಶಾಸಕ ಝುಲ್ಫಿಕರ್ ಹಷ್ಮಿ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರನಾಗಿ ನಿಂತೇ 44 ಸಾವಿರದಷ್ಟು ಮತ ಗಿಟ್ಟಿಸಿದ ಹಷ್ಮಿ ಬೀದರ್ ಕಂಡ ಅತ್ಯಂತ ಪ್ರಾಮಾಣಿಕ ಮತ್ತು ಹೋರಾಟಗಾರ. ಮುಸ್ಲಿಂ ಎಂಬ ಒಂದೇ ಕಾರಣಕ್ಕೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ಗಳೆಲ್ಲ ಗುಟ್ಟಾಗಿ ಒಟ್ಟಾಗಿ ಹಷ್ಮಿಯನ್ನು ಸೋಲಿಸಿಬಿಟ್ಟವು. ಲಾಭ ಕಾಶಂಪೂರ್‌ಗಾಯಿತು.

ದುರಂತವೆಂದರೆ ಗೆದ್ದ ಕಾಶಂಪೂರ್ ಹಷ್ಮಿಯನ್ನು ಹಣಿಯಲು ಹೋಗಿ ರೌಡಿಗಳನ್ನು ಬೆಳೆಸಿದರು. ಭ್ರಷ್ಟ ಪೊಲೀಸರನ್ನು ತಂದರು. ಜಿಲ್ಲಾಧಿಕಾರಿಯಿಂದ ಹಿಡಿದು ಪೊಲೀಸ್ ವರಿಷ್ಠರ ತನಕ ತಮ್ಮ ಕೈಗೊಂಬೆಗಳನ್ನೇ ಬೀದರ್‌ನ ಆಯಕಟ್ಟಿನ ಜಾಗಗಳಲ್ಲಿ ಪ್ರತಿಷ್ಠಾಪಿಸಿದರು. ಹಷ್ಮಿಯನ್ನೂ ಸೇರಿಸಿದಂತೆ ಅವರ ಬೆಂಬಲಿಗರನ್ನೂ ಬಿಡದೇ ಪೊಲೀಸರು ಸುಳ್ಳು ಕೇಸಿಗೆ ಸಿಲುಕಿಸಿ ಬೇಟೆಯಾಡಲಾರಂಭಿಸಿದರು. ಇದರ ಲಾಭ ಪಡೆದವನೇ ಪಾತಕಿ ವೆಂಕಟ್. ಇವತ್ತು ನಾಗಮಾರ ಪಲ್ಲಿ ಮಗನನ್ನು ಆತ ಕೊಂದಿದ್ದಾನೆಂದರೆ ಅದಕ್ಕೆ ಕಾರಣ ಆತನ ಆರೆಸ್ಸೆಸ್ ಮನಸ್ಸು ಮತ್ತು ಕಾಶಂಪೂರ್ ಕುಮ್ಮಕ್ಕು.

ಅಡ್ನಾಡಿ ಎಸ್ಪಿ, ಅಹಂಕಾರಿ ಡಿಸಿ

ಎಸ್.ಪಿ. ರೂಪಾ ಮತ್ತು ಡಿ.ಸಿ. ಮನೀಷ್ ಮುದಗಿಲ್ ಎಂಬ ಈ ದಂಪತಿಗಳು ಜಿಲ್ಲಾಡಳಿತದ [illegible] ಹಿಡಿದ ಮೇಲೆ ಬೀದರ್ ಜಿಲ್ಲೆಯ ಕಾನೂನು ಸುವ್ಯವಸ್ಥೆ ತುಂಬಾ ಹದಗೆಟ್ಟಿರುವುದಕ್ಕೆ, ಹಾಡುಹಗಲೇ [illegible] ಈ ಬರ್ಬರ ಹತ್ಯೆ ಸಾಕಲ್ಲವೇ? ಕೇವಲ ಎರಡು ವರ್ಷದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಸುಮಾರು 9 [illegible] ಅಪಮಾನವಾಗಿದ್ದರೂ ಸೂಕ್ತ ತನಿಖೆ ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದ ಇವರಿಂದ ಬೀದರ್‌ನ [illegible]ಮಾಜಿಕ ಸ್ಥಿತಿ ಅಧೋಗತಿಗಿಳಿದಿದೆ.

ಅತ್ಯಂತ ಅಪ್ರಮಾಣಿಕಳೂ ಹಾಗೂ ದುರಹಂಕಾರಿಯಾಗಿದ್ದ ಎಸ್ಪಿ ರೂಪಾ ತನ್ನ ಗಂಡನಿಗೆ ಹೇಳಿ ನಿಮ್ಮ [illegible] ಮಾಡಿಕೊಡುತ್ತೇನೆ ಎಂದ್ಹೇಳಿ ಸಾರ್ವಜನಿಕರಲ್ಲಿ ಹಣ ಕೀಳಿದ್ದುಂಟು. ಹಾರ್ಡ್‌ವರ್ಕರ್ ಆದ ಮುದಗಿಲ್, [illegible] ರೂಪಾ ಜೊತೆ ಹಲವಾರು ಬಾರಿ ಜಗಳ ಆಡಿದ್ದುಂಟು. ಈ ವಿಷಯ ಈಗಾಗಲೇ ಜನರ [illegible]ಗಳಲ್ಲಿ ಟಾಂಟಾಂ. ವಿಜಯ್‌ಕುಮಾರನ ಹತ್ಯೆ ಪ್ರಕರಣದಲ್ಲಿ ಜಾಗರೂಕತೆ ವಹಿಸಿದ್ದರೆ ರೂಪಾಳಿಗೆ [illegible] ಬಂದು ಹಿಂದಿನ ಎಸ್ಪಿ ಗೋಲ್‌ಮಾಲ್‌ಗಳು ಗೌಣವೆನಿಸಿಕೊಳ್ಳುತ್ತಿದ್ದವು. ಇವರ ಬೇಜವಾಬ್ದಾರಿತನಕ್ಕೆ [illegible] ವರ್ಗಾವಣೆಯ ಗಿಫ್ಟ್ ನೀಡಿದೆ. ಅಲ್ಲಿ ಯಾವ ಗತಿ ಕಾದಿದೆಯೋ?



ಕಾಮಾಕ್ಷಿಪಾಳ್ಯದ ಹೆಸರು ರೌಡಿ ಜಗತ್ತಿನಲ್ಲಿ ಕುಖ್ಯಾ
ಉತ್ತುಂಗಕ್ಕೇರುತ್ತದೆ ಎಂದಾಗಲಿ, ಇಲ್ಲಿಂದಲೇ ಸಾಲುಸಾಲಾಗಿ ರೌ
ಹುಟ್ಟಿಬರುತ್ತಾರೆಂಬುದಾಗಲಿ ಮತ್ತು ದೂರದೂರದ ಒಕ್ಕಲಿಗರು
ಕಾಮಾಕ್ಷಿಪಾಳ್ಯಕ್ಕೆ ಹೆಣ್ಣು ಕೊಡಲು ಹಿಂಜರಿಯುವಂಥ ಸನ್ನಿವೇಶವೊ
ಏರ್ಪಡಬಹುದಾಗಲಿ ಯಾರೂ ಊಹಿಸಿರಲಿಲ್ಲ. ಕಾಮಾಕ್ಷಿ ಪಾಳ್ಯ ರೌ
ಹುತ್ತವಾಗಿ ಬೆಳೆದು ನಿಲ್ಲುತ್ತದೆಂಬ ಸಣ್ಣ ಸುಳಿವಂತೂ ಇರಲೇ ಇ

ಕಾಮಾಕ್ಷಿಪಾಳ್ಯವೆಂಬ ಹುತ್

ಬೇರೆಲ್ಲಾ ಹಳ್ಳಿಗಳಂತೆಯೇ ಇತ್ತು ಕಾಮಾಕ್ಷಿಪಾಳ್ಯ!

ವೃಷಭಾವತಿ ಕಣಿವೆಯ ಮುನ್ನೂರು ಮನೆಗಳ ನೆಮ್ಮದಿವಂತ ಒಕ್ಕಲಿಗರ ಈ ಊರಿಗಿನ್ನೂ ಬಿಡಿಎ ಕಾಲಿಟ್ಟಿರಲಿಲ್ಲ. ಕೈಯಳತೆಯಲ್ಲೇ ಹರಿಯುತ್ತಿದ್ದ ವೃಷಭಾವತಿಯ ಸ್ಫಟಿಕ ಶುಭ್ರ ನೀರಿಗೆ ಆಗಷ್ಟೇ ಯಶವಂತಪುರದಲ್ಲಿ ಶುರುವಾಗಿದ್ದ ಸೋಪ್ ಫ್ಯಾಕ್ಟರಿಯ ತ್ಯಾಜ್ಯ ಬೆರೆತು ನದಿಗೆ ನದಿಯೇ ಕಲ್ಮಶಗೊಳ್ಳುತ್ತಿತ್ತು. ಅದು 1980ರ ಕಾಲ. ತಲತಲಾಂತರದಿಂದ ಬಾಳಿ ಬದುಕಿದ ಊರೊಂದರ ದುರಂತ ಇನ್ನಾವುದೋ ಪಾಕಶಾಲೆಯಲ್ಲಿ ಕುದಿಯುತ್ತಿದೆಯೆಂಬುದು ಆ ಊರಿನ ಹಿರಿಯರಿಗೆ ಹೇಗೆ ತಾನೆ ಗೊತ್ತಾಗಲು ಸಾಧ್ಯ?

ಬೆಂಗಳೂರು ಬೆಳೆಯುತ್ತಲೇ ಇತ್ತು.

ಸುತ್ತಮುತ್ತಲ ಶಿವನಹಳ್ಳಿ, ದಾಸರಹಳ್ಳಿ, ಸಾಣೆಗೊರವನಹಳ್ಳಿ, ತಿಮ್ಮೇನಹಳ್ಳಿ, ನಾಗರಬಾವಿ, ಸಜ್ಜೆಪಾಳ್ಯ ಸುಂಕದಕಟ್ಟೆಗಳಿಗೆ ಹೋಲಿಸಿದರೆ ಕಾಮಾಕ್ಷಿಪಾಳ್ಯದ ಒಕ್ಕಲಿಗರು ಸಾಕಷ್ಟು ಸ್ಥಿತಿವಂತರು ಮತ್ತು ಬಲಾಢ್ಯರು. ಆ ಕಾರಣಕ್ಕೇ ಮುಂದೊಮ್ಮೆ ಕಾಮಾಕ್ಷಿಪಾಳ್ಯದ ಹೆಸರು ರೌಡಿ ಜಗತ್ತಿನಲ್ಲಿ ಕುಖ್ಯಾತಿಯ ಉತ್ತುಂಗಕ್ಕೇರುತ್ತದೆ ಎಂದಾಗಲಿ, ಇಲ್ಲಿಂದಲೇ ಸಾಲುಸಾಲಾಗಿ ರೌಡಿಗಳು ಹುಟ್ಟಬರುತ್ತಾರೆಂಬುದಾಗಲಿ ಮತ್ತು ದೂರದೂರದ ಒಕ್ಕಲಿಗರು ಕೂಡ ಕಾಮಾಕ್ಷಿಪಾಳ್ಯಕ್ಕೆ ಹೆಣ್ಣು ಕೊಡಲು ಹಿಂಜರಿಯುವಂಥ ಸನ್ನಿವೇಶವೊಂದು ಏರ್ಪಡಬಹುದೆಂಬ ಸಣ್ಣ ನಿರೀಕ್ಷೆಯಾಗಲೀ ಆ ಊರಿನ ಹಿರಿಯರಿಗಿರಲಿಲ್ಲ.

ಅಕ್ಷರಶಃ ಪಾಳೇಗಾರರಂತೆ ಮೆರೆದವರು ಕಾಮಾಕ್ಷಿಪಾಳ್ಯದ ಗೌಡರು. ಹಾಲಿ ಕಾಂಗ್ರೆಸ್ ನಾಯಕ ಕಾಮಾಕ್ಷಿಪಾಳ್ಯದ ರಾಜಣ್ಣ ಉದ್ಯಮಿ ಕಡೇಮನೆ ಸಂಪತ್ತು, ಮಾಜಿ ಕೌನ್ಸಿಲರ್ ಗೋಪಾಲಯ್ಯ, ಬಿಜೆಪಿ ನಾಯಕ ಕೆ. ರಂಗಣ್ಣ, ಫೈನಾನ್ಸಿಯರ್ ಜಾನಿ, ಕಾಂಗ್ರೆಸ್ ಮುಖಂಡ ಕಾಳೇಗೌಡ; ಇತ್ಯಾದಿ ಹೊಸ ತಲೆಮಾರಿನ ಪೈಕಿ ಯಾರೂ ರಾಜ್ಯ ಮಟ್ಟದಲ್ಲಿ ಹೆಸರು ಮಾಡಲಿಲ್ಲ ನಿಜ. ಹಾಗಂತ ಈ ಸುತ್ತಮುತ್ತಲ ಸೀಮೆಯಲ್ಲಿ ಇವರ್‍ಯಾರೂ ನಗಣ್ಯರೇನಲ್ಲ.



ಪೇಟೆ ಚನ್ನಪ್ಪ,
ಕಾಮಾಕ್ಷಿಪಾಳ್ಯ ರಾಜಣ್ಣ

ಪ್ರತಿಯೊಬ್ಬರಿಗೂ ತಿಂಗಳಾಂಪ್ರತಿ ಲಕ್ಷದ ಲೆಕ್ಕದಲ್ಲಿ ಬಾಡಿಗೆ ಬರುತ್ತದೆ. ಕೋರ್ಟಿನಲ್ಲಿರುವ ಕೇಸುಗಳು ಮುಗಿದರೇನೇ ಒಬ್ಬೊಬ್ಬರಿಗೆ ನೂರು ಕೋಟಿಯ ಲೆಕ್ಕದ ಆಸ್ತಿ ದಕ್ಕುತ್ತದೆ. ದುಡ್ಡಿದೆ. ದೌಲತ್ತಿದೆ. ಒಬ್ಬೊಬ್ಬರ ಬೆನ್ನಿಗೂ ಬಡಿದಾಡುವ ಹುಡುಗರ ಹಿಂಡಿದೆ. ಇಂಥ ಹುಡುಗರ ಹಿಂದೆ ಪುಡಿ ಪುಕ್ಕಾ ಗುಂಪಿದೆ. ಅವರವರಲ್ಲೇ ವೈಷಮ್ಯವಿದೆ. ಆ ಕಾರಣಕ್ಕೇ ಈ ಮಂದಿ ಅದೆಷ್ಟೇ ಬೆಳೆದರೂ, ಅದೇನೇ ಗಳಿಸಿದರೂ ಯಾವತ್ತಿಗೂ ಈ ಕಾಮಾಕ್ಷಿಪಾಳ್ಯದಿಂದಾಚೆಗೆ ಯೋಚಿಸಲಾರರು. ಅವರವರಲ್ಲೇ ಕಚ್ಚಾಟ, ಅವರವರಲ್ಲೇ ವೈಷಮ್ಯ; ಇದು ಕಾಮಾಕ್ಷಿಪಾಳ್ಯದ ಒಕ್ಕಲಿಗರ ಹುಟ್ಟುಗುಣ.

ಹಾಗಂತ ಇವರ್‍ಯಾರೂ ಪರಸ್ಪರ ಹೊರಗಿನವರೇನಲ್ಲ, ಎಲ್ಲರೂ ದಾಯಾದಿಗಳೇ. ಪ್ರಾರಂಭದಲ್ಲಿ ಸಾಣೆಗೊರವನಹಳ್ಳಿ ಪಂಚಾಯ್ತಿಗೆ ಸೇರಿದ ಕಾಮಾಕ್ಷಿಪಾಳ್ಯಕ್ಕೆ ಹಿರಿಯನಂತಿದ್ದದ್ದು ಕಡೇಮನೆ ಪೇಟೆ ಚನ್ನಪ್ಪ, ಮೂಲತಃ ಕಾಳೇಗೌಡರ ಸಂತತಿಯ ವೀರಣ್ಣ, ಪುಟ್ಟಯ್ಯ, ಚನ್ನಪ್ಪ ಮತ್ತು ಪಿಳ್ಳಪ್ಪರ ಪೈಕಿ ಕೊನೆಯವನಾದ ಪಿಳ್ಳಪ್ಪನ ಮಗ ಚೆನ್ನಿಗಪ್ಪನೇ ಮಾಜಿ ಕೌನ್ಸಿಲರ್ ಗೋಪಾಲಯ್ಯನ ತಂದೆ. ಈ ಪಿಳ್ಳಪ್ಪನ ಅಣ್ಣ ವೀರಣ್ಣನ ಮಗನೇ ಹಾಲಿ ಕಾಂಗ್ರೆಸ್ ನಾಯಕ ರಾಜಣ್ಣನ ತಂದೆ ಮೋಪ್ಪು ಚನ್ನನರಸಿಂಹಯ್ಯ. ಈ ಪೈಕಿ ಪೇಟೆ ಚನ್ನಪ್ಪನ ಮಗ ಮರಿಯಪ್ಪ ಹಾಲಿ ಲಾಟರಿ ಮಂತ್ರಿ ರಾಮಚಂದ್ರ ಗೌಡರಿಗೆ ಮಾವನಾಗಬೇಕು. ಈತನ ಮಕ್ಕಳಾದ ರಾಜಣ್ಣ ಚಂದ್ರಣ್ಣ ಜಾನಿ ಮತ್ತು ಸಂಪತ್ತು ಸದ್ಯ ಕಾಮಾಕ್ಷಿಪಾಳ್ಯದ ದೊಡ್ಡ ಕುಳಗಳಾದರೂ ಕುಖ್ಯಾತಿಯಲ್ಲಿ ಇವರ ದಾಯಾದಿ ಮಾಜಿ ಕೌನ್ಸಿಲರ್ ಗೋಪಾಲಯ್ಯನ ಹೆಸರೇ ಭೂತಾಕಾರವಾಯಿತು. ಅದಕ್ಕೆ ಕಾರಣವಾದದ್ದು ಲ್ಯಾಂಡು.

1984 ರಲ್ಲಿ ಬಿಡಿಎ ಇಲ್ಲಿನ ಸರಿಸುಮಾರು ನಾನೂರು ಎಕರೆ ಭೂಮಿಯನ್ನು ನೋಟಿಫೈ ಮಾಡಿ ಆದೇಶ ಹೊರಡಿಸುವ ತನಕ ಊರು ಒಂದಾಗಿಯೇ ಇತ್ತು. ಆಗ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರೇ ಕಾಮಾಕ್ಷಿಪಾಳ್ಯದ ಗೌಡರ ಆಕ್ರೋಶಕ್ಕೆ ಮಣಿದುಬಿಟ್ಟರು. ಅದಕ್ಕೆ ಮುಖ್ಯ ಕಾರಣ ಕಾಮಾಕ್ಷಿಪಾಳ್ಯದ ರಾಜಣ್ಣ!

ಆ ಹೊತ್ತಿಗೆ ತಮ್ಮ ಜಮೀನನ್ನು ಆಕ್ರಮಿಸಲು ಮುಂದಾಗಿದ್ದ ಬಿಡಿಎ ವಿರುದ್ಧ ಇಡೀ ಊರಿಗೆ ಊರೇ ಒಂದಾಗಿ ಬೀದಿಗಿಳಿಯಿತು. ಈ ಹೋರಾಟಕ್ಕೆಂದು ಸಂಸದ ಚಂದ್ರಶೇಖರಮೂರ್ತಿ, ಕೇಂದ್ರ ಕಾಂಗ್ರೆಸ್ ನಾಯಕ ಆಸ್ಕರ್ ಫರ್ನಾಂಡಿಸ್, ಸ್ಲಂ ರಮೇಶ್ ಮುಂತಾದವರನ್ನೆಲ್ಲ ರಾಜಣ್ಣ ಕಾಮಾಕ್ಷಿಪಾಳ್ಯಕ್ಕೆ ಕರೆತಂದರು. ಪ್ರತಿಭಟನೆಗೆ ಮಣಿದ ಹೆಗಡೆ ಭೂಸ್ವಾಧೀನವನ್ನೇ ಕೈಬಿಡುವಂತೆ ಬಿಡಿಎಗೆ ಆದೇಶಿಸಿದರು. ಮುಂದೆ ಇದೇ ಕಾಮಾಕ್ಷಿಪಾಳ್ಯದ ದುರಂತಕ್ಕೂ ಮೂಲವಾಯಿತೆ?

ಯಾವತ್ತು ಕೈತಪ್ಪಿದ ಜಮೀನು ಮತ್ತೆ ದಕ್ಕಿತ್ತೋ ಕಾಮಾಕ್ಷಿಪಾಳ್ಯದಲ್ಲಿ ಮೆತ್ತಗೆ ರಿಯಲ್ ಎಸ್ಟೇಟ್ ಚಿಗುರಲಾರಂಭಿಸಿತು. ಹೊಲ ಉತ್ತುಬಿತ್ತು ಬಂದ ಲಾಭಕ್ಕಿಂತಲೂ ಅದನ್ನು ಮಾರಿಕೊಂಡರೇನೇ ಹೆಚ್ಚು ಲಾಭವಿತ್ತು. ಅಳಿದುಳಿದ ಭೂಮಿಯನ್ನೂ ಎಲ್ಲಿ ಸರ್ಕಾರ ವಶಪಡಿಸಿಕೊಳ್ಳುತ್ತೋ ಎಂದು ಮಂತ್ರಿ ರಾಮಚಂದ್ರಗೌಡರ ಮಾವ ಮರಿಯಪ್ಪ ಅದನ್ನೆಲ್ಲ ಪೇಟೆ ಚನ್ನಪ್ಪ ಇಂಡಸ್ಟ್ರಿಯಲ್ ಎಸ್ಟೇಟ್ ಆಗಿ ಪರಿವರ್ತಿಸಿ ಬಾಡಿಗೆಗೆ ಬಿಟ್ಟರು. ಇತ್ತ ಗೋಪಾಲಯ್ಯನ ತಂದೆ ಚೆನ್ನಿಗಪ್ಪ ಎಕರೆಗಟ್ಟಲೇ ಭೂಮಿ ಖರೀದಿಸಿ ಸೈಟುಗಳನ್ನಾಗಿ ಮಾಡಿ ಮಾರಲಾರಂಭಿಸಿದರು. ದುಡ್ಡು ಬರುತ್ತಿತ್ತು.

ಭೂಮಿಯೇ ಇಲ್ಲದ ಗೌಡರ ಹೊಲಕ್ಕೆ ಕೂಲಿಗಳಾಗಿ ಹೋಗುತ್ತಿದ್ದ ಕಾಮಾಕ್ಷಿಪಾಳ್ಯದ ದಲಿತರು ಕ್ರಮೇಣ ಮನೆಗೆಲಸದವರಾಗಿ, ಆಟೋ ಚಾಲಕರಾಗಿ ರೂಪುಗೊಂಡರೆ, ಗೌಡರ ಪೈಕಿ ಗೋಪಾಲಯ್ಯನ ಅಣ್ಣ ನರಸಿಂಹಯ್ಯ ರೇಷ್ಮೆ ನೇಯ್ಗೆ ಫ್ಯಾಕ್ಟರಿಯೊಂದನ್ನು ತೆರೆದ. ಕ್ರಮೇಣ ಗೋಪಾಲಯ್ಯನ ತಮ್ಮ ಸಂಪತ್ ಎಂಬಾತನೂ ಮತ್ತೊಂದು ಪ್ಲಾಸ್ಟಿಕ್ ನೇಯ್ಗೆ ಫ್ಯಾಕ್ಟರಿ ಆರಂಭಿಸಿದ.

ಕಾಮಾಕ್ಷಿಪಾಳ್ಯದ ಮಗ್ಗಗಳಿಗೂ ಇಲ್ಲಿನ ಪಾತಕ ಪ್ರವೃತ್ತಿಗೂ ಪುರಾತನ ನಂಟಿದೆ. ಹಾಗೇ ನೋಡಿದರೆ ಕಾಮಾಕ್ಷಿಪಾಳ್ಯಕ್ಕೆ ಮೊದಲು ಬಂದ ಹೊರಗಿನವರೆಂದರೆ ಅದು ನೇಕಾರರೆ. 1984 ರ ಹೊತ್ತಿಗೆ ಗೋಪಾಲಯ್ಯನ ತಂದೆ ಚೆನ್ನಿಗಪ್ಪ ಸೈಟು ಮಾಡಿ ಮಾರಿದ್ದೆಲ್ಲ ಈ ಥರದ ಆಂಧ್ರ ಮೂಲದ ತೆಲುಗು ಮನೆಭಾಷೆಯ ನೇಕಾರರಿಗೇ. ಹಾಗೇ ಕಾಮಾಕ್ಷಿಪಾಳ್ಯಕ್ಕೆ ವಲಸೆ ಬಂದ ನೇಕಾರರೇ ಕ್ರಮೇಣ ಇಲ್ಲಿ ಕೈಮಗ್ಗದ ಫ್ಯಾಕ್ಟರಿ ಆರಂಭಿಸಿದರು.

ಆ ಹೊತ್ತಿಗಿನ್ನೂ ಗೋಪಾಲಯ್ಯ ಕಾಲೇಜು ವಿದ್ಯಾರ್ಥಿ. ಆತನ ತಮ್ಮ ಬಸವನ ಚೆಡ್ಡಿದೋಸ್ತೇ ಮಚ್ಚ ಉರ್ಫ್ ಮಂಜುನಾಥ. ಸದ್ಯ ರಾಜ್ಯ ಜೆಡಿಎಸ್ ನಾಯಕರಾಗಿರುವ ಎಂಎಲ್‌ಸಿ ವೈ.ಎಸ್.ವಿ. ದತ್ತರ ಶಿಷ್ಯನಾಗಿದ್ದ ಗೋಪಾಲಯ್ಯ ಮೊದಲ ಬಾರಿ ಕೌನ್ಸಿಲರ್ ಚುನಾವಣೆಗೆ ನಿಂತಾಗ ಮಚ್ಚ ಇನ್ನೂ ಚಿಕ್ಕ ಹುಡುಗ. ಬಸವನೂ ಆತನ ಸರೀಕನೆ. ರೌಡಿಸಂ ಕಾಮಾಕ್ಷಿಪಾಳ್ಯಕ್ಕೆ ಕಾಲಿಟ್ಟಿರಲಿಲ್ಲ.

ಯಾವತ್ತು ವೈ.ಎಸ್.ವಿ. ದತ್ತರನ್ನು ತೊರೆದು ಆಗ ದಳಾಧಿಪತಿಯಾಗಿದ್ದ ಪಿ.ಜಿ.ಆರ್. ಸಿಂಧ್ಯನ ಬಂಟನಾಗಿ ಗೋಪಾಲಯ್ಯ ಬೆಳೆದನೋ ಆತನ ದುರ್ಬುದ್ಧಿಗಳೆಲ್ಲ ಒಂದೊಂದಾಗಿ ಪ್ರಕಟಗೊಂಡವು. ಅದೇ ಹೊತ್ತಿಗೆ ಸರಿಯಾಗಿ ಕಾಮಾಕ್ಷಿಪಾಳ್ಯದ ಮತ್ತೊಬ್ಬ ಕೌನ್ಸಿಲರ್ ರಂಗಣ್ಣನಿಗೂ ಗೋಪಾಲಯ್ಯನಿಗೂ ಜಿದ್ದಾಜಿದ್ದಿ ಶುರುವಾಯಿತು. ಅಲ್ಲಿಯತನಕ ಕಾಮಾಕ್ಷಿಪಾಳ್ಯದ ಮಚ್ಚ ಗೋಪಾಲಯ್ಯನ ಪಾಲಿಗೆ ಆಪ್ತ ಬಂಟನಂತಿದ್ದ.



ಕಾಮಾಕ್ಷಿಪಾಳ್ಯದ ಗೋಪಾಲಯ್ಯ
ಮತ್ತು ಮಚ್ಚ ಮಂಜ

ಗೋಪಾಲಯ್ಯನ ಅಣ್ಣಂದಿರು ನಡೆಸುವ ಸಿಲ್ಕ್ ಟ್ವಿಸ್ಟಿಂಗ್ ಫ್ಯಾಕ್ಟರಿಗಳಿಗೆ ಮಾಗಡಿ ಕಡೆಯಿಂದ ಅಗ್ಗದ ಕಾರ್ಮಿಕರನ್ನು ಕರೆತಂದು ಕೆಲಸ ಮಾಡಿಸುವುದು ಹಳೇ ವಾಡಿಕೆ. ಕರೆತರುವಾಗಲೇ ಒಂದಷ್ಟು ಅಡ್ವಾನ್ಸ್ ಕೊಟ್ಟು ಕರೆತರುತ್ತಿದ್ದರು. ಅವರೇನಾದರೂ ಕೆಲಸಕ್ಕೆ ಅಂಜಿ ಓಡಿ ಹೋದರೆಂದರೆ ಅಂಥವರನ್ನು ಎತ್ತಾಕಿಕೊಂಡು ಬರುವುದಕ್ಕೆಂದೇ ಮಚ್ಚನಂಥ ಪಂಟರ್‌ಗಳನ್ನು ಗೋಪಾಲಯ್ಯ ಸಾಕಿಕೊಂಡಿದ್ದ. ಆಗಿನ್ನೂ ಕೇಬಲ್ ವಾರ್ ಶುರುವಾಗಿರಲಿಲ್ಲ. ಗೋಪಾಲಯ್ಯನ ಸಪೋರ್ಟಿನಿಂದಲೇ ಸಣ್ಣಕ್ಕಿ ಬೈಲಿನಲ್ಲಿ ಮಚ್ಚ ಕೇಬಲ್ ನೆಟ್‌ವರ್ಕ್ ಆರಂಭಿಸಿದ್ದ, ದುಡ್ಡು ಬರಲಾರಂಭಿಸಿತು. ಬರಬರುತ್ತ ಮಚ್ಚನ ಗ್ಯಾಂಗೂ ದೊಡ್ಡದಾಯಿತು.

ಇದಿಷ್ಟೇ ಆಗಿದ್ದರೆ ಮಚ್ಚನಿಗೂ ಗೋಪಾಲಯ್ಯನಿಗೂ ವೈಷಮ್ಯ ಹುಟ್ಟುತ್ತಿರಲಿಲ್ಲ. ಅದೊಂದು ಸಣ್ಣ ಸೈಟಿನ ಜಗಳ. ಸಣ್ಣಕ್ಕಿ ಬೈಲಿನಲ್ಲಿ ಮಚ್ಚ ರಸ್ತೆಯೊಂದನ್ನು ಆಕ್ರಮಿಸಿ ಕಾಂಪೌಂಡ್ ಹಾಕಿದ್ದ. ಕ್ರಮೇಣ ಮನೆಯನ್ನೂ ಕಟ್ಟಿಬಿಟ್ಟ. ತಾವೇ ಬೆಳೆಸಿದ ಹುಡುಗ ತಮ್ಮದೇ ಅಂಕೆಯಿಲ್ಲದೇ ಕೇಬಲ್ ನೆಟ್‌ವರ್ಕ್, ಮನೆ ಇತ್ಯಾದಿಗಳನ್ನೆಲ್ಲ ಮಾಡಿಕೊಂಡು ಖದರ್‍ರಾಗಿರುವುದು ಗೋಪಾಲಯ್ಯನ ಪಾಲಿಗೆ ನುಂಗಲಾರದ ತುತ್ತಾಯಿತು.

ರಿವೇಂಜ್ ಕಿಲ್ಲಿಂಗ್ಸ್ 16

ಡಾ. ಸೋಮನಾಥ್

ಮಚ್ಚನೇನೂ ಸುಮ್ಮಸುಮ್ಮನೇ ಗೋಪಾ
ವಿರುದ್ಧ ತಿರುಗಿಬದ್ದಿರಲಿಲ್ಲ. ಎಂಥಾ ಸಂದ
ತನ್ನ ಬೆನ್ನಿಗೆ ತಿಮ್ಮೇನಹಳ್ಳಿಯ ತಮ್ಮಯ್ಯ
ಗ್ಯಾರಂಟಿ ಎಂಬುದನ್ನು ಖಾತರಿ ಮಾಡಿಕೊಂ
ಬಂಡೆದ್ದಿದ್ದ. ಅದಕ್ಕೆ ತಕ್ಕಂತೆ ಮತ್ತೊಬ್ಬ
ರಂಗಣ್ಣನೂ ಮಚ್ಚನಿಗೆ ಸಣ್ಣಪುಟ್ಟ ಬೆಂಬಲ ಕ
ಬರುಬರುತ್ತ ಗೋಪಾ
ನಿಗಿಂತಲೂ ಮಚ್ಚನ
ದೊಡ್ಡದಾಯಿತು. ಅದಕ್ಕೆ
ಮಚ್ಚನೂ ಲ್ಯಾಂಡ್
ಕೈಯಿಟ್ಟ. ಗೋಪಾಲಯ
ಶುರುವಿನಿಂದಲೇ ಅಪ್ಪನ
ದಂಧೆಯನ್ನು ಮುಂದ
ಒಂದೆರಡು ಕಡೆ ಗ
ಕ್ವಾರಿಗಳನ್ನೂ ನಡೆಸುತ್ತಿ

ಜಿದ್ದಾಜಿದ್ದಿಯಿನ್ನೂ
ಲಿಲ್ಲ. ಆಗ ಗೋಪಾಲಯ್ಯ
ನಲ್ಲಿದ್ದ ಪ್ರಮುಖನೆಂದರ
ಮಾವನ ಮಗ ಬಾಲಕ
ಯಾಸ್ ಚೌಲ್ಟ್ರಿ ಬಾಲ.
ಸಾಕಷ್ಟು ಆಸ್ತಿಯಿತ್ತು.
ಬರುತ್ತಿತ್ತು. ಕಾಮಾಕ್ಷಿ
ಗುರುಪ್ರಿಯ ಎಂಬ
ಮಂಟಪದ ಉಸ್ತುವಾರಿ
ಮಾಡುತ್ತಿದ್ದ ಬಾಲ
ಏರಿಯಾದ ಪುಡಿ ರೌ
ತನ್ನ ಛತ್ರದಲ್ಲಿ ಆಶ್ರಯ
ಅಡ್ಡೆ ಹಾಕುತ್ತಿದ್ದ. ಯಾವ
ತಿರುಗಿಬಿದ್ದನೋ ಗೋಪಾ
ಚೌಲ್ಟ್ರಿ ಬಾಲನನ್ನೇ ಬೆಳೆಸ
ಸಿದ್ದ. ತಮ್ಮ ಬಸವ ಕೂಡ
ಬೆನ್ನಿಗೆ ನಿಂತ.

ಚೌಲ್ಟ್ರಿ ಬಾಲನ
ಸಿಕ್ಕಿದ್ದೇ ತಡ, ಗೋಪಾ
ಮತ್ತೊಬ್ಬ ಸಂಬಂಧಿ ಬಲರಾಮ ಅಲಿಯಾಸ್
ಬಲರಾಮ ಚಿಗುರಿಕೊಂಡ. ಜೊತೆಗೆ ಗೋಪಾ
ಅಕ್ಕನ ಮಕ್ಕಳಾದ ಮಂಜ ಮತ್ತು ಆನಂದ
ಪಡ್ಡೆಗಳೂ ಮಚ್ಚನ ವಿರುದ್ಧ ಫೀಲ್ಡಿಗಿಳಿದರು
ಬೆಂಬಲಕ್ಕೆ ಗೋಪಾಲಯ್ಯನ ಮತ್ತೊಬ್ಬ ನೆಂಟ
ಆಲಿಯಾಸ್ ಕೆಂಚನೂ ಅಣಿಯಾದ. ಇ
ಒಂದಾನೊಂದು ಕಾಲಕ್ಕೆ ಮಚ್ಚನ ಚೆಡ್ಡಿ
ಗಳಂತಿದ್ದವರೆ.

ಮಚ್ಚ ಗೋಪಾಲಯ್ಯನ ಪಡೆಯಿಂದ ಹೊ
ನಾದರೂ ಗೋಪಾಲಯ್ಯನ ವಿರುದ್ಧ
ವಾಗಿ ತೊಡೆತಟ್ಟಿರಲಿಲ್ಲ. ಆಗಿನ್ನೂ
ಪಾಳ್ಯದಲ್ಲಿ ರಕ್ತ ಹರಿದಿರಲಿಲ್ಲ. ಮತ
ಬದ್ದಿರಲಿಲ್ಲ. ಬಹುಶಃ ತಿಮ್ಮೇನಹಳ್ಳಿಯ
ಪಡೆಯಲ್ಲಿ ಮಚ್ಚ ಕಾಣಿಸಿಕೊಳ್ಳದೇ
ಆತನ ಬೆನ್ನಿಗೆ ತಮ್ಮಯ್ಯ ನಿಲ್ಲದೇ
ಕಾಮಾಕ್ಷಿಪಾಳ್ಯ ದೊಡ್ಡ ಅನಾಹುತ
ಈಡಾಗುತ್ತಿರಲಿಲ್ಲ.

ತನ್ನ ಬಂಟನಂತಿದ್ದ ಮಚ್ಚನನ್ನು
ವಿರುದ್ಧ ಎತ್ತಿಕಟ್ಟಿದ್ದೇ ಬಿಜೆಪಿಯ ಕೌನ್ಸಿ
ರಂಗಣ್ಣ ಎಂಬ ದುಡುಕಿಗೆ ಬಿದ್ದ
ಗೋಪಾಲಯ್ಯ 2000 ರ ಆಗಸ್ಟ್‌ನ
ಮೊದಲ ಯಡವಟ್ಟು ಮಾಡಿಕೊಂಡ.


ಅದೇ ಬಿಜೆಪಿ ಕಾರ್ಯಕರ್ತ ಪ್ರಕಾಶ
ಆ ಮೂಲಕ ತಿಮ್ಮೇನಹಳ್ಳಿಯ ಗ್ಯಾಂಗ್
ಕಾಮಾಕ್ಷಿಪಾಳ್ಯಕ್ಕೆ ವಿಸ್ತರಿಸಿತು!


(ಮುಂದುವರೆ

ಮುಸ್ಲಿಂ ರ್‍ಯಾಲಿಗೆ ಗೌಡಾ ಕಿರಿಕ್


ಎಲ್ಲವೂ ಅಂದುಕೊಂಡಂತೆ ನಡೆದರೆ... ಇದೇ ಫೆಬ್ರವರಿ 16 ರಂದು ಒಂದು ಲಕ್ಷ ಮುಸ್ಲಿಮರು ಬೆಂಗಳೂರಿಗೆ ಬಂದಿಳಿಯಲಿದ್ದಾರೆ. ಇವರೊಂದಿಗೆ ದಲಿತರು, ಹಿಂದುಳಿದ ವರ್ಗಗಳ ಜನಸಮೂಹವೂ ಸಾವಿರಾರು ಸಂಖ್ಯೆಯಲ್ಲಿ ಬಂದು ಸೇರುತ್ತಿದ್ದಾರೆ.

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ಭಾಗವಾಗಿರುವ ಕರ್ನಾಟಕ ಫೋರಂ ಫಾರ್ ದಿಗ್ನಿಟಿ ಈ ಚಾರಿತ್ರಿಕ ಬೃಹತ್ ರ್‍ಯಾಲಿ ಆಯೋಜಿಸುತ್ತಿದೆ. ಬಹುಶಃ ಕರ್ನಾಟಕ ಮಾತ್ರವಲ್ಲ, ಇಡೀ ದಕ್ಷಿಣ ಭಾರತದಲ್ಲೇ ಇದೊಂದು ಅಭೂತಪೂರ್ವ ಘಟನೆ ಎನಿಸಿಕೊಳ್ಳಲಿದೆ.


ಕೆ.ಎಂ.ಶರೀಫ್


ಅರೆಚೆಡ್ಡಿ ದೇವೇಗೌಡ


ಹಿಂದೂತ್ವವಾದಿ ಸಮಾಜ ಕಂಟಕರಿಂದ ನಿರಂತರ ದೌರ್ಜನ್ಯ ಹಿಂಸಾಚಾರಗಳಿಗೆ ಬಲಿಯಾಗುತ್ತಿರುವ ಮುಸ್ಲಿಮರೂ ಈಗ ಸಂಘಟಿತರಾಗುತ್ತಿದ್ದಾರೆ. ಕಾನೂನು ಪಾಲನೆ ಮಾಡುತ್ತಾ ತಮಗೆ ರಕ್ಷಣೆ ನೀಡಬೇಕಾಗಿದ್ದ ಪೊಲೀಸರೂ ಈಗ ಸಂಘ ಪರಿವಾರದವರ ಖಾಸಗಿ ಪಡೆಯಂತೆ ಬದಲಾಗಿರುವುದನ್ನು ನೋಡಿ ಮುಸ್ಲಿಮರು ಕೆರಳಿದ್ದಾರೆ. ಇದಿಷ್ಟೇ ಅಲ್ಲದೆ ಭಾರತ ಪ್ರಜಾಪ್ರಭುತ್ವ ರಕ್ಷಣೆ, ಫ್ಯಾಸಿಸಂ-ಸಾಮ್ರಾಜ್ಯಶಾಹಿ ವಿರುದ್ಧ ಜನಜಾಗೃತಿ ಮೂಡಿಸುವ ಗುರಿಯೂ ಈ ಸಮಾವೇಶಕ್ಕಿದೆ.



ಜಾತ್ಯತೀತತೆ ಪರವಿರುವ ಎಲ್ಲರೂ ಬೆಂಬಲಿಸಿ ಭಾಗವಹಿಸಬೇಕಾದ ಈ ಚಾರಿತ್ರಿಕ ರ್‍ಯಾಲಿ ನಮಗೆ- ನಿಮಗೆ ಸಂತೋಷ ಕೊಡಬಹುದು, ಆದರೆ ಜೆಡಿಎಸ್ ಕಂಪನಿ ಮಾಲೀಕ ದೇವೇಗೌಡರಿಗೆ ಇದು ಅಪಥ್ಯವೆನಿಸಿಬಿಟ್ಟಿದೆ.

ಈ ರ್‍ಯಾಲಿ ನಡೆಯದಂತೆ ಪೊಲೀಸ್ ಕಿರುಕುಳ, ಅನುಮತಿ ನಿರಾಕರಣೆ, ಪ್ರಚಾರ ಕಾರ್ಯ ನಡೆಸುತ್ತಿರುವ **KFD** ಕಾರ್ಯಕರ್ತರ ಬಂಧನ ಇಂಥದ್ದೇ ಕೀಳು ರಾಜಕೀಯವನ್ನು ಸ್ವತಃ ಗೌಡರೇ ಮುಂದೆ ನಿಂತು ನಡೆಸುತ್ತಿದ್ದಾರೆ.

ಹಾಲಿ ಕೋಮುವಾದಿ ಬಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವ ಗೌಡಾಗೆ ಮುಸ್ಲಿಮರಲ್ಲಿ ಜಾಗೃತಿ ಉಂಟಾಗುವುದು ಬೇಕಿಲ್ಲ, ಅವರು ಸಂಘಟಿತರಾಗುವುದೂ ಬೇಕಿಲ್ಲ, ಇನ್ನೂ ಲಕ್ಷಾಂತರ ಜನ ಬೆಂಗಳೂರಿಗೆ ಬಂದು ರ್‍ಯಾಲಿ ಮಾಡುತ್ತಿದ್ದಾರೆಂಬ ಸುದ್ದಿ ಕೇಳಿಯೇ ಅರೆ ಚೆಡ್ಡಿ ಗೌಡರ ನೆಮ್ಮದಿ ಕದಡಿಹೋಗಿದೆ. ಇದರ ಜೊತೆಗೆ ದಲಿತರು, ಹಿಂದುಳಿದ ವರ್ಗಗಳ ಜನರೂ ಸೇರುತ್ತಿರುವ ವಿದ್ಯಮಾನಗಳನ್ನು ಈಗ ದೇವೇಗೌಡ ಲಘುವಾಗಿ ಪರಿಗಣಿಸುವಂತಿಲ್ಲ, ಹಾಗಾಗಿ ಫೆಬ್ರವರಿ 16 ರ ರ್‍ಯಾಲಿಗೆ ಅನುಮತಿ ಕೊಡದಂತೆ ಸಿಟಿ ಪೊಲೀಸ್ ಕಮೀಷನರ್ ನೀಲಂ ಅಚ್ಯುತರಾವ್‌ಗೆ ಗೌಡ ಹುಕುಂ ನೀಡಿಬಿಟ್ಟಿದ್ದಾರೆ.



ಇವರೆಲ್ಲಾ ಸಂಘಟಿತರಾಗಿ ಹೀಗೆ ಶಕ್ತಿಪ್ರದರ್ಶನ ಮಾಡುತ್ತಾ ಹೋದರೆ ಅರೆಬರೆ ಚೆಡ್ಡಿಗಳಾದ ಜೆಡಿಎಸ್ ಓಟ್ ಬ್ಯಾಂಕಿಗೆ ಏಟು ಬೀಳಲಿದೆ ಎಂಬುದೇ ಗೌಡರ ಭಯ.

ಗೌಡರ ಚಿಲ್ಲರೆ ತರ್ಕ

ಜನವರಿ ತಿಂಗಳಲ್ಲಿ ಬೆಂಗಳೂರಿನ ಪತ್ರಕರ್ತರೊಂದಿಗೆ ಮಾತನಾಡುತ್ತಾ ಈ ದೇವೇಗೌಡ ಫೆಬ್ರವರಿ 16 ರ ಎಂಪವರ್ ಇಂಡಿಯಾ ರ್‍ಯಾಲಿ ವಿರುದ್ಧ ಹರಿಹಾಯ್ದರು. "ಈ ಮುಸ್ಲಿಮರು ಬೇಕಿದ್ದರೆ ಕೇರಳದಲ್ಲೋ, ಆಂಧ್ರಾದಲ್ಲೋ ರ್‍ಯಾಲಿ ಮಾಡಿಕೊಳ್ಳಲಿ, ಕರ್ನಾಟಕದಲ್ಲೇ ಯಾಕೆ ನಡೆಸಬೇಕು. ಇಲ್ಲಿ ಎಲ್ಲ ಸರಿಯಿದೆ... ರ್‍ಯಾಲಿಗೀಲಿ ಬೇಕಾಗಿಲ್ಲ" ಎಂದು ಅಪ್ಪಣೆ ಕೊಡಿಸಿಬಿಟ್ಟರು.

ಇಂಥ ಅವಿವೇಕಿಯೊಬ್ಬ ಭಾರತದ ಪ್ರಧಾನ ಮಂತ್ರಿಯಾಗಿದ್ದರೆಂಬುದನ್ನು ನೆನೆದರೆ ಜಿಗುಪ್ಸೆಯಾಗುವುದಿಲ್ಲವೆ?

ಅಲ್ಲಾ....

ನಮ್ಮ ಕರ್ನಾಟಕದಲ್ಲಿ ಹಿಂದೂ ಕೋಮುವಾದಿಗಳು ರ್‍ಯಾಲಿ, ಸಮಾವೇಶಗಳನ್ನು ನಡೆಸಬಹುದು, ಕಾಂಗ್ರೆಸ್‌ನವರು ನಡೆಸಬಹುದು, ಸ್ವತಃ ದೇವೇಗೌಡನೇ ದರಿದ್ರ ನಾರಾಯಣ ರ್‍ಯಾಲಿ ಸಂಘಟಿಸಬಹುದಂತೆ, ಆದರೆ ನಿರಂತರ ಹಲ್ಲೆ, ದೌರ್ಜನ್ಯ ಹತ್ಯೆಗಳಿಗೆ ಈಡಾಗುತ್ತಾ ಆಸ್ತಿಪಾಸ್ತಿ ನಷ್ಟ ಅನುಭವಿಸುತ್ತಿರುವ ಮುಸಲ್ಮಾನರು ಸಂಘಟಿತರಾಗಿ ರ್‍ಯಾಲಿ ನಡೆಸಿದರೆ ಗೌಡರಿಗೇಕೆ ಸಂಕಟವಾಗಬೇಕು?

ಇಷ್ಟಕ್ಕೂ ಕರ್ನಾಟಕದಲ್ಲಿ ಯಾವ ಜಾತಿ ಜನಾಂಗಗಳು ಸಂಘಟನೆ ಕಟ್ಟಬೇಕು, ರ್‍ಯಾಲಿ ಮಾಡಬೇಕು, ಮಾಡಬಾರದು ಎಂದು ತೀರ್ಮಾನಿಸಲು ಈ ಕರ್ನಾಟಕವೇನು ದೇವೇಗೌಡನ ಜಹಗೀರಾ?

ಇಷ್ಟಕ್ಕೂ ಸಂಘ ಪರಿವಾರದ ಫ್ಯಾಸಿಸ್ಟರು ರಾಜ್ಯಾದ್ಯಂತ ಮುಸ್ಲಿಮರು ಹಾಗೂ ದಲಿತರ ವಿರುದ್ಧ ಹುಟ್ಟುಹಾಕುತ್ತಿರುವ ಗಲಭೆಗಳನ್ನು ತಡೆಯುವ ಪ್ರಯತ್ನವನ್ನು ಜೆಡಿಎಸ್ ಎಂದೂ ಮಾಡಿಲ್ಲ.

ಆದಿ ಉಡುಪಿಯಲ್ಲಿ ಮುಸ್ಲಿಂ ವ್ಯಾಪಾರಿಗಳಿಬ್ಬರನ್ನು ಬೆತ್ತಲುಗೊಳಿಸಿ ದೌರ್ಜನ್ಯವೆಸಗಿದ ಚೆಡ್ಡಿಯನ್ನು ಇದೇ ದೇವೇಗೌಡ ಉಡುಪಿ ನಗರಸಭೆಗೆ ನಾಮಿನೇಟೆಡ್ ಮೆಂಬರ್ ಮಾಡಿದ್ದರು. ಮಂಗಳೂರು ಕೋಮುಗಲಭೆಯಲ್ಲಿ ಪೊಲೀಸರನ್ನು ಸುಮ್ಮನಿರಿಸಿ ಭಜರಂಗದಳದ ದುಷ್ಟರು ಮುಸ್ಲಿಮರ ಮೇಲೆ ದಾಳಿ ನಡೆಸಲು ಪೂರ್ಣ ಅವಕಾಶ ಮಾಡಿಕೊಟ್ಟಿದ್ದೂ ಇದೇ ಜೆಡಿಎಸ್ ಗೃಹಮಂತ್ರಿ ಎಂ.ಪಿ. ಪ್ರಕಾಶ್. ಅದೇ ಕರಾವಳಿಯಲ್ಲಿ ಮುಸ್ಲಿಂ ದನದ ವ್ಯಾಪಾರಿಯೊಬ್ಬನನ್ನು ಪೊಲೀಸರೇ ಗುಂಡು ಹಾರಿಸಿ ಕೊಲೆ ಮಾಡಿದ್ದರು. ತೀರಾ ಇತ್ತೀಚೆಗೆ ಬೆಂಗಳೂರಿನ ಶಿವಾಜಿನಗರದಲ್ಲಿ ಹಿಂದೂ ಸಮಾಜೋತ್ಸವದ ನೆಪದಲ್ಲಿ ಮುಸ್ಲಿಂ ವಿರೋಧಿ ದೊಂಬಿ ನಡೆಸಲು ಅವಕಾಶ ನೀಡಿದ್ದೂ ಇದೇ ದೇವೇಗೌಡರ ಕೋ-ಜಾ ಸರ್ಕಾರ.

ಸಂಘ ಪರಿವಾರದ ಇಷ್ಟೆಲ್ಲಾ ಕಾನೂನುಬಾಹಿರ ದುಷ್ಟ ಚಟುವಟಿಕೆಗಳನ್ನು ಮೂಕ ಪ್ರೇಕ್ಷಕನಂತೆ ನೋಡಿಕೊಂಡು ಬಂದಿರುವ ದೇವೇಗೌಡ ಅದಕ್ಕೆ ಪ್ರತಿಯಾಗಿ ಮುಸ್ಲಿಮರು ರ್‍ಯಾಲಿ ನಡೆಸಬಯಸಿದ್ದೇ ತಪ್ಪೆನ್ನುವಂತೆ ಆಡುತ್ತಿದ್ದಾರೆ.


ಸಿಟಿ ಪೊಲೀಸ್ ಕಮಿಷನರ್ ನೀಲಂ ಅಚ್ಯುತರಾವ್‌ಗೆ ಕಾನೂನು-ಸುವ್ಯವಸ್ಥೆಯ ನೆಪ ನೀಡಿ ಅನುಮತಿ ನೀಡದಂತೆ ಹುಕುಂ ನೀಡಿಬಿಟ್ಟಿದ್ದಾರೆ.

ಈ ದೇವೇಗೌಡ ಅರೆಬರೆಯಲ್ಲ ಪೂರ್ತಿ ಮುಸ್ಲಿಂ-ದಲಿತ-ಹಿಂದುಳಿದ ವರ್ಗಗಳ ವಿರೋಧಿಯೆನ್ನಲು ಇದಕ್ಕಿಂತಾ ಸಾಕ್ಷಿ ಬೇಕೆ.

-ಬಿಳಿದಾಳೆ ಈಶ

ಅಳಿಯ ಈಗ 'ಚೆಡ್ಡಿಶ್ರೀ'

ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಹೊಸತರಲ್ಲಿ 'ಸೆಕ್ಯುಲರ್' ಪದದ ಅರ್ಥ ಗೊತ್ತಿಲ್ಲ ಎಂದಿದ್ದರು. ಈಗ ದೇವೇಗೌಡರ ಅಳಿಯನ ಸರದಿ. ಇತ್ತೀಚೆಗೆ ಪದ್ಮಶ್ರೀ ಪ್ರಶಸ್ತಿ ಎತ್ತಿಕೊಂಡು ಬಂದಿರುವ ಗೌಡರ ಅಳಿಯ ಡಾ. ಮಂಜುನಾಥ್ ಜೆ.ಪಿ. ನಗರದ ಹಿಂದೂ ಸಮಾಜೋತ್ಸವದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ತಮ್ಮ ಶೂದ್ರಜನ್ಮವನ್ನು ಪಾವನಗೊಳಿಸಿಕೊಂಡಿದ್ದಾರೆ. ಜೆಡಿಎಸ್‌ನ ಪದಾಧಿಕಾರಿಗಳೂ ಸಹ ಇದಕ್ಕೆ ಹೊರತಲ್ಲ, ರಾಜ್ಯಾದ್ಯಂತ ಬಹುತೇಕ ಜೆಡಿಎಸ್ ನಾಯಕರು, ಕಾರ್ಯಕರ್ತರು ಆಯಾ ಊರಿನ ಹಿಂದೂ ಸಮಾಜೋತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ 'ಜಾತ್ಯತೀತ' ಮನೋಭಾವ ಪ್ರದರ್ಶಿಸಿಬಿಟ್ಟಿದ್ದರೆ, ಕೆಲ ಕಾಂಗ್ರೆಸ್ ನಾಯಕರೂ ಹೀಗೇ ಮಾಡುತ್ತಿರುವುದು ಗೊತ್ತಾದ ನಂತರ ಕೆಪಿಸಿಸಿ ಅಧ್ಯಕ್ಷ ಖರ್ಗೆ ಒಂದು ಸುತ್ತೋಲೆ ಹೊರಡಿಸಿ ಯಾರೂ ಹಿಂದೂ ಸಮಾವೇಶಗಳಲ್ಲಿ ಭಾಗವಹಿಸದಂತೆ ನಿರ್ಬಂಧಿಸಿದ್ದರು. ಆದರೂ ಅಷ್ಟರಲ್ಲಿ ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ ತರದ ಪೆದ್ದರು ಲಕ್ಷಾಂತರ ರೂಪಾಯಿ ಫಂಡ್ ಕೊಟ್ಟುಬಿಟ್ಟಿದ್ದರು. ಅದಿರಲಿ, ದೇವೇಗೌಡ ನಿಜವಾಗಲೂ ಸೆಕ್ಯುಲರ್ ಆಗಿದಿದ್ದರೆ ಖರ್ಗೆ ಮಾಡಿದಂತೆ ತಾವೂ ಪಾರ್ಟಿ ಕಾರ್ಯಕರ್ತರಿಗೆ ಈ ಚೆಡ್ಡಿಗಳ ಜೊತೆ ಸೇರದಂತೆ ತಾಕೀತು ಮಾಡಬಹುದಿತ್ತಲ್ಲವೆ ಆದರೆ ಮಾಡಲಿಲ್ಲ ಯಾಕೆ?


ಮಂಜುನಾಥ್

KFD ಹೊಸ ಭರವಸೆ

Karnataka Forum For Dignity (KFD)ಯು ಕರ್ನಾಟಕದಲ್ಲಿ ಸಕ್ರಿಯವಾಗಿರುವ ಜನಪರ ಸಂಘಟನೆಗಳಲ್ಲಿ ಒಂದು. ಬಹುಶಃ ಕರ್ನಾಟಕದ ಅತ್ಯಂತ ಬಲಿಷ್ಠ ಸಮೂಹಾಧಾರಿತ ಸಂಘಟನೆ ಸಹ. ಕೆ.ಎಂ. ಶರೀಫರ ಪ್ರಬುದ್ಧ ನಾಯಕತ್ವದಡಿ ಬೆಳೆಯುತ್ತಿರುವ **KFD** ಕೇವಲ ಮುಸ್ಲಿಮರಿಗೆ ಸೀಮಿತವಾಗಿರುವ ಸಂಘಟನೆಯಲ್ಲ. ಭಾರತದ ಪ್ರಜಾಪ್ರಭುತ್ವ, ಭಯೋತ್ಪಾದನೆ (ಚೆಡ್ಡಿಗಳದ್ದೂ ಸೇರಿ) ವಿರುದ್ಧ ಜನಜಾಗೃತಿ, ದಲಿತ, ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ದನಿಗೂಡಿಸುವುದು ಹಾಗೂ ಎಲ್ಲಾ ಬಗೆಯ ಅನ್ಯಾಯದ ವಿರುದ್ಧ ಹೋರಾಡುವ ಆಶಯ ಇದರದು.

ವಾಸ್ತವವಾಗಿ **KFD** ಯು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಮೂರು ಅಂಗಸಂಸ್ಥೆಗಳಲ್ಲಿ ಒಂದಾಗಿದೆ. ನೆರೆಯ ತಮಿಳುನಾಡಿನಲ್ಲಿ ಮನಿದ ನೀದಿ ಪಾಸರೈ, ಕೇರಳದಲ್ಲಿ ನ್ಯಾಷನಲ್ ಡೆವಲಪ್‌ಮೆಂಟ್ ಫ್ರಂಟ್ (NDF) ಇನ್ನೆರಡು ಸಂಘಟನೆಗಳಾಗಿವೆ.

ಕರ್ನಾಟಕದಲ್ಲಿ **KFD** ಎಷ್ಟು ವೇಗವಾಗಿ ಬೆಳೆಯುತ್ತಿದೆಯೆಂದರೆ ಹೆಚ್ಚುಕಡಿಮೆ ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರದಲ್ಲೂ ಈಗ **KFD** ಘಟಕಗಳಿವೆ. ಶಿಸ್ತು, ಬದ್ಧತೆ ಇದರಲ್ಲಿ ಎದ್ದು ಕಾಣುವ ಅಂಶಗಳು. ಫೆಬ್ರವರಿ 16ರ **Empower India Conference** (ಭಾರತವನ್ನು ಬಲಪಡಿಸಿ)ನ ಅಂಗವಾಗಿ ಬೆಂಗಳೂರು, ಮೈಸೂರು, ಮಂಗಳೂರು, ತುಮಕೂರು ಇನ್ನೂ ಮುಂತಾದೆಡೆ **KFD** ಸಹಸ್ರಾರು ಜನರ ಭಾರಿ ರ್‍ಯಾಲಿಗಳನ್ನು ನಡೆಸಿದೆ. ಆದರೆ ಎಲ್ಲಿಯೂ ಒಂದೇ ಒಂದು ಅಹಿತಕರ ಘಟನೆ, ಗಲಾಟೆಗಳಾಗಿಲ್ಲ. **KFD** ಹಿನ್ನೆಲೆ ಹೀಗಿದ್ದಾಗಲೂ ಕೆಲ ಚೆಡ್ಡಿ ಪತ್ರಿಕೆಗಳು ಮಂಗಳೂರು ಕೋಮು ಗಲಭೆ ಹಾಗೂ ಪಾತಕಿ ಸುಖಾನಂದ ಶೆಟ್ಟಿ ಹತ್ಯೆಗೆ **KFD** ಕಾರಣ ಎಂದು ಅಪಪ್ರಚಾರ ನಡೆಸಿದ್ದವು. ಪೊಲೀಸರಿಗೂ **KFD** ಕಂಡರೆ ಅಷ್ಟಕ್ಕಷ್ಟೆ. **KFD**ಯನ್ನು ನಿಷೇಧಿಸಬೇಕೆಂದೂ ಕೆಲ ಕೋಮುವಾದಿ ಪತ್ರಕರ್ತರೂ ಹುಯಿಲೆಬ್ಬಿಸಿದ್ದರು.

ದಮನಿತರು ಪ್ರತಿಭಟಿಸುವುದನ್ನು ಕಲಿತರೆ ದಮನಿಸುವವರಿಗೆ ಸಂತೋಷವಾಗಲು ಸಾಧ್ಯವೇ?

ಕರ್ನಾಟಕದ ಪೊಲೀಸರೂ ಈಗ ಹಿಂಸೆ, ಅನ್ಯಾಯಗಳನ್ನು ಬೆಂಬಲಿಸುತ್ತಿರುವುದರಿಂದ ಮುಸ್ಲಿಂರಿಗೆ, ದಲಿತರಿಗೆ ಯಾವ ರಕ್ಷಣೆಯೂ ಸಿಗುವ ಸಾಧ್ಯತೆಗಳಿಲ್ಲ ಈಗ ಎಲ್ಲಾ ದಮನಿತರೂ ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳಬೇಕಾಗಿದೆ

KFD [illegible]

ಎಂಪವರ್ ಇಂಡಿಯಾ ಕಾನ್ಫರೆನ್ಸ್‌ಗೆ ಬನ್ನಿ



ಹಿಂದೂ ಸಮಾಜೋತ್ಸವದ ಸಂಭ್ರಮಕ್ಕೆ ಮಸೂದ್ ಸಾಹೇಬರ 'ಸಕ್ಕರೆ'!

ಕೊನೆಗೂ ಭಯ-ಆತಂಕ-ತಲ್ಲಣಗಳ ನಡುವೆ ಮಂಗಳೂರಿನಲ್ಲಿ ಬೃಹತ್ ಹಿಂದೂ ಸಮಾಜೋತ್ಸವ ನಡೆದೇ ಹೋಯಿತು. ಎರಡು ಲಕ್ಷಕ್ಕೂ ಮಿಕ್ಕ ಜನಸಾಗರವೇ ಕಲೆಯುತ್ತದೆ ಎನ್ನುವ ಅಂದಾಜು, ಮುಸ್ಲಿಮರು ಮೂರು ದಿನಗಳ ಕಾಲ ಅಘೋಷಿತ ಕರ್ಫ್ಯೂ ಆಚರಿಸಬೇಕಾಗುತ್ತದೆ ಎನ್ನುವ ದಿಗಿಲು, ಅದಕ್ಕೆ ಮುಖಂಡರುಗಳ ಫರ್ಮಾನು ಇದೆಲ್ಲಾ ನಡೆದು ಇಡೀ ಮಂಗಳೂರೇ ಕೇಸರಿ ಬಣ್ಣದಿಂದ ಮುಚ್ಚಿ ಹೋಗಿತ್ತು. ಕೊನೆಗೆ ಮಳೆಗಿಂತ ಗುಡುಗು ಮಿಂಚುಗಳ ಆರ್ಭಟವೇ ಜೋರು ಎಂಬಂತೆ ಎಲ್ಲವೂ ಠುಸ್ ಆಯಿತು. ಜನಸಾಗರವೂ 2 ಲಕ್ಷದ ಬದಲು 1 ಲಕ್ಷ ಮೀರಲಿಲ್ಲ. ಇದಕ್ಕೆ ಪ್ರಮುಖ ಕಾರಣ, ಪೊಲೀಸ್ ಉನ್ನತಾಧಿಕಾರಿಗಳು ಸಮಾಜೋತ್ಸವದ ಮುಖಂಡರನ್ನೇ ಕರೆದು ಏನಾದರೂ ಗಲಾಟೆ-ದೊಂಬಿ ನಡೆದರೆ ನೀವೇ ಬೆಲೆ ತೆರಬೇಕೆಂದು ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಸಿದ್ದು. ಅಲ್ಲಿಗೆ ಕೀಟಲೆ ಕಿತಾಪತಿಗಳಲ್ಲಿ ತೊಡಗಿಸಿಕೊಳ್ಳಬೇಕಾದವರೇ ಲಾಠಿ ಹಿಡಿದು ರಕ್ಷಣೆಯ ಹೊಣೆ ಹೊರಬೇಕಾಯಿತು. ಆದರೆ ಇಲ್ಲಿ ಭಾರೀ ಸುದ್ದಿಯಾಗಿದ್ದು ಮಾತ್ರ ಹಿಂದೂ ಸಮಾಜೋತ್ಸವದ 'ಶರಬತ್ತಿ'ಗೆ ಮಸೂದ್ ಸಾಹೇಬರ ಸಕ್ಕರೆ ಎನ್ನುವ ಸುದ್ದಿ.


ಸಚಿವ ನಾಗರಾಜಶೆಟ್ಟಿ

ಹತ್ತು ವರ್ಷದ ಹಿಂದೆ ಸೂರತ್ಕಲ್ ಕೋಮುಗಲಭೆ ಸಂದರ್ಭದಲ್ಲಿ ಉದಯಿಸಿದ್ದೇ ಮುಸ್ಲಿಂ ಸೆಂಟ್ರಲ್ ಕಮಿಟಿ. ಕೋಮುಗಲಭೆ ಪೀಡಿತ ಮುಸ್ಲಿಂ ಬಾಂಧವರ ಸಾಂತ್ವನಕ್ಕೆಂದೇ ಉದ್ಭವಿಸಿದ ಈ ಸೆಂಟ್ರಲ್ ಕಮಿಟಿಗೆ ಗಲ್ಫ್ ರಾಷ್ಟ್ರಗಳಿಂದ ದೊಡ್ಡ ಮೊತ್ತದ ಫಂಡು ಹರಿದು ಬರುತ್ತದೆ. ಇದರ ಸ್ಥಾಪಕಾಧ್ಯಕ್ಷರಾಗಿ ಆರಂಭದಿಂದಲೇ ಈ ಕಮಿಟಿಯನ್ನು ಸರಿದಾರಿಯಲ್ಲಿ ಮುನ್ನಡೆಸಿಕೊಂಡು ಬಂದವರು ತುಂಬೆ ಅಹ್ಮದ್ ಹಾಜಿ. ತುಂಬೆ ಹಾಜಿಗೆ ಅಧಿಕಾರದ ದರ್ಪ ಇತ್ತಾದರೂ ಹಣದ ವ್ಯವಹಾರದಲ್ಲಿ ದಕ್ಷರಾಗಿದ್ದವರು.

ಹೀಗೆ ಆಳಿದ ಊರಿಗೆ ಉಳಿದವನೇ ಗೌಡ ಎಂಬಂತೆ ತುಂಬೆ ಹಾಜಿಯವರೇ ಅಧ್ಯಕ್ಷರಾಗಿರುವುದನ್ನು ನೋಡಿ ಅದರ ಮೇಲೆ ಕಣ್ಣು ನೆಟ್ಟವರೇ ಮಸೂದ್. ಜನಾರ್ದನ ಪೂಜಾರಿಯವರನ್ನು ನೆರಳಿನಂತೆ ಹಿಂಬಾಲಿಸುವ ಈತನಿಗೆ ಮಂಗಳೂರಲ್ಲಿ ತಾನೇ ಮುಸ್ಲಿಮರ ಮುಂಚೂಣಿ ಲೀಡರ್ ಎನ್ನುವ ಭ್ರಮೆ.

ಉಳ್ಳಾಲದ ಯು.ಟಿ. ಖಾದರ್, ವಿಟ್ಲದ ಕೆ.ಎಂ. ಇಬ್ರಾಹಿಂನಂಥವರು ರಾಜಕೀಯದಲ್ಲಿ ಮುಂದೆ ಬಂದು ಎಲ್ಲಿ ತನ್ನನ್ನು ಓವರ್‌ಟೇಕ್ ಮಾಡಿಬಿಡುತ್ತಾರೋ ಎನ್ನುವ ಭಯದಲ್ಲಿ ಮುಸ್ಲಿಂ ಲೀಗ್‌ನಂತಹ ವಿಷಬೀಜವನ್ನು ಬಿತ್ತಿ ಬೆಳೆಸಿದ ಕುಕೀರ್ತಿ ಈತನದ್ದು. ಮುಸ್ಲಿಂ ಸೆಂಟ್ರಲ್ ಕಮಿಟಿಗೆ ಎರಡು ವರ್ಷದ ಹಿಂದೆ ಚುನಾವಣೆ ನಡೆಯದಂತೆ ಪಿತೂರಿ ಮಾಡಿ, ಪ್ರಧಾನ ಕಾರ್ಯದರ್ಶಿ ಹನೀಫ್ ಹಾಜಿಯ ಕೈವಾಡ ಮತ್ತು ಡಿ.ಎಂ. ಅಸ್ಲಾಂ ಎನ್ನುವ ಯುವಕನ ಹಿಕ್ಮತ್ತಿನಿಂದ ವಾಮಮಾರ್ಗದಲ್ಲಿ ಅಧ್ಯಕ್ಷನಾದ. ಆಮೇಲೆ ಕುರ್ಚಿ ಬಿಟ್ಟು ಏಳಲೇ ಇಲ್ಲ.

ಮುಸ್ಲಿಂ ಬಾಂಧವರು ತಮ್ಮ ತರಲೆ-ತಕರಾರುಗಳನ್ನು ಈತನ ಮುಂದೆ ತಂದರೆ "ನಿಮ್ಮದು ಯಾವಾಗ ನೋಡಿದರೂ ಮುಗಿಯುವುದಿಲ್ಲ" ಎಂದು ಉಡಾಫೆ ಮಾಡುತ್ತಾರೆ. ಇಂತಹ ಮಸೂದ್‌ಗೆ ಸಂಘ ಪರಿವಾರದ ಲೀಡರ್ ಯು.ಬಿ. ಪುರಾಣಿಕ್‌ನಂತವರೇ ದೋಸ್ತಿಗಳು. ನರಹಂತಕ ನರೇಂದ್ರ ಮೋದಿ ಶಿಷ್ಯ ನಾಗರಾಜ ಶೆಟ್ಟಿ ಬಗ್ಗೆ ಕೂಡಾ ಮಸೂದ್ ಸಾಹೇಬರಿಗೆ ಎಲ್ಲಿಲ್ಲದ ಅಕ್ಕರೆ. ಇಂಥವರಿಗೆಲ್ಲ ರಮ್ಜಾನ್ ತಿಂಗಳ ಇಫ್ತಾರ್ ಕೂಟ ಕೊಡುವುದೇ ಈತನ ಸಾಧನೆ.

ಮಂಗಳೂರು

ದಿವಿನಾಗಿ ಗಡ್ಡ ಬಿಟ್ಟು, ತಲೆಗೆ ಟೋಪಿ ಧರಿಸುವ ಮಸೂದ್ ನೋಡುವ ನೋಟಕ್ಕೇ ಓರ್ವ ಕಟ್ಟಾ ಮುಸ್ಲಿಂ ಲೀಡರ್. ಆದರೆ ಈತನ ಅಂತರಂಗದಲ್ಲಿ ಪ್ರವಹಿಸುತ್ತಿರುವುದು ಅಧಿಕಾರ ಲಾಲಸೆಯ ಸಂಘಿಗಳ ಓಲೈಕೆ.

ಇತ್ತೀಚೆಗೆ ಮಂಗಳೂರು ಕೋಮುಗಲಭೆಯಲ್ಲಿ ದಹಿಸಿದಾಗ ಎಲ್ಲಿದ್ದರೂ ಧಾವಿಸಿ ಬಂದು ಮುಸ್ಲಿಂ ಬಾಂಧವರ ಸಂತೈಸುವಿಕೆಯಲ್ಲಿ ತೊಡಗಬೇಕಾಗಿದ್ದ ಮಸೂದ್ ಸಾಹೇಬರ ಪತ್ತೆಯೇ ಇರಲಿಲ್ಲ. ಎಲ್ಲಿ ತನ್ನ ಉಪಸ್ಥಿತಿಯಿಂದ ಸಂಘ ಪರಿವಾರದ ಎಂ.ಬಿ. ಪುರಾಣಿಕ್‌ನಂತಹ ಮಿತ್ರರಿಗೆ ನೋವಾಗುತ್ತದೋ ಎನ್ನುವ ಭಯದಿಂದ ಒಂದು ಪತ್ರಿಕಾ ಹೇಳಿಕೆ ಕೊ[illegible] ಕೋಮುಗಲಭೆಯನ್ನು ಖಂಡಿ[illegible] ಮಸೂದ್ ಬೆಂಗಳೂರಲ್ಲಿ ಅಪ[illegible] ಕುಳಿತು "ನಾನು ದೆಹಲಿ[illegible]ಲ್ಲಿದ್ದೆ"ನೆಂದು ಸುಳ್ಳು ಹೇಳಿದ್ದ[illegible]

ಮಂಗಳೂರಲ್ಲಿ ಹಿಂದೂ ಸ[illegible] ಜೋತ್ಸವಕ್ಕೆ ತಯಾರಿ ನಡೆಯುತ್ತಿರುವಾಗ[illegible] ಮುಸಲ್ಮಾನರು ಮನೆಬಿಟ್ಟು ಕದಲಬಾರದು ಎಂದ[illegible] ಅನರ್ಥದ ಹೇಳಿಕೆ ಕೊಟ್ಟು ಗಾಬರಿ ಹುಟ್ಟ[illegible] ಮಸೂದ್ ನಸುಗುನ್ನಿಯಂತೆ ಸಮಾಜೋತ್ಸ[illegible] ಕಚೇರಿಗೇ ತೆರಳಿ ತನ್ನ ಸಂಪೂರ್ಣ ಸಹಕಾರವ[illegible] ಘೋಷಿಸಿಯೇಬಿಟ್ಟರು. ಅದು ಸಾಲದ್ದಕ್ಕೆ ಇ[illegible] ಮುಂದುವರಿದು, ಯಾರ ಅನುಮತಿಗೂ ಕಾಯ[illegible] 10 ಕ್ವಿಂಟಾಲ್ ಸಕ್ಕರೆಯನ್ನು ಉದಾರವಾಗಿ [illegible] ಮಾಡಿದರು.



ಮಂಗಳೂರಿನಲ್ಲಿ ನಡೆದ ಹಿಂದೂ ಸಮಾಜೋತ್ಸವ


ಅಂತೂ ಮಂಗಳೂರ[illegible] ಯಾವುದೇ ಅಹಿತಕರ ಘಟನೆಗಳಾಗದಂತೆ ಪೊಲೀಸರು 'ಬಿಗು'ವಾಗಿ[illegible] ವರ್ತಿಸಿರುವುದರಿಂದ ಹಿಂದೂ ಸಮಾಜೋತ್ಸವ[illegible] ತಣ್ಣಗೇ ಮುಗಿದು ಹೋಗಿದೆ. ಆದರೆ ಆಡುವವರ ಬಾಯಲ್ಲಿ 'ಮಸೂದ್ ಕೊಟ್ಟ ಸಕ್ಕರೆಯಿಂದ ಸಾಬಿಗಳು ಬಚಾವಾದರು' ಎನ್ನುವ ಡೈಲಾಗ್ ಪ್ರಚಲಿತದಲ್ಲಿದ[illegible] ಕೆ.ಎಂ. ಮಸೂದ್ ಎನ್ನ[illegible] ಮುಸ್ಲಿಂ ಸೆಂಟ್ರಲ್ ಕಮಿ[illegible] ಅಧ್ಯಕ್ಷ ಓರ್ವ ಜೋಕರ್[illegible] ಥರ ಬಿಂಬಿತವಾಗಿದ್ದಾರೆ.

-ವರದಿಗ[illegible]

ಕಾಲುವೆ ಒಡೆದರೂ ಇಸ್ಪೀಟು ತಟ್ಟುತ್ತಿದ್ದ ಅಧಿಕಾರಿಗಳು

ರೈತರ ಜೀವನಾಡಿಯಾದ ಕಾಲುವೆಯೊಂದು ಒಡೆದು 400 ಎಕರೆ ಭೂಮಿ, 3 ಕೋಟಿಯ ಫಸಲು ಹಾಳಾದ 20 ತಾಸುಗಳ ಬಳಿಕ ಜಿಲ್ಲಾ ಮಂತ್ರಿ ಬಂದರೆ ನೀರಾವರಿಯ ಯಾವೊಬ್ಬ ಅಧಿಕಾರಿಯೂ ಅಲ್ಲಿರಲಿಲ್ಲ, ಕೊನೆಗೆ ಅವರನ್ನ ಹುಡುಕಿಕೊಂಡು ಕಚೇರಿಗೆ ಹೋದರೆ ಅಲ್ಲೂ ಹಲವಾರು ಜನ ನಾಪತ್ತೆ; ಇದ್ದವರು 52 ಎಲೆ ತಟ್ಟುತ್ತಾ ಕುಳಿತಿದ್ದನ್ನು ಕಂಡು ಸಚಿವರೇ ಬೆಚ್ಚಿ ಬಿದ್ದಿದ್ದಾರೆ!


ಈಶ್ವರಪ್ಪ


ಅಲ್ಕೋಡ್ ಹನುಮಂತಪ್ಪ

ಇಂತಹ ನಾಚಿಕೆಗೇಡಿನ ಪ್ರಸಂಗ ಕುಮಾರಸ್ವಾಮಿ ಆಡಳಿತದಲ್ಲಿ ಅಲ್ಲದೇ ಇನ್ನೆಲ್ಲಿ ಕಾಣಲು ಸಾಧ್ಯ ಹೇಳಿ? ಅದೂ ಇಂದಿನ ಸಮ್ಮಿಶ್ರ ಸರ್ಕಾರ ಒಂದು ವರ್ಷ ಪೂರೈಸುವ ಎರಡು ದಿನ ಮುಂಚೆ ಹೀಗಾಗಿದ್ದು ಕ್ರೀಡಾ ಮಂತ್ರಿ ಅಲ್ಕೋಡ್ ಹನುಮಂತಪ್ಪನ ಜಿಲ್ಲೆಯ ನಾರಾಯಣಪುರ ಬಲದಂಡೆ ಕಾಲುವೆ ಒಡೆದು.

ಇಲ್ಲಿಯ ನೀರಾವರಿ ಯೋಜನೆಗಳಿಗೆ ನೀರಿನಂತೆ ಪೈಸೆ ಹರಿದು ಬಂದರೆ ಅದನ್ನು ಗೋಣಿಚೀಲದಲ್ಲಿ ತುಂಬಿಸಿಕೊಂಡು ತಮ್ಮ ಮನೆಗೆ ಹೊತ್ತೊಯ್ಯುವ ದುಷ್ಟ ಅಧಿಕಾರಿಗಳು, ಭ್ರಷ್ಟ ರಾಜಕಾರಣಿಗಳು ಒಂದು ಕೋಣ ಗುದ್ದಿದರೂ ಒಡೆಯುವಂತಹ ಕಾಲುವೆಗಳನ್ನು ನಿರ್ಮಿಸುತ್ತಾರೆ. ಕೃಷ್ಣಾ ಭಾಗ್ಯ ಜಲನಿಗಮದ ಅಡಿಯ ನಾರಾಯಣಪುರ ಬಲದಂಡೆ ಕಾಲುವೆ ಕಾಮಗಾರಿ ಬಗ್ಗೆ ಡಿಸೆಂಬರ್ ಅಂತ್ಯಕ್ಕೆ ಸಭೆ ಕರೆದಿದ್ದ ಅಲ್ಕೋಡ್ ಹನುಮಂತಪ್ಪ ಕೆಲಸದ ಬಗ್ಗೆ ಗುಟುರು ಹಾಕಿದರೂ ಯಾವೊಬ್ಬ ಅಧಿಕಾರಿಯೂ ಕೇರ್ ಮಾಡಲಿಲ್ಲ, ಏಕೆಂದರೆ ಅವರೆಲ್ಲ ಜಲಸಂಪನ್ಮೂಲ ಸಚಿವ ಕೆ.ಎಸ್. ಈಶ್ವರಪ್ಪನ ಚೇಲಾಗಳು ಮತ್ತು ಅವರ ಜಿಲ್ಲೆಯವರೇ. ಇಂಜನಿಯರ್ ಶಶಿಧರ್ ಬಂದು 10 ತಿಂಗಳಾದರೂ ಅಲ್ಕೋಡ್‌ಗೆ ಮುಖವನ್ನೇ ತೋರಿಸಿರಲಿಲ್ಲವಂತೆ. ಅಂದರೆ ದೇವದುರ್ಗದ ಅಳಿಯ ಅಲ್ಕೋಡ್ ಹನುಮಂತಪ್ಪನ ಉಸ್ತುವಾರಿ ಅದೆಷ್ಟು ಬಿಗಿಯಾಗಿರಬಹುದು ನೀವೇ ಲೆಕ್ಕ ಹಾಕಿ.


ನಾರಾಯಣಪುರ ಕಾಲುವೆ ಒಡೆದುಹೋಗಿರುವ ದೃಶ್ಯ

ಸದರಿ ಎನ್‌ಆರ್‌ಬಿಸಿ ಕಾಲುವೆ ಒಡೆದಿರುವುದು 69 ನೇ ಕಿ.ಮೀ.ನ ಮುಖ್ಯ ಕಾಲುವೆ. ಇದರಿಂದಾಗಿ ಕೋಟ್ಯಂತರ ರೂ.ಗಳ ಬೆಳೆ ನಷ್ಟವಾಗಿದೆ. ಈ ಕಾಲುವೆಯಲ್ಲಿ ನೀರು ಹರಿಯುವ ಸಾಮರ್ಥ್ಯ ಸುಮಾರು 3 ಸಾವಿರ ಕ್ಯೂಸೆಕ್ಸ್. ಮೊನ್ನೆ ಬುಧವಾರ ಈ ಕಾಲುವೆ ಹೊಡೆದಾಗ ಅದರಲ್ಲಿ ಹರಿಯುತ್ತಿದ್ದುದು ಸುಮಾರು ಆರು ನೂರು ಕ್ಯೂಸೆಕ್ಸ್! ಅಂದರೆ ಇಲ್ಲಿಯ ಇಂಜನಿಯರ್‌ಗಳಿಗೆ ಗಟಾರು ಮತ್ತು ಕಾಲುವೆ ನಿರ್ಮಾಣದ ತಂತ್ರಜ್ಞಾನದ ವ್ಯತ್ಯಾಸವೇ ಗೊತ್ತಿಲ್ಲ ಎಂದಾಯಿತು.

ರಾಯಚೂರು

ಕಾಲುವೆ ನಿರ್ಮಾಣದಲ್ಲಾದ ದೋಷದಿಂದ ಒಡೆದಿದ್ದು ನೋಡಲು ಮಂತ್ರಿ ಅಲ್ಕೋಡ್ ಹನುಮಂತಪ್ಪ ಹೋದರೆ ಕೃಷಿ ಜಲಭಾಗ್ಯ ನಿಗಮದ ಒಬ್ಬ ಅಧಿಕಾರಿಯೂ ಅಲ್ಲಿಲ್ಲ, ನೀರು ಹಾಗೇ ಹರಿಯುತ್ತಲೇ ಇದೆ. ನೋಡೋಣ ಅಂತ ಅಮರಾಪುರ ಕ್ರಾಸ್‌ನಲ್ಲಿರುವ ಕಚೇರಿಗೆ ಹೋದರೆ ಅಲ್ಲಿಯೂ ಅಧಿಕಾರಿಗಳಿಲ್ಲ, ಇದ್ದ ಪ್ಯೂನ್ ಕೃಷ್ಣ ಮೇಸ್ತ್ರಿ ಬಸನಗೌಡ, ಮತ್ತೊಬ್ಬ ರಾಮಚಂದ್ರ ಶಿಸ್ತಾಗಿ ಬಾಗಿಲಿಗೆ ಚೋಲ್ಟ್ ಜಡಿದು ಇಸ್ಪೀಟ್ ಎಲೆ ತಟ್ಟುತ್ತಿದ್ದಾರೆ. ಮಂತ್ರಿಯೇ ಬಾಗಿಲು ತೆರೆಸಿದಾಗ ಇದೆಲ್ಲ ಬಯಲಾಯ[illegible] ಅವರಿಗೆಲ್ಲ ಬೈದು ಮಂತ್ರಿ ಉಪವಿಭಾಗ ಸ[illegible] 12ರ ಕಚೇರಿಗೆ ಬಂದರೆ ಅಲ್ಲಿಯೂ ಮುಕ್ಕಾಲು ಪಾಲು ಸಿಬ್ಬಂದಿ ಚಕ್ಕರ್! ಅಮರೇಶ್ ಎಂಬ ಖದೀಮ ಅಧಿಕಾರಿ ಜನವರಿ 8 ರಂದು ಸಹಿ ಹಾಕಿ ಹೋದವನು ಮೊನ್ನೆವರೆಗೆ ಬಂದೇ ಇ[illegible] ಅಷ್ಟೇ ಅಲ್ಲ ಡ್ರೈವರ್ ಸಂಗಯ್ಯನಿಂದ [illegible] ಹಿಡಿದು ಜೆ.ಇ. ಹಂಪಣ್ಣನವರೆಗೂ ಎಲ್ಲರೂ ಚಕ್ಕರ್ ಹೊಡೆದಿದ್ದು ಸ್ವತಃ ಮಂತ್ರಿಗೆ ಕಂಡುಬಂತು. ಅಂದಂತೆ ಇಸ್ಪೀಟ್ ಆಡುವಾಗ ಮಂತ್ರಿಗೆ ಸಿಕ್ಕಿಬಿದ್ದವರಲ್ಲಿ ಕೃಷ್ಣ ರಾಮಚಂದ್ರ ಎಂಬುವವರನ್ನು ಶುಕ್ರವಾರ ಪೊಲೀಸ[illegible] ಬಂಧಿಸಿ 238 ರೂ. ವಶಪಡಿಸಿಕೊಂಡಿದ್ದಾರೆ.

ಎರಡು ಪ್ರೋಕ್ ಲೈನ್, 6 ಟ[illegible] ರೂಲರ್ ತರಿಸಿ 20 ಲಕ್ಷ ಖರ್ಚು ಮ[illegible] ರಿಪೇರಿ ಕೆಲಸ ಮುಗಿಸಲು ಆರ್ಡರ್ ಮಾಡಿ[illegible] ಮಂತ್ರಿ "ಸೂಕ್ತ ಕ್ರಮ ತಗೊಂತೀನಿ ನೋಡ್ರಿ" ಜಬರಿಸಿ ಗಪ್ ಆಗಿದ್ದಾರೆ. ಅವರು ಮಾಡಬಹ[illegible]ಗಿದ್ದು ಅಷ್ಟೇ. ಏಕೆಂದರೆ ಬಹುತೇಕ ಅಧಿಕಾ[illegible] ಈಶ್ವರಪ್ಪನ ಕೈಯಲ್ಲಿದ್ದಾರೆ. ಜಾಸ್ತಿ ಹಾರಾಡಿದರೆ [illegible]ಗಾರಿ ವೀಕ್ಷಣೆಗೆ ಅಂತ ಬಂದು ರೊಕ್ಕ ವ[illegible] ಮಾಡಿಕೊಂಡು ಹೋಗ್ತಾನೆ ಅಂತ ಅಲ್ಕೋಡ್ [illegible]ದ್ಧವೇ ಅಧಿಕಾರಿಗಳು ಗಾಳಿ ಸುದ್ದಿ ಹಬ್ಬಿಸಿಬಿಡು[illegible] ಸಸ್ಪೆಂಡ್‌ಗೂ ಬಗ್ಗುವುದಿಲ್ಲ ಈ ಅಧಿಕಾರಿಗಳು. ಹ[illegible] ಹನುಮಂತಪ್ಪನನ್ನು ನೋಡಿದರೆ ಅಯ್ಯೋ ಅನ್ನಿಸ[illegible]

ಭ್ರಷ್ಟ ಈಶ್ವರಪ್ಪನಂತಹ ಮಂತ್ರಿಗಳಿಂದ, ಭ್ರಷ್ಟರಾದ ಅಧಿಕಾರಿಗಳಿಂದ, ಜಿಲ್ಲಾ ಮಂತ್ರಿಯ [illegible] ತನದಿಂದ ಹೊಡೆತ ಬೀಳುತ್ತಿರುವುದು ಇಲ್ಲಿನ ರೈ[illegible] ಅದೂ ಮಣ್ಣಿನ ಮೊಮ್ಮಗನ ದರ್ಬಾರಿನಲ್ಲೇ ಎಂ[illegible] ಇನ್ನೂ ವಿಪರ್ಯಾಸ!

-ವರದಿ[illegible]

ಹಾವೇರಿ ಜಿಲ್ಲೆಯಿಂದ ಆಯ್ಕೆಯಾಗಿರುವ ಇತರೆ ನಾಲ್ಕು ಬಿಜೆಪಿ ಶಾಸಕರು ಮತ್ತು ಹಾನಗಲ್ ಶಾಸಕ ಹಾಗೂ ಮಂತ್ರಿ ಸಿ.ಎಂ. ಉದಾಸಿ ಕೂಡ ಸಂಸದ ಮಂಜುನಾಥ ಕುನ್ನೂರನಿಗೆ ಕವಡೆಕಾಸಿನ ಕಿಮ್ಮತ್ತು ಕೊಡುತ್ತಿಲ್ಲ. ಕುನ್ನೂರನ ಬಗ್ಗೆ ಬೇಸತ್ತಿರುವ ಚೆಡ್ಡಿ ಶಾಸಕರು ಆತನ ಜೊತೆ ಮಾತನಾಡುವುದಕ್ಕಿಂತ ಆತನ ವಿರುದ್ಧ ಕಂಪ್ಲೇಂಟ್‌ಗಳನ್ನೇ ಪಕ್ಷದ ನಾಯಕರಿಗೆ ಕೊಡುತ್ತಿದ್ದಾರೆ.


ಹಾವೇರಿ: ಚೆಡ್ಡಿಗಳಿಗೆ ತುಣಚಾಗಿರುವ ಕುನ್ನೂರ



ಸಂಸದ ಕಂ ಅರ್ಧ ಚೆಡ್ಡಿ ಮಂಜುನಾಥ ಕುನ್ನೂರ

"ಕೆಲಸ ಕೇಳಬೇಡಿ, ಊಟಕ್ಕೆ ಕರೆಯೋದನ್ನ ಮರೆಯಬೇಡಿ. ಬ್ರೀಫ್‌ಕೇಸಿನಲ್ಲಿ ಹಣ ತಂದಿದ್ದರೆ ಒಳಗೆ ಬನ್ನಿ" ಎಂದು ಸದಾ ಜಪಿಸುತ್ತಿರುವ ಧಾರವಾಡ ದಕ್ಷಿಣ ಕ್ಷೇತ್ರದ ಸಂಸದ ಕಂ ಅರ್ಧ ಚೆಡ್ಡಿ ಮಂಜುನಾಥ ಕುನ್ನೂರನ ಸದ್ಯದ ಸ್ಥಿತಿ ಎಕ್ಕಡೇಶ್ವರ ಮಹಾತ್ಮೆಯಂತಾಗಿದೆ. ಈತ ಪಕ್ಷದ ನಿಷ್ಠಾವಂತರನ್ನ ಕಡೆಗಣಿಸುತ್ತಾನೆ, ಪಾರ್ಟಿಯನ್ನು ಕಾಲಕಸ ಮಾಡಿದ್ದಾನೆ, ನಮಗ್ಯಾರಿಗೂ ಕ್ಯಾರೇ ಎನ್ನುವುದಿಲ್ಲ ಎಂಬುದು ಈಗ ಚೆಡ್ಡಿಗಳ ದಿನನಿತ್ಯದ ಅಳಲಾಗಿದೆ.

ಇದೇ ಕುನ್ನೂರ ಹಿಂದೊಮ್ಮೆ ಸಕ್ಕರೆ ಮತ್ತು ನೂಲಿನ ಫ್ಯಾಕ್ಟರಿ ಎಂದು ಹೇಳಿ ಜನರಿಂದ ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿ ಅದನ್ನೆಲ್ಲ ನುಂಗಿ ನೀರು ಕುಡಿದ. ಅದನ್ನು ಜನ ಮರೆಯುವ ಹಂತದಲ್ಲಿರುವಾಗ "ಗೋವಿನ ಜೋಳ ಸಂಸ್ಕರಣ ಕೇಂದ್ರ ತೆಗಿತೀನಿ, ಅದಕ್ಕೆ ಮೂರು ಕೋಟಿ ಸಂಗ್ರಹಿಸುತ್ತೇನೆ" ಎಂದು ಹೊರಟಿರುವುದನ್ನು ನೋಡಿ ಇನ್ನೆಷ್ಟು ಹಣವನ್ನು ಈತ ಗುಳುಂ ಮಾಡ್ತಾನೋ ಎಂದು ಗಾಬರಿಗೊಂಡಿದ್ದಾರೆ.



ರಾಜಶೇಖರ ಸಿಂಧೂರ

ಹದಿನೈದು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿದ್ದ ಕುನ್ನೂರ "ಸೋನಿಯಾ ಗಾಂಧಿಜೀ ಕೀ ಜೈ" ಎಂದು ಬಡಬಡಿಸುತ್ತಿದ್ದ. ಆದರೆ ಕಳೆದ ಚುನಾವಣೆಯಲ್ಲಿ ವಾಜಪೇಯಿ ಪರ ಗಾಳಿ ಬೀಸುತ್ತಿದೆ ಎಂದು ಭಾವಿಸಿ "ಅಟಲ್‌ಜೀ ಕೀ ಜೈ" ಎಂದು ಅರಚುತ್ತಾ ಬಿಜೆಪಿಯನ್ನು ಸೇರಿದ್ದ. ಇವನ ಸಮಯಸಾಧಕ ರಾಜಕಾರಣ ಗೊತ್ತಿದ್ದರೂ ಆತ ಗೆದ್ದರೆ ತಮಗೊಂದು ಸೀಟು ಬಂದಂತೆ ಎಂದು ಭಾವಿಸಿದ ಚೆಡ್ಡಿಗಳೂ ಅವನಿಗೆ ಟಿಕೆಟ್ ನೀಡಿದ್ದರಲ್ಲದೆ, ಸಂಘ ಪರಿವಾರದ ನಾಯಕರು ಮತ್ತು ಭಜರಂಗದ ಕಪಿಗಳು ಎಲ್ಲರೂ ಸೇರಿ ಈತನ ಗೆಲುವಿಗಾಗಿ ನಿಯತ್ತಿನಿಂದ ದುಡಿದಿದ್ದರು. ಆದರೆ ಉಂಡ ಮನೆಯ ಜಂತಿ ಎಣಿಯುವ ಜಾಯಮಾನದ ಕುನ್ನೂರ ಗೆದ್ದದ್ದು ತಾನಾಯಿತು ತನ್ನ ಕಬಳಿಕೆ ಆಯಿತು ಎಂಬಂತೆ ಇದ್ದಾನೆ. ಇದನ್ನು ನೋಡಿ ಸಂಘ ಪರಿವಾರದವರ ಚೆಡ್ಡಿಗಳಲ್ಲಿ ತುಣಚಿ ಹೊಕ್ಕಂತಾಗಿದೆ. ಆದ್ದರಿಂದಲೇ ಅವರೆಲ್ಲ ಸೇರಿ "ಇವನಿಗೆ ಹ್ಯಾಂಗ್ ಹೊಡೆದರೆ ಸುಧಾರಿಸ್ತಾನ, ಎದರಲ್ಲೆ ಹೊಡದರ ಬದಲಾಗುತ್ತಾನ" ಎಂಬ 'ಎನ್‌ಕೌಂಟರ್' ಖಯಾಲಿಯಲ್ಲಿದ್ದಾರೆ.

ಹಾವೇರಿ ಜಿಲ್ಲೆಯಿಂದ ಆಯ್ಕೆಯಾಗಿರುವ ಇತರೆ ನಾಲ್ಕು ಬಿಜೆಪಿ ಶಾಸಕರು ಮತ್ತು ಹಾನಗಲ್ ಶಾಸಕ ಹಾಗೂ ಮಂತ್ರಿ ಸಿ.ಎಂ. ಉದಾಸಿ ಕೂಡ ಸಂಸದ ಮಂಜುನಾಥ ಕುನ್ನೂರನಿಗೆ ಕವಡೆಕಾಸಿನ ಕಿಮ್ಮತ್ತು ಕೊಡುತ್ತಿಲ್ಲ. ಕುನ್ನೂರನ ಬಗ್ಗೆ ಬೇಸತ್ತಿರುವ ಚೆಡ್ಡಿ ಶಾಸಕರು ಆತನ ಜೊತೆ ಮಾತನಾಡುವುದಕ್ಕಿಂತ ಆತನ ವಿರುದ್ಧ ಕಂಪ್ಲೇಂಟ್‌ಗಳನ್ನೇ ಪಕ್ಷದ ನಾಯಕರಿಗೆ ಕೊಡುತ್ತಿದ್ದಾರೆ.

ಇತ್ತೀಚೆಗೆ ನಡೆದ ಪಕ್ಷದ ಜಿಲ್ಲಾ ಅಧ್ಯಕ್ಷರ ಬದಲಾವಣೆಯಲ್ಲಿ ಕುನ್ನೂರ ತನ್ನ ತಂತ್ರಗಾರಿಕೆ ನಡೆಸಿ, ಜಿಲ್ಲಾ ಅಧ್ಯಕ್ಷ ಸ್ಥಾನದಲ್ಲಿ ತನ್ನ ಚೇಲಾ ಕೆ. ಶಿವಲಿಂಗಪ್ಪ ಮುಂದುವರೆಯುವಂತೆ ಮಾಡಿದ್ದಾನೆ. ಈ ಆಯ್ಕೆಯಿಂದ ಇಂದಿಗೂ ರಾಣೆಬೆನ್ನೂರಿನಲ್ಲಿ ಅಸಮಾಧಾನದ ಹೊಗೆ ಆಡುತ್ತಿದೆ. ತನ್ನ ಹಿಂದಿನ ಅಧಿಕಾರಾವಧಿಯಲ್ಲಿ ಶಿವಲಿಂಗಪ್ಪ ಪಕ್ಷ ಕಟ್ಟುವ ಕೆಲಸ ಮಾಡುವ ಬದಲಾಗಿ, ತನ್ನ ಪರ್ಸ್ ಗಟ್ಟಿ ಮಾಡಿಕೊಂಡ ಎಂದೇ ಕಾರ್ಯಕರ್ತರು ನಟಿಕೆ ಮುರಿಯುತ್ತಿದ್ದಾರೆ. ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದ ಶಿವಲಿಂಗಪ್ಪ ಬರೀ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಲಕ್ಷಾಂತರ ರೂ. ಲೂಟಿ ಮಾಡಿದ್ದಲ್ಲದೆ, ಅದನ್ನು ಪಕ್ಷಕ್ಕೆ ನೀಡುವ ಬದಲಾಗಿ ತನ್ನ ಜೇಬಿಗೇ ಇಳಿಸಿಕೊಂಡಿದ್ದಾನೆಂದು ಬಿಜೆಪಿ ಧುರೀಣರು ಕಿಡಿಕಾರುತ್ತಿದ್ದಾರೆ.

ನಿಯಮದಂತೆ ಜಿಲ್ಲಾ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸಬೇಕಿತ್ತು. ಆದರೆ ಕುನ್ನೂರ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ತನ್ನ ಬಂಟ ಶಿವಲಿಂಗಪ್ಪನನ್ನು ಮತ್ತೆ ಉಣ್ಣಲು ಕೂರಿಸಿರುವುದರ ವಿರುದ್ಧ ಕಳೆದ ವಾರ ರಾಣೆಬೆನ್ನೂರಿನಲ್ಲಿ ಪಕ್ಷದ ಅತೃಪ್ತರು ಒಂದು ದಿನ ಸಾಂಕೇತಿಕ ಉಪವಾಸ ನಡೆಸಿದ್ದಾರೆ. ಆದರೆ ಅದಕ್ಕೆ ಕುನ್ನೂರ ಬಗ್ಗದಿದ್ದಾಗ ಪಕ್ಕಾ ಚೆಡ್ಡಿಗಳಾದ ವೆಂಕಟೇಶ ಏಕಬೋಟೆ, ವಿಶ್ವನಾಥ ಹೊಳೆಬಾಗಿಲು, ಸಂಜೀವ ಶಿರಹಟ್ಟಿ ಮತ್ತು ಭಜರಂಗದಳದ ಇತರೆ ಮಂಗಗಳು "ರಾಣೆಬೆನ್ನೂರ ತಾಲ್ಲೂಕಿನಲ್ಲಿ ಬಿಜೆಪಿಯನ್ನೇ ಡಿಸಾಲ್ವ್ ಮಾಡ್ತಿವಿ" ಎಂಬ ಬೆದರಿಕೆ ಹಾಕಿದ್ದಾರೆ. ಇದನ್ನು ನೋಡಿ ಕುನ್ನೂರ ಮತ್ತು ಶಿವಲಿಂಗಪ್ಪ "ಮುತ್ತು ಕೊಟ್ಟರೂ ಸೈ, ಲದ್ದಿ ಕೊಟ್ಟರೂ ಸೈ" ಎಂಬಂತೆ ವರ್ತಿಸುತ್ತಿದ್ದಾರೆ.

ಇಡೀ ಜಿಲ್ಲೆಯಲ್ಲಿ ಕುನ್ನೂರನ ನೆರವಿಗೆ ಬರುವವರಿದ್ದರೆ ಅದು ಸವಣೂರಿನ ರಾಜಶೇಖರ ಸಿಂಧೂರ ಒಬ್ಬನೇ. ಕಳೆದ ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿದ್ದ ಸಿಂಧೂರನಿಗೆ ನೆರವಾಗಲು ಬಿಜೆಪಿಯ ಅಧಿಕೃತ ಅಭ್ಯರ್ಥಿ ಸೋಮಣ್ಣ ಬೇವಿನಮರದನಿಗೆ ಬತ್ತಿ ಇಟ್ಟು ಬಹಿರಂಗವಾಗಿ ಸಿಂಧೂರನ ಪರವಾಗಿ ಪ್ರಚಾರ ಮಾಡಿದ್ದ ಕುನ್ನೂರ. ಅದು ಸಾಲದೆಂಬಂತೆ, ಈಗ ಅದೇ ಸಿಂಧೂರನನ್ನೇ ಬಿಜೆಪಿಗೆ ತಂದು ಮತ್ತೆ ಬೇವಿನ ಮರನೊಂದಿಗೆ ರಿವೇಂಜ್‌ಗೆ ಬಿದ್ದಿದ್ದಾನೆ. ಇದೆಲ್ಲದರ ಮಧ್ಯೆ ಸವಣೂರಿನಲ್ಲಿ ಅಧ್ಯಕ್ಷನಾಗಿದ್ದ ಫಕ್ಕೀರಪ್ಪ ವಾಲ್ಮೀಕಿಯನ್ನು ಹಾಗೂ ಶಿಗ್ಗಾಂವ ತಾಲ್ಲೂಕಿನ ಅಧ್ಯಕ್ಷನಾಗಿದ್ದ ಬೇವಿನಮರದನನ್ನು ತಮ್ಮ ಸ್ಥಾನಗಳಿಂದ ರಾತ್ರೋರಾತ್ರಿ ಕಿತ್ತಾಕಿ ತನ್ನ ಹಳೆ ಪಟಾಲಂನ ಎಸ್.ಕೆ. ಅಕ್ಕಿ, ಸುಭಾಷ್ ಚವ್ಹಾಣ, ಗದಿಗೇಶ ಕುಲಕರ್ಣಿ ಹಾಗೂ ಶಿವಪ್ಪ ಜಡಿ ತರಹದ ತನ್ನ ಚಮಚಾಗಳನ್ನು ನೇಮಿಸಿದ್ದಾನೆ. ಸದ್ದಿಲ್ಲದೆ ಕುನ್ನೂರ ನಡೆಸಿದ ಈ ಬದಲಾವಣೆಗಳ ಬಗ್ಗೆ ಕಳೆದ ವಾರ ಜರುಗಿದ ಶಿಗ್ಗಾಂವ್ ಕ್ಷೇತ್ರದ ಬಿಜೆಪಿ ಪಕ್ಷದ ಸಭೆಯಲ್ಲಿ ಕಾರ್ಯಕರ್ತರು ಬಾಯಿಗೆಬಂದಂತೆ ಬೈದಿದ್ದಾರೆ. "ನೀವು ನಿಮ್ಮ ಅಪ್ಪಗೆ ಹುಟ್ಟಿದವರೇ ಆಗಿದ್ದರೆ ಮಾಡಿದ ತಪ್ಪು ಒಪ್ಪಿಕೊಳ್ಳಿರಿ" ಎಂದು ಕಾರ್ಯಕರ್ತರು ಕುನ್ನೂರ ಮತ್ತು ಸಿಂಧೂರನಿಗೆ ಹೇಳಿದಾಗ ಅವರಿಬ್ಬರೂ ತಮ್ಮ ಕಾರ್ ಹತ್ತಿ ಸಭೆಯಿಂದ ಪರಾರಿಯಾದರು. ಆದರೆ ಇಂದಿಗೂ ಭಜರಂಗಿ ಸೋಮಣ್ಣನ ಚೆಡ್ಡಿ ಸೈನ್ಯ "ಕುನ್ನೂರನಿಗೆ ಪಾಠ ಕಲಿಸುತ್ತೇವೆ" ಎಂದು ಹೇಳಿಕೊಂಡು ಅಂಡಲೆಯುತ್ತಿವೆ.




ಮಂತ್ರಿ ಉದಾಸಿ

ಬಿ ಫಾರ್ಮ್ ಪಡೆಯಲೆಂದೇ ಬಿಜೆಪಿ ಸೇರಿದ ಕುನ್ನೂರ ಈಗ ಪಕ್ಷಕ್ಕೂ ತನಗೂ ಸಂಬಂಧ ಇಲ್ಲವೆಂಬಂತೆ ವರ್ತಿಸುತ್ತಿರುವುದೂ ಚೆಡ್ಡಿಗಳ ಕೋಪಕ್ಕೆ ಕಾರಣವಾಗಿದೆ.

ಎಲ್ಲಾ ಹೆದ್ದಾರಿ ಮಹಿಮೆ

ಒಂದು ಕಾಲಕ್ಕೆ ಅಷ್ಟೇನೂ ಸಾಹುಕಾರನಲ್ಲದಿದ್ದ ಕುನ್ನೂರ ತನ್ನ ಇಪ್ಪತ್ತು ವರ್ಷದ ರಾಜಕಾರಣದಲ್ಲಿ ಗಳಿಸಿರುವ ಕೋಟಿಗಳಿಗೆ ಈಗ ಲೆಕ್ಕವಿಲ್ಲ. ಇಂಥ ನುಂಗಣ್ಣನಿಗೆ ವರದಾನವಾಗಿ ಬಂದದ್ದೇ ಚತುಷ್ಪಥ ಹೆದ್ದಾರಿ ಯೋಜನೆ. ಹೆದ್ದಾರಿಯ ಅಕ್ಕಪಕ್ಕದ ಜಮೀನು ರಸ್ತೆಗೆ ಹೋಗುತ್ತದೆ ಎಂದು ಗೊತ್ತಾದಾಗ ತನ್ನ ಸೋದರ ಶಿವಾನಂದನನ್ನು ರೈತರ ಮನೆಗಳಿಗೆ ಕಳುಹಿಸಿ, "ನಿಮಗೆಲ್ಲ ಪ್ರಾಧಿಕಾರದಿಂದ ಹೆಚ್ಚು ಹಣ ಕೊಡಿಸುತ್ತೇನೆ" ಎಂದು ಹೇಳಿ ರೈತರಿಂದಲೇ ಹಣ ಸಂಗ್ರಹಿಸಿದ್ದ.

ಇದೇ ಹೆದ್ದಾರಿಯ ನಿರ್ಮಾಣ ಕುರಿತಂತೆ ರಾಣೆಬೆನ್ನೂರಿನಿಂದ ಹುಬ್ಬಳ್ಳಿವರೆಗೆ ಗುತ್ತಿಗೆ ಪಡೆದ ಅಫ್ಕಾನ್ಸ್ ಕಂಪನಿಗೆ ತನ್ನ ಚೇಲಾಗಳಿಂದ ಧಿಕ್ಕಾರ ಹಾಕಿಸಿ, "ಕಳಪೆ ಕಾಮಗಾರಿ", "ಸಮಯ ವಿಳಂಬ" ಎಂದೆಲ್ಲಾ ಭಾಷಣ ಬಿಗಿದು, "ಪಾರ್ಲಿಮೆಂಟ್‌ನಲ್ಲಿ ಈ ವಿಷಯ ಎತ್ತುವೆ" ಎಂದು ಬೆದರಿಸಿ ಅಫ್ಕಾನ್ಸ್ ಕಂಪನಿಯಿಂದ ತಿಂಗಳಿಗೆ ಇಷ್ಟು ಅಂತಾ ಡೀಲ್ ಮಾಡಿಕೊಂಡಿದ್ದ. ಕುನ್ನೂರನ ಭಯದಲ್ಲಿರುವ ಅಫ್ಕಾನ್ಸ್ ಕಂಪನಿ ನೂರಾರು ಟನ್ ಕಾಂಕ್ರೀಟ್ ಹಾಕಿ ಈತನ ಹೊಸ ರೆಸಾರ್ಟನ್ನು ಕಟ್ಟಿ ಕೊಟ್ಟಿದೆ. ಇದನ್ನು ಜನ 'ಅಫ್ಕಾನ್ಸ್ ರೆಸಾರ್ಟ್' ಎಂದೇ ಕರೆಯುತ್ತಾರೆ. ಕುನ್ನೂರ ನಡೆಸುವ ಡಿಇಡಿ ಕಾಲೇಜ್, ಲೇಡಿಸ್ ಹಾಸ್ಟೆಲ್ ಸೇರಿದಂತೆ ಆತನ ತೋಟದ ಮನೆಯೂ ಇದೇ ಕಂಪನಿಯ ಕೃಪೆಯಿಂದ ನಿರ್ಮಾಣವಾಗಿವೆ ಎಂಬುದು ಈಗ ಹಾವೇರಿಯ ಬಜಾರುಗಳಲ್ಲಿ ಬಿಸಿ ಬಿಸಿ ಚರ್ಚೆಗೆ ಕಾರಣವಾಗಿದೆ.



ಯಡಿಯೂರಪ್ಪ

ಸಕ್ಕರೆ, ನೂಲು, ಈಗ ಪಾಪ್‌ಕಾರ್ನ್

ಮೊದಲ ಬಾರಿ ಶಾಸಕನಾಗಿದ್ದಾಗ ಶಿಗ್ಗಾಂವಿಯಲ್ಲೊಂದು ಸಕ್ಕರೆ ಕಾರ್ಖಾನೆ ತೆಗೆಯುತ್ತೇನೆ ಎಂದು 1025 ರೂ.ಗಳ ಶೇರ್ ಹಣವನ್ನು ಸಾರ್ವಜನಿಕರಿಂದ ಸಂಗ್ರಹಿಸಿದ್ದ ಕುನ್ನೂರ ಆಗ ಲಕ್ಷಾಂತರ ರೂ.ಗಳನ್ನು ಗುಳುಂ ಮಾಡಿದ್ದ. ತಮ್ಮ ಹಣ ಏನಾಯಿತು ಎಂದು ಕೇಳಿದ ಜನಕ್ಕೆ "ಕೆಸಿಸಿ ಬ್ಯಾಂಕಿನಲ್ಲಿ ಭದ್ರವಾಗಿದೆ" ಎಂದು ಉತ್ತರಿಸಿದ್ದ. ಆದರೆ ವಾಸ್ತವವಾಗಿ, ಈಗ ಬ್ಯಾಂಕಿನಲ್ಲಿ [illegible]

ಇದಾದ ನಂತರ ಬಸವೇಶ್ವರರ ಹೆಸರಿನಲ್ಲಿ ಪ್ರಾರಂಭವಾಗಬೇಕಿದ್ದ ಸಕ್ಕರೆ ಫ್ಯಾಕ್ಟರಿಯ ಹಣವನ್ನು ಉಪಯೋಗಿಸಿಕೊಂಡು [illegible] ವೇಶ್ವರರ ಹೆಸರಿನಲ್ಲಿ ಸಹಕಾರಿ ನೂಲಿನ ಗಿರಣಿ [illegible] ಸುತ್ತೇನೆ ಎಂದು ಕುನ್ನೂರ ಹೇಳಿದ. ಅವನ ಅದೃಷ್ಟವೋ ಜನರ ದುರಾದೃಷ್ಟವೋ, ಜನ ಅದನ್ನೂ ನಂಬಿದರು. ಆದರೆ ಈಗ ನೋಡಿದರೆ, ಇಲ್ಲಿಯವರೆಗೆ ಸಕ್ಕರೆಯೂ ಇಲ್ಲ, ನೂಲೂ ಇಲ್ಲ.

ಇದೆಲ್ಲ ಹಿಂದಿನ ಕತೆಯಾಯಿತು. ಈಗ ಸಂಸದನಾದ ನಂತರ ಕುನ್ನೂರ ಭಾರಿ ಗಾತ್ರದ ಪಾಪ್‌ಕಾರ್ನ್ ಯೋಜನೆಯೊಂದನ್ನು ಹಾಕಿದ್ದಾನೆ. ಇದಕ್ಕೆಂದು ಹಿರೇಕೆರೂರ ತಾಲ್ಲೂಕಿನ ಒಂದು ಮೂಲೆಯನ್ನು ಆಯ್ಕೆ ಮಾಡಿ, ಅಲ್ಲಿ ಗೋವಿನ ಜೋಳದ ಸಂಸ್ಕರಣ ಕೇಂದ್ರ ಪ್ರಾರಂಭಿಸುತ್ತೇನೆಂದು ಹೇಳುತ್ತಿದ್ದಾನೆ. ಇದಕ್ಕೆ ಸ್ಪೆಷಲಿಸ್ಟ್ ಆಗಿ ನೇಮಕಗೊಂಡಿರುವ ಸೊಲ್ಲಾಪೂರದ ಡಾ. ತಿವಾರಿ ಎಂಬಾತ ಈಗಾಗಲೇ ಇಲ್ಲಿಗೆ ಬಂದು ಇಲ್ಲಿನ ಮುಗ್ಧ ಜನರಿಗೆ ಪಾಪ್‌ಕಾರ್ನ್ ಕನಸನ್ನು ಬಿತ್ತರಿಸಿ ಹೋಗಿದ್ದಾನೆ. ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ವಿ.ಎಸ್. ಪಾಟೀಲ, ಮಾಜಿ ಶಾಸಕ ನಾಗಪ್ಪ ಬೆಲ್ಲದ, ಹಾವೇರಿ ವರ್ತಕ ಪಿಡಾಶಿರೂರ, ಶಿಗ್ಗಾಂವಿಯ ಎಸ್.ಜಿ. ಪಾಟೀಲ ಮತ್ತು ಎಚ್.ಆರ್. ದುಂಡಿಗೌಡ್ರ ಈಗಾಗಲೇ ಶೇರ್ ಬುಕ್ಕುಗಳೊಂದಿಗೆ ಬೀದಿಗೆ ಬಂದು ಜನರಿಂದ ಹಣ ಸಂಗ್ರಹಿಸಲು ರೆಡಿಯಾಗಿದ್ದಾರೆ.

ಆದರೆ ಕುನ್ನೂರನ ಭರವಸೆಗಳನ್ನು ಬಲ್ಲ ಚೆಡ್ಡಿಗಳು "ಇದೂ ಕೂಡ ಡಮ್ಮಿ ಪ್ರಾಜೆಕ್ಟ್" ಎಂದು ಹೇಳುತ್ತಿದ್ದಾರಲ್ಲದೆ, ಪ್ರಕಾಶ ಬಡಿಗೇರ, ಏಕಬೋಟೆ, ಹೊಳೆಬಾಗಿಲು ಮತ್ತು ಇತರೆ ಭಜರಂಗಿಗಳು ಭಗವಧ್ವಜದೊಂದಿಗೆ ಫೀಲ್ಡಿಗೆ ಇಳಿದು "ಕುನ್ನೂರನ ಪಾಪ್‌ಕಾರ್ನ್ ಒಂದು ಕತೆ" ಎಂಬುದನ್ನು ಜನರಿಗೆ ಹೇಳುತ್ತಿದ್ದಾರೆ.

ನೀರು ಕುಡಿಸದ ಭೂಪ

"ಆರು ಕೋಟಿಯಲ್ಲಿ ಮೂರು ಪಟ್ಟಣಗಳಿಗೆ ನೀರು ಕೊಡಿಸುತ್ತೇನೆ" ಎಂದು ಹೇಳಿ ನಾಗನೂರು ಕೆರೆ ಪ್ರಾಜೆಕ್ಟ್ ತಂದಿದ್ದ ಈ ಕುನ್ನೂರ. ಆ ಯೋಜನೆಗೆ ಈಗಾಗಲೇ 14 ಕೋಟಿ ರೂಪಾಯಿಗಳು ವೆಚ್ಚವಾಗಿದ್ದರೂ ಜನರಿಗೆ ಒಂದು ಹನಿ ನೀರು ಕೂಡ ಸಿಕ್ಕಿಲ್ಲ. ಬದಲಾಗಿ ಕೆರೆಯಲ್ಲಿದ್ದ ಮಣ್ಣನ್ನೂ ಹಣಕ್ಕೆ ಮಾರಿಕೊಂಡ ಕುನ್ನೂರ ಸೋಂಪಾಗಿ ಕುಳಿತಿದ್ದಾನೆ. ಈಗ ನೀರಿಗಾಗಿ ಜನ ಬಾಯಿ ಬಿಡುತ್ತಿದ್ದರೆ ಕುನ್ನೂರ ಮಾತ್ರ "ಯೋಜನೆ ಪೂರ್ಣವಾಗಲು 20 ಕೋಟಿಯಾದರೂ ಬೇಕು" ಎಂದು ಇಂಡೆಂಟ್ ಹಾಕಿದ್ದಾನೆ.

ಮಣ್ಣನ್ನೇ ನುಂಗಿದ ಭೂಪ ಇನ್ನು ಪೈಪುಗಳನ್ನು ಬಿಟ್ಟಾನೆಯೇ? ಅದಕ್ಕೆ ಇರಬೇಕು, ವರದಾ ನದಿಯಿಂದ ನೀರು ನಾಗನೂರ ಕೆರೆಗೆ ಬರಲೇ ಇಲ್ಲ. ಯಾಕೆಂದರೆ ನೀರು ಬರುವುದಕ್ಕೆ ಕಾಲುವೆ ಪೈಪುಗಳೇ ಇಲ್ಲ. ಆದರೂ ಈ ಯೋಜನೆ ಪೂರ್ತಿಯಾಗಿದೆ ಎಂದು ಸಣ್ಣ ನೀರಾವರಿ ಇಲಾಖೆಯ ದಾಖಲೆಗಳು ಹೇಳುತ್ತಿವೆ!

ಸದ್ಯ ಶಿಗ್ಗಾಂವಿ ಮತ್ತು ಸವಣೂರ ಮಧ್ಯೆ ನೀರಿಗಾಗಿ ಜಂಗಿ ಹತ್ತಿದೆ. ಎರಡೂ ಕಡೆಯ ಜನ ನ್ಯಾಯಾಲಯದ ಕಟ್ಟೆ ಏರಿದ್ದಾರೆ. ಕುಡಿಯುವ ನೀರಿನ ಯೋಜನೆಗೆ ಬಂದ ಹಣವನ್ನು ತಿಂದು, [illegible] ಇದನ್ನೇ ರಾಜಕಾರಣದ ಇಶ್ಯೂ ಮಾಡಿಕೊಂಡು ಬಂದಿರುವ ಕುನ್ನೂರನಿಗೆ ಜನ ನೀರು ಕುಡಿಸುವುದೆಂದು!

-ತುರಳೀಕುಪ್ಪೆ ವಿನಯ

ರಾಮಾಯಣದ ಪರಮಮೌಲ್ಯ-ಸನಾತನ, ವರ್ಣಾಶ್ರಮ ಧರ್ಮದ ಅಸಮ
ಶ್ರೇಣಿ ವ್ಯವಸ್ಥೆಯ ತಾರತಮ್ಯ. ಸ್ತ್ರೀಪುರುಷರ ಕೀಳುಮೇಲು-ಇವುಗಳ ತಳಹದಿ
ಮೇಲೆ ನಿಂತಿರುವ ಸನಾತನ, ಮಾನವೀಯ ಮೌಲ್ಯಗಳಿಗೆ ನೇರ ವಿರುದ್ಧವಾ
ಧರ್ಮವಾಗಿದೆ. ಇದರ ವರ್ಣಧರ್ಮದಲ್ಲಿ ರಾಮ, ವಾನರ ವಾಲಿಯ
ಮರೆಯಲ್ಲಿ ಕೊಲ್ಲುತ್ತಾನೆ, ಶೂದ್ರ ಶಂಭೂಕನನ್ನು ವಧೆ ಮಾಡುತ್ತಾ
ಇದರ ಗಂಡು ಹೆಣ್ಣಿನ ತಾರತಮ್ಯದಲ್ಲಿ ರಾಮ ಶೂರ್ಪನಖಿಯ
ಮೂಗು ಕೊಯಿಸುತ್ತಾನೆ, ಪರರ ಅಂಕೆಯಲ್ಲಿದ್ದ ತನ್ನ ಹೆಂಡತಿ ಸೀತೆಯ
ವಿಸರ್ಜಿಸುತ್ತಾನೆ, ಲೋಕನಿಂದೆಗೆ ಅವಳನ್ನು ಕಾಡಿಗಟ್ಟುತ್ತಾನೆ; ಇದರ ವೈ
ಮೌಲ್ಯಗಳಿಗಾಗಿ ತಮ್ಮನಾದ ಲಕ್ಷ್ಮಣನನ್ನು ರಾಮ ಪರಿತ್ಯಜಿಸುತ್ತಾನೆ

ರಾಮಕತೆ- ಒಂದು ಅಮಾನವೀಯ ಸನಾತನ ಚರಿತ್ರೆ



ಡಾ. ಪ್ರೋಲಂಕಿ ರಾಮಮೂರ್ತಿಯವರ

8 ಸೀತಾಯಣ



ರಾಮಾಯಣ, ಜನರು ತಿಳಿದುಕೊಂಡಂತೆ ರಾಮ ಸೀತೆಯರ ಕಥೆ-ರಾಮ ಮತ್ತು ಸೀತೆ ಎಂಬ ಪ್ರೇಮಿಗಳ ಪ್ರೇಮಕಥೆ. ಈ ಪ್ರೇಮ ಕಥೆಯಲ್ಲಿ ಪ್ರೇಮದ ಸಂಕೇತವೇ ಸೀತೆ; ಸನಾತನ ಸಂಕೇತವೇ ರಾಮ. ಆದರೆ ಪರಮ ಮೌಲ್ಯವಾದ 'ಪ್ರೇಮ'ವನ್ನು 'ಸೀತೆ'ಯನ್ನು ರಾಮನು ಅದೆಷ್ಟು ಬಾರಿ, ತನ್ನ ಜೀವನದ ಗಂಭೀರ ಸಂದರ್ಭಗಳಲ್ಲೆಲ್ಲಾ ರಾಮಾಯಣದುದ್ದಕ್ಕೂ, ಅಳತೆಗೋಲಾಗಿ ಉಪಯೋಗಿಸುತ್ತಾ ಸನಾತನ ಮೌಲ್ಯಗಳನ್ನೇ ಎತ್ತಿ ಹಿಡಿಯುತ್ತಾನೆ. ಭ್ರಾತೃ ಪ್ರೇಮಕ್ಕಾಗಿ ಭರತನಿಗೆ ರಾಮ ಸೀತೆಯನ್ನು ಕೊಡುತ್ತೇನೆನ್ನುತ್ತಾನೆ; ಬ್ರಾಹ್ಮಣ ಸಂರಕ್ಷಣೆಗೆ ಕೊಟ್ಟ ಮಾತಿಗಾಗಿ ರಾಮ ಸೀತೆಯನ್ನು ಬೇಕಾದರೆ ಬಿಟ್ಟುಬಿಡುತ್ತಾನೆ; ಮಿತ್ರನಾದ ಸುಗ್ರೀವನ ಪ್ರಾಣ ರಕ್ಷಣೆಯಾಗದಿದ್ದಲ್ಲಿ ಸೀತೆ ರಾಮನಿಗೆ ಬೇಕಾದವಳಾಗುತ್ತಾಳೆ; ಲಕ್ಷ್ಮಣನು ಮೂರ್ಛೆ ಹೋದಾಗ ಅವನಿಗೆ ಸೀತೆಯಿಂದ ಆಗಬೇಕಾದ್ದೇನೂ ಇಲ್ಲವಾಗುತ್ತದೆಯಲ್ಲದೆ, ಸೀತೆಯಂತವಳು ಇನ್ನೊಬ್ಬಳು ಸಿಕ್ಕರೂ ತಮ್ಮನಾದ ಲಕ್ಷ್ಮಣನಂತಹವನು ಸೃಷ್ಟಿಯಲ್ಲೇ ದೊರಕದವನಾಗುತ್ತಾನೆ; ರಾಮನ ಕೀರ್ತಿಯ ಮುಂದೆ, ಅವನ ವಂಶದ ಹೆಗ್ಗಳಿಕೆಯೆದುರು, ಬೇರೆಯವರಿಂದ ಸ್ಪರ್ಶಿತಳಾದ ಕಳಂಕ ಸೀತೆ ಬೆಂಕಿಗೆ ಹಾಕಲು ಯೋಗ್ಯಳಾಗುತ್ತಾಳೆ; ಲೋಕ ನಿಂದೆಯನ್ನು ನಿವಾರಿಸಿಕೊಳ್ಳಲು ರಾಮನು ಲಕ್ಷ್ಮಣ ಭರತರನ್ನೇ ತ್ಯಜಿಸಬಲ್ಲನಾದ್ದರಿಂದ ಸೀತೆಯಂತೂ ಇನ್ನೂ ಸುಲಭ ತ್ಯಾಜ್ಯಳಾಗುತ್ತಾಳೆ-ಕಾಡಿಗೆ ಅಟ್ಟಲ್ಪಡುತ್ತಾಳೆ. ಕೊನೆಗೆ ನೆಲವನ್ನು ಹೊಕ್ಕು ಮಣ್ಣಾಗುತ್ತಾಳೆ.

ರಾಮಾಯಣದ ಕಥೆ ಸೀತೆಯಿಂದ ಅಳೆಯಲ್ಪಟ್ಟ ಮುಖ್ಯೋದ್ದೇಶ ಅಥವಾ ಆದರ್ಶವನ್ನಾಗಿ ಮಾಡಿಕೊಂಡು, ರಾಮಾಯಣದುದ್ದಕ್ಕೂ ಋಷ್ಯಾಶ್ರಮಗಳ ತಪೋಭೂಮಿಗಳ ಸಂರಕ್ಷಣೆ ಸಂದರ್ಶನಗಳನ್ನು ಮಾಡುತ್ತಾ ಉತ್ತರಕಾಂಡದ ಹೊತ್ತಿಗೆ, ಪರಶುರಾಮನು ಕ್ಷತ್ರಿಯರನ್ನು ಕೊಲ್ಲುತ್ತಾ ಬ್ರಾಹ್ಮಣ್ಯವನ್ನು ರಕ್ಷಿಸುವಂತೆ ಶಂಭೂಕನನ್ನು ಕೊಂದು ಸನಾತನ ಧರ್ಮವನ್ನು ಸಂರಕ್ಷಿಸುತ್ತಾನೆ. ಪರಶುರಾಮನ ಕೆಲಸವನ್ನು ತಾನು ಮುಂದುವರಿಸುತ್ತಾನೆ; ವಿಶ್ವಾಮಿತ್ರನಂತೆ ಬ್ರಾಹ್ಮಣನಾಗುತ್ತಾನೆ.

ಇಡಿಯ ರಾಮಾಯಣದ ಪರಮಮೌಲ್ಯ-ಸನಾತನ, ವರ್ಣಾಶ್ರಮ ಧರ್ಮದ ಅಸಮತೆ, ಶ್ರೇಣಿ ವ್ಯವಸ್ಥೆಯ ತಾರತಮ್ಯ, ಸ್ತ್ರೀಪುರುಷರ ಕೀಳುಮೇಲು-ಇವುಗಳ ತಳ ಹದಿಯ ಮೇಲೆ ನಿಂತಿರುವ ಸನಾತನ, ಮಾನವೀಯ ಮೌಲ್ಯಗಳಿಗೆ ನೇರ ವಿರುದ್ಧವಾದ ಧರ್ಮವಾಗಿದೆ. ಈ ಸನಾತನದ ಶ್ರೇಣಿ ವ್ಯವಸ್ಥೆಯಲ್ಲಿ ಮಗನಾದ ರಾಮ ಕಾಡಿಗೆ ಹೋಗುತ್ತಾನೆ, ತಮ್ಮನಾದ ಲಕ್ಷ್ಮಣ ತನ್ನ ವ್ಯಕ್ತಿತ್ವವನ್ನೇ ಹಿಂಗಿಸಿಕೊಂಡ ದಾಸನಾಗುತ್ತಾನೆ; ಇದರ ವರ್ಣಧರ್ಮದಲ್ಲಿ ರಾಮ, ವಾನರ ವಾಲಿಯನ್ನು ಮರೆಯಲ್ಲಿ ಕೊಲ್ಲುತ್ತಾನೆ, ಶೂದ್ರ ಶಂಭೂಕನನ್ನು ವಧೆ ಮಾಡುತ್ತಾನೆ; ಇದರ ಗಂಡು ಹೆಣ್ಣಿನ ತಾರತಮ್ಯದಲ್ಲಿ ರಾಮ ಶೂರ್ಪನಖಿಯ ಕಿವಿ ಮೂಗು ಕೊಯಿಸುತ್ತಾನೆ, ಪರರ ಅಂಕೆಯಲ್ಲಿದ್ದ ತನ್ನ ಹೆಂಡತಿ ಸೀತೆಯನ್ನು ವಿಸರ್ಜಿಸುತ್ತಾನೆ, ಲೋಕನಿಂದೆಗೆ ಅವಳನ್ನು ಕಾಡಿಗಟ್ಟುತ್ತಾನೆ; ಇದರ ವೈದಿಕ ಮೌಲ್ಯಗಳಿಗಾಗಿ ತಮ್ಮನಾದ ಲಕ್ಷ್ಮಣನನ್ನು ರಾಮ ಪರಿತ್ಯಜಿಸುತ್ತಾನೆ, ಎಲ್ಲವನ್ನೂ ತ್ಯಜಿಸಿ ತಾನೇ ಮಹಾ ಪ್ರಸ್ಥಾನವನ್ನು ಕೈಗೊಳ್ಳುತ್ತಾನೆ. ಒಂದು ವಿಶೇಷ ರೀತಿಯಲ್ಲಿ ರಾಮಾಯಣ ಸನಾತನ

ಪ್ರಾಕ್ಟಿಕಲ್ ಕ್ರಿಟಿಸಿಸಮ್ಮಿನಂತಹ ಸಂದರ್ಭದಲ್ಲೂ ಅನಂತಮೂರ್ತಿ ರಾಮಾಯಣದ ಬಗ್ಗೆ ಒದಿಗೆ ಹೊರತಾದ ಅವಿಮರ್ಶಾತ್ಮಕ ಮಾತನ್ನಾಡಿದ್ದಾರೆ. ಅವರು ಅಡಿಗರ ಪದ್ಯವನ್ನು ಮೆಚ್ಚುವಲ್ಲೂ, 'ಉಡಾಫೆ' ಎಂಬ ಉರ್ದು ಪದದ ಉಪಯೋಗವನ್ನು ಭಾಷೆ, ಬಳಕೆಯ ಹೊಸತಿಗಾಗಿ ಹೊಗಳಿದ್ದಾರೆಯಾಗಲಿ, ಆ ಕ್ರಾಂತಿಕಾರರ ಭಾಷಾ ನಾವೀನ್ಯತೆಯ ಹಿಂದುಗಡೆ ಪಟ್ಟಭದ್ರವಾಗಿರುವ ಸಾಂಪ್ರದಾಯಿಕತೆ, ಸನಾನತೆಯನ್ನು ಅದು ಮಾನವೀಯ ಅನುಭವವಾಗಿ ಏನಾಗಿದೆ ಎನ್ನುವುದನ್ನು ವಿಮರ್ಶಿಸಿಲ್ಲ, ಈ ಮಾತನ್ನು ಇಲ್ಲಿ ಹೇಳಬೇಕಾಗಿರುವುದೇಕೆಂದರೆ, ಆಸ್ತಿಕತೆ, ಭಕ್ತಿಯ ಬಗ್ಗೆ ಬರೆವ ಡನ್, ಹರ್ಬರ್ಟ್, ಹಾಪ್‌ಕಿನ್ಸ್‌ರಂತಹ ಧಾರ್ಮಿಕ ಶ್ರದ್ಧೆಯ ಕವಿಗಳಲ್ಲಿ ಹೇಗೆ ಮಾನವೀಯವಾದ ತುಯ್ಲು ಒಮ್ಮೊಮ್ಮೆ ಧರ್ಮವನ್ನೇ, ದೇವರಲ್ಲಿನ

ಸಾಂಪ್ರದಾಯಕವಾದ, ಸನಾತನ ಧೋರಣೆಯ ಪ್ರತಿಪಾದಿಸುತ್ತಾ ಕೆಲವೆಡೆಗಳಲ್ಲಿ ಬರುತ್ತಾರೆ ಬಾಂದಿ ಎನ್ನುವ ಕವನಗಳಂತಹ ರಿಯಾಕ್ಷನರೀ ಮನೋಭಾ ತಳೆಯುತ್ತಾರೆ).

ರಾಮಾಯಣದ ಬಗ್ಗೆ ಸಮಕಾಲೀನ ನವ್ಯಪ್ರತಿ ಹೊಸ ಸೀಸೆಗಳ ಹಳೆಯ ಹೆಂಡವೇ ಆಗಿದೆ. ಮಾಸ್ತಿ ಆದಿಕವಿ ವಾಲ್ಮೀಕಿ, ಐವತ್ತರ ದಶಕದಲ್ಲಿ ಕಾಲೇ ಪಠ್ಯಪುಸ್ತಕವಾಗಿದ್ದು, ಎಂಬತ್ತರ ದಶಕದಲ್ಲೂ ಕಾಲೇ ಪಠ್ಯಪುಸ್ತಕವಾಗಿ ನಡೆದುಕೊಂಡು ಬಂದಿರುವುದು, ನಾಡಿನ, ರಾಮಾಯಣದಂತಹ ನಾಡಕಾವ್ಯದ ಬ ವಿಮರ್ಶಾ ಪ್ರಜ್ಞೆ ಎಷ್ಟು ಸ್ಥಗಿತವಾಗಿದೆ, ಸತ್ತಿದೆ ಎನ್ನು ಮನದಟ್ಟು ಮಾಡುತ್ತದೆ. ವಿಶ್ವವಿದ್ಯಾನಿಲಯ ಪ್ರ ಆದಿಕವಿ ವಾಲ್ಮೀಕಿಯಾಗಲೀ, ಸಾಹಿತ್ಯ ಅಕಾಡೆಮಿ ಪ ವಾಲ್ಮೀಕಿ ರಾಮಾಯಣ...... ಇದರಲ್ಲಿ ಸ್ವಲ್ಪವಾ ಪ್ರಶ್ನಿಸುವ ಔದಾರ್ಯವಾದರೂ ಅಲ್ಲಲ್ಲಿ ಕಂಡುಬರು ವಾಗಲೀ ಅನೂಚಾನವಾಗಿ ನಡೆದುಬಂದ, ಸಾಂಪ್ರದಾ ಸನಾತನ ಧೋರಣೆಯನ್ನೇ ಎತ್ತಿ ಹಿಡಿಯುವ ಭಕ್ತಿ ಜ ಧಾರ್ಮಿಕ ಧೋರಣೆಗಳು. ಅವುಗಳು ಬರಿಯ ಆ ಗಳು, ಅಭಿಪ್ರಾಯಗಳು, ನಂಬಿಕೆಗಳಾಗಿವೆಯ ವಸ್ತುನಿಷ್ಠರವಾದ ಓದಿನ ಪ್ರಮಾಣಗಳಾಗಿಲ್ಲ, ವಿ ಗಳಾಗಿಲ್ಲ.

ಈಗ ನಮಗೆ ಅತ್ಯಂತ ಅವಶ್ಯಕವಾಗಿ ಬೇಕಾಗಿರು ರಾಮಾಯಣದ ಓದು-ಅದರ ಮುಖ್ಯ ಪ್ರಸಂ ಕಾವ್ಯಭಾಗಗಳದ್ದಾದರೂ ಪ್ರಾಕ್ಟಿಕಲ್ ಕ್ರಿಟಿಸಿಸಂ. ಅ ಓದು ಈ ನಾಡಿನ ಮೂರು ಸಾವಿರ ವರ್ಷದ ಚರಿತ್ರೆ ನಡೆದಿದ್ದಾಗಿತ್ತಾದರೆ ರಾಮಾಯಣಗಳ ಪ್ರಮಾಣ ನಾಡಿನಲ್ಲಿ 'ಘಣಿರಾಯ ತಿಣುಕು'ವಷ್ಟು ಭೂಭಾ ಬೆಳೆಯುತ್ತಿರಲಿಲ್ಲ! ಅಂತೆಯೇ ಈ ನಾಡಿನ ಜನತೆ ಅದ್ದಿ, ಮಾನವೀಯತೆಯನ್ನು ನೀಗಿಸಿ, ನಿರ್ವೀರ್ಯಗೆ ಗ್ರೀಕರ ಬ್ಯಾಕ್ಟ್ರಿಯನ್ನರ, ಸಿಥಿಯನ್ನರ, ಪಾರ್ಥಿಯನ್ನರ, ಕು ಹೂಣರ, ತುರ್ಕರ, ಅರಬರ, ಆಫ್ಗನ್ನರ, ಪೋರ್ಚುಗೀ ಡಚ್ಚರ, ಫ್ರೆಂಚರ ಮತ್ತು ಬ್ರಿಟಿಷರ ಆಕ್ರಮಣ, ಮತಾಂತರಗಳ ಕ್ಷೋಭೆಗೆ ಗುರಿಮಾಡಿ, ಈ ಬಾಳಚರಿತೆಯನ್ನೇ ದಾಸ್ಯಗಾಥೆಯನ್ನಾಗಿಸಿ ರಾಮಾಯಣ ಸುತ್ತಿರಲಿಲ್ಲ.

ಈ ನಾಡಿನ ಜನಾಂಗದ ಜೀವನವನ್ನೇ ರೂಪಿ ನಡೆಯುತ್ತಿರುವ ಈ ಏಕೈಕ ಪ್ರಭಾವಕಾರೀ ಮಹಾಕಾವ್ಯವಾದ ರಾಮಾಯಣದ ಮೇಲೆ ಈ ಸಾಂಸ್ಕೃತಿಕ ಜವಾಬ್ದಾರಿ ಅಷ್ಟಿಷ್ಟಲ್ಲ. ಈಗ ಇಲ್ಲಿಯವ ನಾವು ಧಾರ್ಮಿಕ ಭ್ರಾಂತಿಯಲ್ಲೇ ಕಂಡುಕೊಂಡ ರಾ ಉಳಿದು, ವಾಲ್ಮೀಕಿ ರಾಮಾಯಣದ ನಿಜ ರಾ ಪ್ರತ್ಯಕ್ಷಗೊಳಿಸಬೇಕಾಗಿದೆ. ರಾಮಾಯಣದುದ್ದಕ್ಕೂ ರಾ 'ಪುರುಷವ್ಯಾಘ್ರ,' 'ಪುರುಷೋತ್ತಮ'ನೆಂದೇ ಸಂಬೋ ಲಾಗಿದೆ. ತುಳಸಿರಾಮಾಯಣದ ತುಳಸಿದಾಸ ರಾಮನನ್ನು 'ಮರ್ಯಾದಾ ಪುರುಷೋತ್ತಮ'ನೆ ಕರೆದು, ರಾಮನನ್ನು ಉತ್ತರ ಭಾರತದಲ್ಲಿ 'ಮರ್ಯಾ ಪುರೋಷೋತ್ತಮ'ನೆಂತಲೇ ಕರೆಯುವ ವಾಡಿಕೆ ಜನಾನುರಾಗಗೊಳಿಸಿದ್ದಾನೆ. ಅಡಿಗರ ಪದ್ಯದ ಅಂ ರಾಮ 'ಪುರುಷೋತ್ತಮ'- (ಈ ಸಾಲು ಎ ವಿಮರ್ಶೆ ಭಾರತೀಯ ಸಾಹಿತ್ಯದ, ತಲೆಬರಹ ಬಂದಿದೆ-)ನಾಗಿ ನಿಲ್ಲುತ್ತಾನೆ.

ಆದರೆ ಈ ಮರ್ಯಾದಾ ಪುರುಷೋತ್ತಮ ಭಕ್ತಜಾತ ಪುರುಷೋತ್ತಮನಾಗಲಿ, ವಾ ರಾಮಾಯಣದ ಕಾವ್ಯಜಾತನಲ್ಲ. ರಾಮಾಯಣದ ಕೇವಲ ಸನಾತನ ಮೌಲ್ಯಗಳ ಮೂಗಿನ ನೇರಕ್ಕೆ ಬ ಅತ್ಯಂತ ವಿಧೇಯನಾಗಿ- ಸೀತೆ ಲಕ್ಷ್ಮಣ ರೇಖೆ ದಾಟಿ ಕ್ರಾಂತಿಕಾರಳಾದರೂ- ತಾನು ಮಾತ್ರ ಧ ಗೆರೆಯನ್ನೂ ದಾಟೂಮೀರದೆ, ಇಂಗ್ಲಿಷ್ ಪದ ಕೆಸಬಿಯಾಂಕಾ (Casabianca) ದ ಕೆಸಬಿಯಾಂಕನೆನ್ನುವ ಹುಡುಗ ತಂದೆ ತನ್ನನ್ನು 'ಹ ಡೆಕ್ಕಿನ ಮೇಲೆ ನಿಂತಿರು' ಎನ್ನುವ ಪಿತೃವಿನ ಆಜ್ಞೆ ಹಡಗುಹತ್ತಿ ಉರಿಯುತ್ತಿದ್ದರೂ ಕದಲದೆ- 'ಉರಿ ಡೆಕ್ಕಿನ ಮೇಲೆ ಹುಡುಗ ನಿಂತೆ ಇದ್ದನು' ('The stood on the burning deck',) ದಾರುಣವಾದ ಅಭ್ಯಾಸಕ್ಕೆ ಗುರಿಯಾದವನಂತೆ, ಪಿ ಪರಿಪಾಲನೆಗೆ ಬದ್ಧಕಂಕಣನೂ, ಸನಾತನ ಧರ್ಮಕ ಅಂಧಶ್ರದ್ಧನೂ, ಬಾಲಕಾಂಡದಲ್ಲಿ ಬಿಲ್ಲನ್ನು ಮು

ಅಮಾನುಷ ರಾಮಕಥೆ ಅಮಾನವೀಯ ಸನಾತನ ಚರಿತ್ರೆ; ರಾಮಾಯಣ ಸೀತೆಯನ್ನು ಸನಾತನದ ಶಿಲುಬೆಗೇರಿಸಿದ ಅಮಾನುಷ ಸೀತಾಯಣವೇ ಆಗಿದೆ.

ರಾಮನು ಸೀತೆಯನ್ನು ನಿಂದಿಸಿ ನಿರಾಕರಿಸುತ್ತಿರಲು ಸೀತೆ ರಾಮನನ್ನು ಕುರಿತು 'ನೀನು ("ಪ್ರಾಕೃತಃಪ್ರಾಕೃತಾಮಿವ") ಅಸಂಸ್ಕೃತನಾದ ಒಬ್ಬ ಸಾಮಾನ್ಯ ಮನುಷ್ಯ ಸಂಸ್ಕೃತಿಶೂನ್ಯಳಾದ ಒಬ್ಬ ಹೆಂಗಸಿಗೆ ನುಡಿಯುವಂತೆ ನುಡಿಯುತ್ತಿರುವೆಯಲ್ಲ?' (ಉ.119, 5) ಎನ್ನುತ್ತಾಳೆ. ಅನಂತರ ಇಂದ್ರಾದಿ ದೇವತೆಗಳೂ 'ಉಪೇಕ್ಷಸೇ ಚ ವೈದೇಹೀಂ ಮಾನುಷಃ ಪ್ರಾಕತೋಯಥಾ', 'ಪ್ರಾಕೃತನಾದ ಒಬ್ಬ ಮಾನವನಂತೆ ವೈದೇಹಿಯನ್ನು ಉಪೇಕ್ಷಿಸಬಹುದೇ' (ಅದೇ 120, 10) ಎನ್ನುತ್ತಾರೆ. ರಾಮನನ್ನು ಸೀತೆ 'ಪ್ರಾಕೃತ', 'ಅಸಂಸ್ಕೃತ'ನೆನ್ನುವಲ್ಲಿ, ಶಕುಂತಲೆ, ತನ್ನನ್ನು ಶಂಕಿಸಿದ ದುಷ್ಯಂತನನ್ನು 'ಅನಾರ್ಯ'ನೆನ್ನುವಂತೆ, ಜಾತಿ ಅಥವಾ ವರ್ಣವನ್ನು ನಿರ್ದೇಶಿಸುವ ಭಾಷೆ ಅಥವಾ ಜನಾಂಗ (language or race)ಗಳ ಪಾರಿಭಾಷೆಯಲ್ಲಿ ಸಂಬೋಧಿಸುತ್ತಾಳೆ. ವಾಲಿಯನ್ನು ರಾಮನು ಕೊಂದು, ಅವನು ಮಾನವನಲ್ಲ, 'ಶಾಖಾಮೃಗ', ಆದ್ದರಿಂದ ಬೇಟೆಯ ಮೃಗದಂತೆ ಮರೆಯಲ್ಲಿ ನಿಂತು ಕೊಲ್ಲಲು ಅರ್ಹನೆಂದ ಮೇಲೆ, ಅವನ ಹೆಂಡತಿ ತಾರೆ ಅವನನ್ನು 'ಆರ್ಯಪುತ್ರ!' (ಕಿ.19, 27) ವೆಂದು ಕೂಗುತ್ತ ಅಳುತ್ತಾಳೆ. ಇಲ್ಲಿ ಭಾಷೆ-ಜನಾಂಗಗಳ, ಜಾತಿ-ವರ್ಣಗಳ ಪಾರಿಭಾಷಿಕ ಶಬ್ದಗಳಲ್ಲಿ ಪಾತ್ರಗಳ ಚರಿತ್ರೆಯನ್ನು, ಗುಣವನ್ನು ನಿರ್ದೇಶಿಸುತ್ತಿರುವುದು, ರಾಮಾಯಣದ ಮೂಲಭೂತವಾದ 'ಸಾಂಸ್ಕೃತಿಕ' ಕಳಕಳಿಯನ್ನು, ರಾಮನು, ಆ 'ಸಾಂಸ್ಕೃತಿಕ' ಸನಾತನಕ್ಕೆ ವೈದಿಕತೆಗೆ ಬದ್ಧಕಂಕಣನಾಗಿರುವುದನ್ನು ಎತ್ತಿ ತೋರಿಸುತ್ತದೆ. ರಾಮ ಲಕ್ಷ್ಮಣರ ಗುರುವಾದ ವಿಶ್ವಾಮಿತ್ರನ ಬಾಲಕಾಂಡದ ಹೆಚ್ಚು ಭಾಗದ ವಿವರಣೆ ಅವನು ಕ್ಷತ್ರಿಯತ್ವದಿಂದ ಬ್ರಾಹ್ಮಣತ್ವಕ್ಕೆ ಏರಲು ಮಾಡಿದ ನಾನಾ ತಪಸ್ಸುಗಳ ಸಂಕಷ್ಟಗಳದ್ದೇ ಆಗಿದೆ. ವಿಶ್ವಾಮಿತ್ರನ ಶಿಷ್ಯನಾದ ರಾಮನಾದರೋ ಗುರುವಿನ ಗೀಳನ್ನೇ ತನ್ನ ಜೀವನದ

ಮೌಲ್ಯಗಳ ಕೀರ್ತನೆಯಾಗಿದೆ.

ಆದರೆ ರಾಮಾಯಣ ಒಂದು ಕಾವ್ಯ ಸಾಹಿತ್ಯ ವಿಶೇಷ, ಕಲಾಕೃತಿ. ಹೇಗೆ ಭವಭೂತಿಯ ಉತ್ತರರಾಮಚರಿತೆ, ಕಾಳಿದಾಸನ ಶಾಕುಂತಲದಂತಹ ಕಾವ್ಯಗಳು ಸನಾತನದಲ್ಲೆ ಹುಟ್ಟಿಕೊಂಡ ಮಾನವನ ಅನುಭವಕ್ಕೊಡ್ಡಿದ ಕಲಾಕೃತಿಗಳೋ, ಹಾಗೆ ರಾಮಾಯಣವೂ ಓದುಗರ ಅನುಭವಕ್ಕೆ ಸಲ್ಲುವ, ಕಾವ್ಯವಾಗಿಯೇ ನಿಲ್ಲಬೇಕಾದ ಸಾಹಿತ್ಯಕೃತಿಯಾಗಿದೆ.

ಅನಂತಮೂರ್ತಿಯವರು ರಾಮಾಯಣವನ್ನು ಕಾವ್ಯವೆಂದು ಗುರುತಿಸುತ್ತಲೇ ಅದರ ಬಗ್ಗೆ 'ಸಮಾಜ', 'ಮನುಷ್ಯ', 'ನೈತಿಕ' ಎನ್ನುವ ಗಟ್ಟಿ ಮಾತುಗಳನ್ನಾಡಿದ್ದಾರೆಯಾದರೂ, ಅವರು ರಾಮನ 'ಉಪೇಕ್ಷೆ' 'ಉಡಾಫೆ' ಎನ್ನುವ ಅಡಿಗರ ಮಾತನ್ನೇ ಅನುಮೋದಿಸುವಲ್ಲಿ, ನಾವಿಲ್ಲಿ ರಾಮಾಯಣದ ಓದಿನಲ್ಲಿ ಕಾಣುತ್ತಿರುವ ರಾಮೋಪೇಕ್ಷೆ ಸೀತೆಯ ಅಗ್ನಿಪ್ರವೇಶದಂದು ಪರಾಕಾಷ್ಠತೆಯನ್ನು ಪಡೆಯುವುದನ್ನೂ, ಅನಂತರ ಸೀತೆಯನ್ನು ಕಾಡಿಗಟ್ಟುವುದರಲ್ಲಿ ಅಮಾನುಷತೆಯ ಪರಮಾವಧಿಯನ್ನು ತಲುಪಿ, ರಾಮನಲ್ಲಿ ಇದು ಒಂದು ಮೂಲಭೂತವಾದ ಲೈಂಗಿಕ ಸ್ತ್ರೀಜಿಗುಪ್ಸೆಯ ವಿಕಾರವಿರಬಹುದೇ ಅಥವಾ ಇದು ಅವನ ಸನಾತನ ಬರ್ಬರತೆಯೋ ಎನ್ನುವ ಶಂಕೆಗಳನ್ನು ತಂದೊಡ್ಡುತ್ತದೆಂಬುದನ್ನೂ ಪರಿಗಣಿಸದೆ, ಅನಾಮತ್ತಾಗಿ, ಕೇವಲ ನಂಬಿಕೆ ಅಥವಾ ಭಕ್ತಿಯಿಂದಲೇ ಉದ್ಭವಿಸುವ ಕೇವಲ ಅಭಿಪ್ರಾಯದ ಮಾತನ್ನೇ ಆಡಿದ್ದಾರೆ. ಅಡಿಗರ ಪದ್ಯವನ್ನು ಬಗೆಯುವ ಬಗೆ ಎನ್ನುವಂತಹ ಪ್ರಖರವಾದ

ನಂಬಿಕೆಯನ್ನೇ ಕದಡುವಂತೆ ಮಾಡುವುದರಿಂದ ಅವು ಮಾನವೀಯ ಅನುಭವದ ದಾಖಲೆಗಳಾಗಿ ನಮ್ಮನ್ನು ಈಗಲೂ ಮುಟ್ಟುತ್ತವೆ ಎಂಬುದನ್ನು ನಾವು ಗುರುತಿಸಬೇಕಾಗಿದೆ. ಅಡಿಗರ ಶ್ರೀರಾಮನವಮಿಯ ದಿವಸ ಕ್ರಿಸ್ತಪೂರ್ವದ ವಾಲ್ಮೀಕಿಯ ಭಕ್ತಿಯನ್ನೇ ಇಂದಿನ 'ರಾಕೆಟ್' 'ಸರ್ಚ್‌ಲೈಟ್'ಗಳ, ಭೂಗೋಳವನ್ನೇ ತಲಕೆಳಕು ಮಾಡುತ್ತಿರುವ ಸಮಯದ ಹೊಸತಿನಲ್ಲಿ, ಅಂದಿನಿಂದಿಗೂ ಭಾರತೀಯರನ್ನು ರಾಮನು ಸೀತೆಯನ್ನು ಬೆಂಕಿಗೆ ಹಾಕಿದ, ಕಾಡಿಗಟ್ಟಿದ ಕಥೆ ಕಾಡುತ್ತಲೆ ಬಂದಿರುವಾಗ, ಡೆಮಾಕ್ರಸಿಯನ್ನು, ವ್ಯಕ್ತಿವಿಶೇಷತೆಯ ಇಂಡಿವಿಜುಯಲಿಸಮ್ಮನ್ನೂ ಪ್ರಶ್ನಿಸುತ್ತಿರುವ ಈ ಸಂದರ್ಭದಲ್ಲೂ, ಎಲ್ಲೆಲ್ಲೂ ಹಿಂಸೆ, ಟೆರರಿಸಂ ತಾಂಡವವಾಡುತ್ತಿರುವ, ನ್ಯೂಕ್ಲಿಯರ್ ಯುದ್ಧವಾಗಿ ಎಲ್ಲವೂ ನಾಶವಾಗಬಹುದಾದ ಪ್ರಳಯಾಂತಿಕ ಸಂದಿಗ್ಧತೆಯ ಸಮಕಾಲದಲ್ಲೂ, ಅಡಿಗರ ಹಾಯಾದ 'ಪಾನಕ, ಪನಿವಾರ, ಕೋಸಂಬರಿ'ಗಳ 'ರಾಮಮೃತಪಾನ' ವಿಸ್ಮಯವನ್ನು ಹುಟ್ಟಿಸುವಂಥದ್ದು.

ಈ ಧೋರಣೆಯ ಬಗ್ಗೆ, ಬೆಂಗಳೂರಿನ ಬಂಡಾಯ ಸಾಹಿತ್ಯ ವೇದಿಕೆಯಿಂದ ಡಿ.ಆರ್. ನಾಗರಾಜ್ ಅವರು ಈ ಗಮನಾರ್ಹವಾದ ಮಾತುಗಳನ್ನು ಆಡಿದರು:

ಶ್ರೀ ಶ್ರೀಯವರದು ತಾತ್ವಿಕ ಕ್ರಾಂತಿ. ಅದು ಭಾಷೆ ಮತ್ತು ಕಾವ್ಯ ಕೃತಿಯಲ್ಲಿ ಎಷ್ಟೇ ಪ್ರಯೋಗಗಳಿದ್ದರೂ ಸಂಪ್ರದಾಯದ ಕಡೆಗೆ ವಾಲಿರುವಂಥದೆ. ಆದರೆ ಅಡಿಗರದು ಭಾಷಾವಿನ್ಯಾಸ ಮತ್ತು ಕಾವ್ಯಕೃತಿಯಲ್ಲಿ ಕ್ರಾಂತಿ. ತಾತ್ವಿಕವಾಗಿ ಸಂಪ್ರದಾಯದ ಕಡೆಗೇ ಹೆಚ್ಚು ತುಯ್ಯುವಂಥದು. (ಅಡಿಗರು

ಎಷ್ಟು ಬಾಲ (boy)ಕೋ, ಉತ್ತರಕಾಂಡದಲ್ಲಿ ಸೀತೆಯನ್ನು ಕಾಡಿಗಟ್ಟುವಾಗಲೂ ಅಷ್ಟೇ ಬಾಲನಾಗಿ ಉಳಿಯುವ, ಬೆಳೆಯದ, ಪ್ರೌಢನಾದ, ಮನುಷ್ಯ (man) ನಾಗದ, ಪುರುಷನಾಗದೇ 'ಪುರುಷೋತ್ತಮ'ನೆಂಬ ಬಿರು ದಾಂಕಿತನು. ವಾಲಿ ರಾಮನನ್ನು 'ಕ್ಷುದ್ರ', 'ಅಲ್ಪ'ನೆನ್ನುವ, ಸೀತೆ ಅವನನ್ನು 'ಪ್ರಾಕೃತ'ನೆನ್ನುವ ದುರಂತ ಗಂಭೀರ ವಚ ನಗಳು ರಾಮಾಯಣದ ಓದಿನಲ್ಲಿ ಋಜುವಾತಾಗುವ ರಾಮನ ನಿಜವಾದ ಅಂಕಿತನಾಮಗಳು, ಅನ್ವರ್ಥನಾಮಗಳು. ಈ ಸಂದರ್ಭದಲ್ಲಿ ಟಿ.ಎಸ್. ಎಲಿಯಟ್ಟನು, ಮಾನವನ ಮೊದಲ ತಂದೆತಾಯಿಗಳಾದ ಆ್ಯಡಂ ಮತ್ತು ಈವ್ ಅವರ ಬಗ್ಗೆ ಮಿಲ್ಟನ್ ಬರೆದ ಮಹಾ ಕಾವ್ಯವನ್ನು (Para dise Lost) ಕುರಿತು ಹೇಳುವ ಮಾತನ್ನು ನೆನೆಯಬೇಕು.

Either from the moralist point of view, or from the theological point of view, or from the psychologist's point of view, or from that of the political philosopher, or judging by the ordinary standards of likeableness in human beings, Milton is unsatisfactory, As a man, he is antipathetic.

ಈ ಮಾತುಗಳನ್ನು ಅಕ್ಷರಶಃ ವಾಲ್ಮೀಕಿಯ ಪುರುಷೋತ್ತಮನಾದ ರಾಮನ ಬಗ್ಗೆ ಹೇಳುವುದಾದರೆ, 'ನೀತಿವಂತನ ದೃಷ್ಟಿಯಲ್ಲಾಗಲೀ, ಧಾರ್ಮಿಕನ ದೃಷ್ಟಿಯಲ್ಲಾಗಲೀ, ಮನಶಾಸ್ತ್ರಜ್ಞನ ದೃಷ್ಟಿಯಲ್ಲಾಗಲೀ, ರಾಜಕೀಯ ತತ್ವಜ್ಞಾನಿಯ ದೃಷ್ಟಿಯಲ್ಲಾಗಲೀ, ಅಷ್ಟೇಕೆ, ಮಾನವರಲ್ಲಿ ಸಾಮಾನ್ಯವಾಗಿ ಪ್ರೀತಿಸಬಹುದಾದ ಗುಣಗಳ, ಮಾನವೀಯತೆಯ, ದೃಷ್ಟಿಯಲ್ಲಾಗಲೀ, ವಾಲ್ಮೀಕಿಯ ರಾಮ ಅಸಮರ್ಪಕ, ಅತೃಪ್ತಿಕರ. ಮನುಷ್ಯ ಸಹಜಭಾವನೆಗಳೇ ಅವನಲ್ಲಿರಲಿಲ್ಲ.'

ಆದರೆ ಎ. ಸೀತಾರಾಮಯ್ಯ ಹಾಗೂ ಭಗವಾನರು, ರಾಮಾಯಣದ ಆರಂಭದಲ್ಲಿ ನಾರದನ, ರಾಮನ ಬಗೆಗಿನ ಗುಣಗಾನವನ್ನು ತಮ್ಮ ಲೇಖನದ ಶೀರ್ಷಿಕೆಯಾಗಿ ಉದ್ಧರಿಸಿ, ಈ 'ಸರ್ವಗುಣ ಸಂಪನ್ನ ರಾಮ' ಎಂಬುದನ್ನು ತಮ್ಮ ವಿಮರ್ಶೆಯಲ್ಲಿ ಪ್ರತಿಪಾದಿಸಲು ಹೊರಟಿದ್ದಾರೆ. ಆದರೆ ಅವರು ತಿಳಿದಿರಬೇಕಾದ್ದು, ಲಾರೆನ್ಸನು ಹೇಳುವಂತೆ-'ಕಥೆಯನ್ನು, ಕಾವ್ಯವನ್ನು, ನಂಬಿ; ಕಥೆಗಾರನನ್ನಲ್ಲ ಕವಿಯನ್ನಲ್ಲ.' (Trust the tale, but not the artist) ನಮಗೆ ಬೇಕಾದ್ದು ನಾರದ ವಾಲ್ಮೀಕಿಗಳು ರಾಮನ ಬಗ್ಗೆ ಏನು ಹೇಳಿದ್ದಾರೆ, ಅಲ್ಲ; ರಾಮಾಯಣ ಕಾವ್ಯದಲ್ಲಿ ರಾಮ ಏನು ಆಗಿದ್ದಾನೆ ಎಂಬುದು: ಅದೇ ನಿಜವಾದ ರಾಮ. ಜೀವನದ ಅನುಭಾವದಲ್ಲಿ, ಕಲೆಯಲ್ಲಿ ಹುಟ್ಟಿದ ರಾಮ ಆ ರಾಮನನ್ನು ಹಿಡುಹಿಡಿಯುವುದೇ, ಕಂಡುಕೊಳ್ಳುವುದೇ ಡಿಸ್ಕವರಿಯೇ, ಈಗ ನಮಗೆ ರಾಮಾಯಣದ ಓದಿನಲ್ಲಿ ಆಗಬೇಕಾದ ಕರ್ತು.

ಸಂಕ್ರಮಣದ ಓದುಗರು ಈ ಹದಿನೇಳು ವರ್ಷದಿಂದಲೂ ನಿಲ್ಲದೆ, ನಿಲ್ಲಿಸದೆ, ಓದಿಕೊಂಡೇ ಬರುತ್ತಿರುವುದು ಓದಿನ ಬಗ್ಗೆ, ವಿಮರ್ಶೆಯ ಬಗ್ಗೆ, ಜೀವಂತ ಸಂವೇದನೆಯ ಬಗ್ಗೆ ಯಾರಿಗೂ ಹೆಮ್ಮೆ ಮತ್ತು ನೆಮ್ಮದಿಗಳನ್ನು ತರುವಂತಹ ವಿಷಯವಾಗಿದೆ. ಇದರಲ್ಲಿನ ರಾಮಾಯಣದ ಸೀತಾಯಣ ಲೇಖನ ನಾಡಿನ ಸಾರಸ್ವತ ಪ್ರಪಂಚವನ್ನು ಎಷ್ಟೇ ಅತ್ಯಲ್ಪ ಪ್ರಮಾಣದಲ್ಲಾದರೂ ಕದಡಿದೆ, ಎಚ್ಚರಿಸಿದೆ. ಆ ಕದಕು, ಎಚ್ಚರಿಕೆ ಪ್ರತಿಕ್ರಿಯೆಗಳ ರೂಪದಲ್ಲಿ ಅಚ್ಚಾಗುತ್ತಿವೆ. ಈ ಲೇಖನವೂ ಆ ದಿಶೆಯಲ್ಲಿಯೇ ಇನ್ನೊಂದು ಹೆಜ್ಜೆ ಇಕ್ಕುತ್ತಿದೆ. ಈ ಹೆಜ್ಜೆಗೆ ಓದುಗರ ಹೆಜ್ಜೆ ಸೇರಿಕೊಳ್ಳಬೇಕು, ಒಂದು ಪಾದಯಾತ್ರೆಯಾಗಿ ಈ ರಾಮಾಯಣದ ದಂಡಕಾರಣ್ಯವನ್ನು ಹಾದಿಸಬೇಕು. ಬೆಳೆದೂ, ಬೆಳೆದೂ ದಟ್ಟವಾಗಿ ಅಗಮ್ಯವಾಗಿರುವ ಈ ಪ್ರಜ್ಞೆಯ ಗೊಂಡಾರಣ್ಯ ಹೆಜ್ಜೆಗೆ ದಾರಿಯಾಗಬೇಕಾದರೆ, ನಾವು ಇಡುವ ಹೆಜ್ಜೆ ಬಲವಾದಷ್ಟೇ, ಎಚ್ಚರದ್ದೂ ಆಗಿರಬೇಕು. ರಾಮಾಯಣವನ್ನು ಈಗ ನಾವು ಓದಬೇಕು ಲಕ್ಷಣ, ಅಕ್ಷರ, ಶಬ್ದ, ಶಬ್ದಗಳ ಪ್ರಮಾಣ ವಾಚನವಾಗಬೇಕು. ಅವು ಹೇಳುವುದೇನಿದ್ದರೂ ಆ ಕಾವ್ಯವೇ , ಆ ಕಾವ್ಯದಲ್ಲೇ ಹೇಳಬೇಕು. ಈ ಓದಿಗೆ ತಾವು ಹೊರಗಿನಿಂದ, ಶಾಸ್ತ್ರ ವಿಮರ್ಶೆಯಿಂದ ಯಾವ ಸಲಕರಣೆ ಸಾಮಗ್ರಿಯನ್ನೂ ಸಿದ್ಧ ಮಾಡಿಕೊಳ್ಳಬೇಕಾಗಿಲ್ಲ; ಏಕೆಂದರೆ, ಈ ನಾಡಿನ ಹಲವೇ ಶತಮಾನದಷ್ಟು ಪ್ರಾಚೀನದ ಸನಾತನ ಸಂಪ್ರದಾಯದಲ್ಲೇ, ಭವಭೂತಿ, ಯಾವ ಲೀವಿಸ್ ಅಥವಾ ಎಲಿಯಟ್ಟರಿಗೆ ಕಡಿಮೆಯಿಲ್ಲದ ರೀತಿಯಲ್ಲಿ, ಶೂದ್ರನನ್ನು ಕೊಲ್ಲುವ, ಹೆಣ್ಣನ್ನು ಕಾಡಿಗಟ್ಟುವ ಸನಾತನ ಮೌಲ್ಯಗಳ ಕ್ರೂರತೆಗೆ ತನ್ನ ಮಾನವೀಯ ಸಂವೇದನೆಯ ಸಂಪತ್ತಿನಲ್ಲಿ, ವೈಯಕ್ತಿಕ ಸಹೃದಯೀ ತುಂಬಿದ ಶ್ರೀಮಂತತೆಯಲ್ಲಿ, ಸಾಕ್ಷಾತ್ತಾಗಿ, 'ಎಂಟಿದೆಸೆ'ಯವನಾಗಿ ಸ್ಪಂದಿಸಿದ್ದಾನೆ-ಈಗಿನ ಕಾಲದ ಸನಾತನಿಗಳನ್ನು ನಾಚಿಸಿದ್ದಾನೆ. ಈ ದಿಶೆಯಲ್ಲಿ ಭವಭೂತಿ ವಾಲ್ಮೀಕಿ ರಾಮಾಯಣದ ಮೊಟ್ಟ ಮೊದಲ ವಿಮರ್ಶಕ ಓದುಗನಾಗಿ ಚರಿತ್ರೆ ಮಾಡಿದ್ದಾನೆ. ಆದ್ದರಿಂದ ಅವನ ನಿರಂಕುಶ ಸಂವೇದನೆಯ, ಮಾನವೀಯತೆಯ, ಮಾನವೀಯತೆ ಮಾನವ ಜೀವನದಷ್ಟೇ ಪುರಾತನದ್ದಲ್ಲವೇ,-ಬೆಳಕಿನಲ್ಲಿ, ನಾವು ತುಂಬ್ಯಾಗಲೀ, ಸಹೃದಯಿಗಳಾದ ಓದುಗರಾದಾಗಲೀ, ಈಗ ಅನುಕರಿಸಿಗಳೇ, ಅಭಿಪ್ರಾಯ ಕೊಡುಗೆಗಳೇ ವಿಮರ್ಶೆಯನ್ನು ಕೊಂಡ ದಂಡಕಾರಣ್ಯಕ್ಕೆ ಇಳಿಯಬೇಕು.



ವರ್ಣ-ವರ್ಗಗಳ ಸಂಘರ್ಷ

ಶಿಲ್ಪಾಶೆಟ್ಟಿ ಎಂಬ ನಟಿ ಹಿಂದಿ ಚಿತ್ರೋದ್ಯಮದಲ್ಲಿ ಹದಿನೈದು ವರ್ಷಗಳ ಕಾಲ ಎಷ್ಟೇ ಹೆಣಗಾಡಿದರೂ ಸಿಗದಿದ್ದ ಖ್ಯಾತಿ ಮತ್ತು ಯಶಸ್ಸನ್ನು 'ಬಿಗ್ ಬ್ರದರ್' ಎಂಬ ಕಚಡಾ ಕಾರ್ಯಕ್ರಮದಲ್ಲಿ ಗೆಲ್ಲುವ ಮೂಲಕ ಪಡೆದಿದ್ದಾಳೆ. ಮಾಜಿ ವಿಶ್ವ ಸುಂದರಿಯಾದ, ಎರಡೂವರೆ ಇಂಗ್ಲಿಷ್ ಸಿನಿಮಾಗಳಲ್ಲಿ ನಟಿಸಿರುವ ಐಶ್ವರ್ಯ ರೈಗಿಂತಲೂ ಇವತ್ತು ಶಿಲ್ಪಾಶೆಟ್ಟಿ ಜಗತ್ತಿನಾದ್ಯಂತ, ಪ್ರಖ್ಯಾತಿ ಪಡೆದಿದ್ದಾಳೆ ಎಂದರೆ ಅಚ್ಚರಿಯಾಗುತ್ತದೆ.

ಆದರೆ ಈ ಇಡೀ ಪ್ರಸಂಗ ಶಿಲ್ಪಾಶೆಟ್ಟಿ ಎಂಬ ಸಾಮಾನ್ಯ ನಟಿಯನ್ನೂ ಮತ್ತು ಬ್ರಿಟನ್ನಿನ ಟಿವಿ ಚಾನೆಲ್ ಒಂದರ ಕುಖ್ಯಾತ ಕಾರ್ಯಕ್ರಮವನ್ನೂ ಮೀರಿದ್ದು. ಶಿಲ್ಪಾಶೆಟ್ಟಿ ಮತ್ತು 'ಬಿಗ್ ಬ್ರದರ್' ಪ್ರಕರಣ ನಮ್ಮಲ್ಲೇ ಹಲವಾರು ಪ್ರಶ್ನೆಗಳನ್ನು ಕೇಳಿಕೊಳ್ಳುವುದಕ್ಕೆ ಮತ್ತು ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ಸೂಕ್ತ ಸಲಕರಣೆಗಳಾಗಬೇಕಿದೆ.

ಮೊದಲನೆಯದಾಗಿ ಶಿಲ್ಪಾಶೆಟ್ಟಿ ಹಣದ ಆಸೆಗಾಗಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋದಳು ಎಂಬುದು ನಿಜವೇ ಆದರೂ, ಆಕೆಯಂತೆ ಅದರಲ್ಲಿ ಭಾಗವಹಿಸಿದ ಇತರರೂ ಅದೇ ಹಣಕ್ಕಾಗಿ ಮತ್ತು ಗೆಲುವು ತರುವ ಲಾಭಕ್ಕಾಗಿ ಹೋಗಿದ್ದರು ಎಂಬುದರ ಬಗ್ಗೆ ಎರಡು ಮಾತಿಲ್ಲ. ಇದು ಗೊತ್ತಿದ್ದರೂ ಮಹೇಶ್ ಭಟ್ ಎಂಬ ನಿರ್ದೇಶಕ "ಶಿಲ್ಪಾಶೆಟ್ಟಿ ಪಾಶ್ಚಿಮಾತ್ಯರ ಬೂಟುಗಳನ್ನು ನೆಕ್ಕಲು ಹೋಗಿದ್ದಾಳೆ" ಎಂದಾಗ, ಅದಕ್ಕೆ ಹಲವಾರು ಪ್ರಜ್ಞಾವಂತರೂ ತಲೆದೂಗಿದ್ದರು. ಆದರೆ ಅದೇ ಮಹೇಶ್ ಭಟ್ ಇತ್ತೀಚಿಗೆ ಹಲವಾರು ಇಂಗ್ಲಿಷ್ ಸಿನಿಮಾಗಳನ್ನು ಕದ್ದು ಹಿಂದಿಯಲ್ಲಿ ರೀಮೇಕ್ ಮಾಡಿರುವುದೂ ಬೂಟು ನೆಕ್ಕುವುದಕ್ಕೆ ಸಮಾನ ಅಲ್ಲವೆ ಎಂದು ಯಾರೂ ಪ್ರಶ್ನಿಸಲಿಲ್ಲ.


ಮಹೇಶ್ ಭಟ್

ಅಷ್ಟೇ ಯಾಕೆ, ಇವತ್ತಿಗೂ ನಮ್ಮ ಬಾಲಿವುಡ್ (ಈ ಪದ ಕೂಡ ಪಶ್ಚಿಮದ ಹಾಲಿವುಡ್‌ನ ತರ್ಜುಮೆ)ನವರು ಪಾಶ್ಚಿಮಾತ್ಯರು ನೀಡುವ ಪ್ರಶಸ್ತಿಗಳಿಗೆ, ಅಲ್ಲಿನ ಮನ್ನಣೆಗೆ ಹಪಹಪಿಸುವುದೂ ಅವರ ಬೂಟು ನೆಕ್ಕುವುದಕ್ಕೆ ಸಮಾನ ಎಂದು ಯಾರೂ ಭಾವಿಸಿಲ್ಲ. ಪ್ರತಿ ವರ್ಷ ಆಸ್ಕರ್ ಪ್ರಶಸ್ತಿಗೆ ನಾಮಕಗೊಳ್ಳುವುದೇ ಒಂದು ಸಾಧನೆ ಎಂಬಂತಹ ಸನ್ನಿವೇಶ ಇವತ್ತು ನಮ್ಮ ದೇಶದಲ್ಲಿದೆ. ಇಂತಹುದರಲ್ಲಿ ಹಣ, ಖ್ಯಾತಿಗಾಗಿ ಶಿಲ್ಪಾಶೆಟ್ಟಿ ಭಾಗವಹಿಸಿದಳು ಎಂದು ಲೇವಡಿ ಮಾಡುವ ಹಕ್ಕು ಯಾರಿಗಿದೆ?!

ಇನ್ನು ಶ್ರೇಣೀಕೃತ ಜಾತಿ ವ್ಯವಸ್ಥೆಯ ಆಧಾರವಾಗಿರುವ 'ವರ್ಣಾಶ್ರಮ' ಪದ್ಧತಿಯಲ್ಲಿ ಮುಳುಗಿರುವ ನಾವು ಇವತ್ತಿಗೂ ಪ್ರತಿಭಾವಂತರಾದರೂ ಕಪ್ಪಗಿರುವವರನ್ನು ಕಡೆಗಣಿಸಿ ಟೊಳ್ಳಾಗಿರುವ ಬೆಳ್ಳಗಿನವರನ್ನೇ ಇಷ್ಟಪಡುವುದು ವಾಡಿಕೆಯಾಗಿದೆ. ಬೆಳ್ಳಗಿರುವುದೇ ಒಂದು ವಿಶೇಷ ಎಂದು ನಂಬಿರುವ ನಮ್ಮ ಸಮಾಜ ಪ್ರತಿವರ್ಷ ಫೇರ್ ಅಂಡ್ ಲವ್ಲೀ ಎಂಬಂತಹ ಕ್ರೀಮ್‌ಗಳ ಮೇಲೆ ಸುರಿಯುವ ದುಡ್ಡಿನ ಪ್ರಮಾಣ ಕೇಳಿದರೆ ಹೇಸಿಗೆಯಾಗುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ನೀಡುವುದಾದರೆ, ಕಂದುಬಣ್ಣದ ಸಿಲ್ಕ್ ಸ್ಮಿತಾಳನ್ನು ಕಾಮದ ವಸ್ತುವಿನಂತೆ 'ಸೆಕ್ಸ್ ಬಾಂಬ್' ಎಂಬ ಬಿರುದು ನೀಡಿದ ಜನ, ಐಶ್ವರ್ಯ ರೈಳಂತಹ ಬಿಳಿ ಬೊಂಬೆಯನ್ನು 'ಕೈ ತೊಳೆದುಕೊಂಡು ಮುಟ್ಟಬೇಕು' ಅಂದರು. ಇದರ ಅರ್ಥ ಏನು? ಕಪ್ಪಗಿರುವುದನ್ನು ಸ್ವಾರ್ಥಕ್ಕೆ, ಭೋಗಕ್ಕೆ ಉಪಯೋಗಿಸಿಕೊಳ್ಳಬಹುದು. ಆದರೆ ಬೆಳ್ಳಗಿರುವುದು ಪವಿತ್ರವಾಗಿರುವುದರಿಂದ ಅದನ್ನು ಸ್ವಚ್ಛವಾಗಿ ಸ್ಪರ್ಶಿಸಬೇಕು ಎಂಬುದು ತಾನೇ?!

ಮೈಬಣ್ಣ ಹೇಗೆ ಅಂತರಾಳದಲ್ಲಿ ಹುದುಗಿರುವ ಭೇದಭಾವಕ್ಕೆ ಮೂಲವಾಗಿದೆಯೋ ಹಾಗೆಯೇ ಸಾಮಾಜಿಕ ಸ್ಥಾನಮಾನಗಳು, ಇಂಗ್ಲಿಷ್ ಭಾಷೆಯಲ್ಲಿ ಪ್ರಾವೀಣ್ಯತೆ ಇತ್ಯಾದಿಗಳೂ ಸಾಮಾಜಿಕ ಪ್ರತ್ಯೇಕತೆಯನ್ನು ತೋರಿಸುತ್ತದೆ. ಇದಕ್ಕೂ ಒಂದು ಉದಾಹರಣೆ ಕೊಡಬಹುದಾದರೆ, ಹತ್ತು ವರ್ಷಗಳ ಹಿಂದೆ 'ನ್ಯೂಯಾರ್ಕರ್' ಎಂಬ ಪತ್ರಿಕೆಯಲ್ಲಿ ಭಾರತೀಯ ಸಾಹಿತ್ಯದ ಬಗ್ಗೆ ಬರೆಯುವಾಗ ಇಂಗ್ಲಿಷ್ ಬರಹಗಾರ ಸಲ್ಮಾನ್ ರಷ್ದಿ ನಮ್ಮ ಹಲವಾರು ಭಾಷೆಗಳ ಸಾಹಿತ್ಯ ಸಂಪತ್ತನ್ನೇ ನಿರ್ಲಕ್ಷಿಸಿ ಕೇವಲ ಇಂಗ್ಲಿಷ್ ಬರಹಗಾರರನ್ನೇ ಭಾರತೀಯ ಸಾಹಿತ್ಯದ ಪ್ರತಿನಿಧಿಗಳು ಎಂದು ಪ್ರತಿಪಾದಿಸಿದ್ದರು. ಇದರ ವಿರುದ್ಧ ಯು.ಆರ್. ಅನಂತಮೂರ್ತಿ ಪ್ರತಿಭಟಿಸಿದ ನಂತರ ಸಲ್ಮಾನ್ ರಷ್ದಿ "ನಾನು ಹಾಗೆ ಹೇಳಲಿಲ್ಲ, ಅಪಾರ್ಥ ಆಗಿದೆ" ಎಂದು ಸಮಜಾಯಿಷಿ ನೀಡಿದ್ದರು. ಇದರರ್ಥ, ಭಾರತೀಯ ಭಾಷಾ ಪಾಂಡಿತ್ಯಕ್ಕಿಂತಲೂ ಬಟ್ಲರ್ ಇಂಗ್ಲಿಷ್ ಗೊತ್ತಿರುವವರೇ ಮೇಲು ಎಂಬುದು.

ಇದನ್ನೆಲ್ಲ ಪ್ರಸ್ತಾಪಿಸಿದ್ದಕ್ಕೆ ಕಾರಣ ಶಿಲ್ಪಾಶೆಟ್ಟಿ ಪ್ರಸಂಗದಲ್ಲಿ ಈ ಮೈಬಣ್ಣ ಮತ್ತು ಇಂಗ್ಲಿಷ್ ಜ್ಞಾನ ಎರಡೂ ವ್ಯಕ್ತವಾಗಿರುವುದಕ್ಕೆ ಮತ್ತು ಆ ಮೂಲಕ ಜನಾಂಗೀಯ ದ್ವೇಷ ಮಾತ್ರವಲ್ಲ, ನಮ್ಮ ಸಮಾಜದಲ್ಲೇ ಅಡಗಿರುವ ವರ್ಣಭೇದ ಮತ್ತು ಅಸಮಾನತೆಯನ್ನು ಮತ್ತೊಮ್ಮೆ ಅವಲೋಕಿಸುವ ಒಂದು ಸಾಧನವಾಗಿರುವುದಕ್ಕೆ.

ಶಿಲ್ಪಾಶೆಟ್ಟಿ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಆಕೆಗಿಂತ ಬೆಳ್ಳಗಿದ್ದವರೇ ಹೆಚ್ಚಾಗಿದ್ದರು. ಆದರೆ ಆಕೆಗಿಂತ ಕಡಿಮೆ ಇಂಗ್ಲಿಷ್ ಬಲ್ಲವರೂ ಹೆಚ್ಚಾಗಿದ್ದರು. ತಕರಾರು ಉದ್ಭವಿಸಿದ್ದೇ ಅಲ್ಲಿ. ಲಾಭದಾಯಕ ಉದ್ಯೋಗ, ಇಂಗ್ಲಿಷ್ ಪ್ರಾವೀಣ್ಯತೆ, ಆಧುನಿಕ ತಂತ್ರಜ್ಞಾನ ಹೊಂದಿರುವವರ ಜಗತ್ತಿನಲ್ಲಿ ಇವತ್ತು ಸಮುದಾಯ, ದೇಶ ಇತ್ಯಾದಿಗಳ ಗಡಿಗಳೇ ಕರಗಿ ಒಂದು ಹೊಸ ಜಗತ್ತು ನಿರ್ಮಾಣವಾಗುತ್ತಿದೆ. ಅಂತಹ ಒಂದು ಹೊಸ ಜಗತ್ತಿನಲ್ಲೂ ಮೈಬಣ್ಣ ಮತ್ತು ಸಾಮಾಜಿಕ ಸ್ಥಾನಮಾನ ಕೂಡ ಸಂಘರ್ಷಕ್ಕೆ ಕಾರಣವಾಗಬಲ್ಲದು ಎಂಬುದಕ್ಕೆ ಶಿಲ್ಪಾಶೆಟ್ಟಿ ಪ್ರಸಂಗ ಒಂದು ಉದಾಹರಣೆ.

ತಮಗಿಂತಲೂ ಕಪ್ಪಗಿರುವ ಶಿಲ್ಪಾ ತಮ್ಮ ಅಡಿಯಾಳಾಗಿರಬೇಕು ಎಂದು ಬಿಳಿಯರು ಇಚ್ಛಿಸಿರಬಹುದು. ಆದರೆ ತನಗಿಂತಲೂ ಕೆಳವರ್ಗದಿಂದ ಬಂದ ಬಿಳಿಯರಿಗೆ ನಾನೇಕೆ ಗೊಡ್ಡು ಸಲಾಮು ಹಾಕಬೇಕೆಂದು ಶಿಲ್ಪಾಶೆಟ್ಟಿ ಅಂದುಕೊಂಡಿರಬಹುದು. ಆದ್ದರಿಂದಲೇ ಜೇಡ್ ಗೂಡಿ ಎಂಬಾಕೆ ಶಿಲ್ಪಾಳಿಗೆ "ನೀನು ನಿನ್ನ ಗುಡಿಸಲಿಗೆ ತೊಲಗು" ಎಂದರೆ ಶಿಲ್ಪಾ "ನೀನು ಮೊದಲು ಇಂಗ್ಲಿಷ್ ಅನ್ನು ಸರಿಯಾಗಿ ಮಾತನಾಡಲು ಕಲಿ" ಎಂದಳು! ಕೆಳವರ್ಗದಿಂದ ಬಂದ ಜೇಡ್ ಗೂಡಿಗೆ ತನ್ನ ಮೈಬಣ್ಣದ ಅಹಂಕಾರವಾದರೆ, ಆಕೆಗಿಂತಲೂ ಸಾಮಾಜಿಕವಾಗಿ ಉನ್ನತ ಸ್ಥಿತಿಯಿಂದ ಬಂದ ಶಿಲ್ಪಾಗೆ ತಾನು ಬಲ್ಲ ಇಂಗ್ಲಿಷ್ ಬಗ್ಗೆ, ತನ್ನ ಸ್ಥಾನಮಾನದ ಬಗ್ಗೆ ಹೆಮ್ಮೆ!

'ಬಿಗ್ ಬ್ರದರ್' ಕಾರ್ಯಕ್ರಮದಲ್ಲಿ ಶಿಲ್ಪಾಶೆಟ್ಟಿ ಒಮ್ಮೆ "ನಾನು ಭಾರತವನ್ನು ಪ್ರತಿನಿಧಿಸುತ್ತಿದ್ದೇನೆ" ಎಂದಳು. ಹಾಗೆ ಪ್ರತಿನಿಧಿಸುವ ಹಕ್ಕನ್ನು ಆಕೆಗೆ ಯಾರೂ ನೀಡಿಲ್ಲದಿದ್ದರೂ ಕೂಡ.

ಹಾಗೊಮ್ಮೆ ಆಕೆ ಭಾರತವನ್ನು ಪ್ರತಿನಿಧಿಸಿದಳು ಎಂದೇ ಭಾವಿಸಿದರೂ, ಅವಳು ಪ್ರತಿನಿಧಿಸಿದ ಭಾರತದಲ್ಲಿ ಜೇಡ ಗೂಡಿನಂತೆ ವರ್ಣಭೇದ ಮಾಡುವವರೂ ಶಿಲ್ಪಾಶೆಟ್ಟಿಯಂತೆ ವರ್ಗಭೇದ ಮಾಡುವವವೂ ಇದ್ದಾರೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು.

ಜಾತಿ ಭೇದಗಳ ವಿರುದ್ಧ ಸೆಟೆದೆದ್ದು ನಿಂತ ಬಸವಣ್ಣ, ಅದೇ ಜಾತಿ ವ್ಯವಸ್ಥೆಯನ್ನು ಖಂಡಿಸಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ಅಂಬೇಡ್ಕರ್, ಇವತ್ತು ಹಿಂದೂ ಸಮಾಜೋತ್ಸವಗಳಲ್ಲಿ ಬ್ರಾಹ್ಮಣೇತರ ಸ್ವಾಮಿಗಳನ್ನು ಕಡೆಗಣಿಸಿ ಅವಮಾನಿಸುವ ಪ್ರಸಂಗಗಳಲ್ಲೂ ಇದೇ ವರ್ಣ, ವರ್ಗ ಭೇದ ಅಡಗಿದೆ ಎಂಬುದನ್ನು ಎಲ್ಲರೂ ಅರಿಯಬೇಕಿದೆ.

ಶಿಲ್ಪಾಶೆಟ್ಟಿ ನಮ್ಮ ದೇಶದ ಪ್ರತಿನಿಧಿಯಲ್ಲ. ಆದರೆ ಇವತ್ತು ನಮ್ಮ ದೇಶದಲ್ಲಿ ನಮ್ಮ ಸಮಾಜದಲ್ಲಿ ಏನಾಗುತ್ತಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ಆಕೆ ಒಂದು ನಿದರ್ಶನ ಆಗಿದ್ದಾಳೆ. ವರ್ಗ, ವರ್ಣ, ಅಸ್ಪೃಶ್ಯ ಜಾತಿ, ಧರ್ಮ ಎಂದೆಲ್ಲಾ ಭೇದ ಮಾಡುವ ನಾವು ಇವೆಲ್ಲದರ ಬಗ್ಗೆ ಯೋಚಿಸಬೇಕಿದೆ. ಶಿಲ್ಪಾಶೆಟ್ಟಿಯ ಹೊರತಾಗಿಯೂ....


-ಸಾವಂತ್ರಿ

ಹೈಕುಗಳು

ಮುಂಜಾನೆಯ ಬೋಳಿ ಸೂರ್ಯನ ಕಂಡಾಗ
ಪುಟ್ಟ ಮಗುವಿನ ನೆನಪು
ಸಂಜೆ ಸೂರ್ಯ ಸ್ಮಶಾನ.

ಬೆಂಗಳೂರಿನ ಅಳಿದುಳಿದ
ಗರಿಕೆ ಹುಲ್ಲಮೇಲಿನ ಇಬ್ಬನಿ
ನೊಂದವರ ಕಣ್ಣೀರು.

ಇಷ್ಟು ವರ್ಷ ಅನ್ಯೋನ್ಯವಾಗಿದ್ದೆವು
ಅರ್ಥ ಮಾಡಿಕೊಳ್ಳಲು ಆರಂಭಿಸಿದ ಕ್ಷಣದಿಂದ
ಜಗಳ ಶುರುವಾಗಿದೆ.



ಮನೆ ಬಿಟ್ಟು ಹೊರಟಿವೆ ಇರುವೆಗಳು
ಬೇಗ ಸಕ್ಕರೆ ತರಬೇಕು.

ಹೊಸ ಮನೆಯ ಬಾಗಿಲು ತೆರೆದಾಗ
ಕಾಡಲ್ಲಿ ಮರ ಬಿದ್ದ ಸದ್ದು.

ಎಲ್ಲ ಚಮತ್ಕಾರಗಳನ್ನು
ಮನದಲ್ಲಿಟ್ಟುಕೊಂಡಿದ್ದಾರೆ
ಹೃದಯ ಮಾಯವಾಗಿದೆ.

ಡಾ. ಸಿ. ರವೀಂದ್ರನಾಥ್

ಇನ್ನು ಭಯವಿಲ್ಲ: ಭಾರತ ಪ್ರಕಾಶಿಸುತ್ತಿದೆ!

ಎಲ್ಲಿ ಮಲಗ್ತಾರೆ?

ಫೆಬ್ರವರಿ 14, ಪ್ರೇಮಿಗಳ ದಿನ. ಸಂಘ ಪರಿವಾರದ ತೂವ್ರ ಹುಡುಗರಿಗೆ ಇನ್ನಿಲ್ಲದ ಸಂಭ್ರಮ.... ಇದು ಭಾರತೀಯ ಸಂಸ್ಕೃತಿ ಅಲ್ಲ ಅನ್ನೋ ನೆಪದಲ್ಲಿ ಈಗಾಗಲೇ ಗುರುತು ಮಾಡಿಕೊಂಡಿರುವವರ ಮೇಲೆ, ತಮ್ಮ ಮಾತಿಗೆ ಬಗ್ಗದ ಅಂಗಡಿಗಳ ಮೇಲೆ ಹಲ್ಲೆ ನಡೆಸಿ ದಾಂಧಲೆ ಮಾಡೋಕೆ ಸುಸಂದರ್ಭ ಅಂತ! ಮಠಾಧಿಪತಿಗಳು ತಮ್ಮ ಹುಟ್ಟುಹಬ್ಬಕ್ಕೆ ಕೇಕ್ ಕಟ್ ಮಾಡೋದು, ಭಾರತೀಯ ಜನತಾಪಕ್ಷದ ಶಾಸಕನೇ ತನ್ನ ಹುಟ್ಟುಹಬ್ಬಕ್ಕೆ ತುಂಡು ಲಂಗದ ಹುಡುಗಿಯರಿಂದ ನಂಗಾನಾಚ್ ಮಾಡಿ ಸೋದು ಭಾರತೀಯ ಸಂಸ್ಕೃತೀನಾ ಅಂತ ಕೆಲವರು ಪ್ರಶ್ನಿಸಬಹುದು. ಹೌದುರೀ ಅದು ಸಂಘ ಪರಿವಾರದ ಸಂಸ್ಕೃತೀನೆ, ಅವರೇ ತಾನೇ ಅದರ ಮೇಲ್ವಿಚಾರಣೆ ವಹಿಸಿದ್ದೋರು!

ಸಂಘ ಪರಿವಾರದವರು ಈ ರೀತಿ ಸಂಭ್ರಮದಲ್ಲಿದ್ದರೆ ಜಾತ್ಯತೀತ ಅಂತ ಹೆಸರಿರುವ ಜನತಾದಳದ ಪಡ್ಡೆ ಹೈಕಳಿಗೆ ಕುತೂಹಲವೋ ಕುತೂಹಲವಂತೆ. ಯಾಕೆಂದರೆ ನಮ್ಮ ಯುವ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಏನು ಮಾಡಿದರು....

ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ಬಂದಿತು. ಹೋಗಿ ಲಿಂಗಾಯತರ ಮನೆಯಲ್ಲಿ ಮಲಗಿದರು. ಯಾವ್ನೋನೋ ತಲೆ ಕೆಟ್ಟವನು ಹಿಂಗೆ ಮೇಲ್ಜಾತಿಯವರ ಮನೇಲಿ ಮಲಗೋದು ಬಿಟ್ಟು ದಲಿತರ ಕೇರಿಗೆ ಹೋಗಿ ಪ್ರಯೋಗ ಮಾಡಲಿ ಅಂದ. ಅದಕೂ ಸೈ ಅಂದ ಯುವ ಮುಖ್ಯಮಂತ್ರಿ ದಲಿತರ ಮನೇಲೇ ಮಲಗಿದರು.

ವಿಶ್ವ ಅಂಗವಿಕಲರ ದಿನ ಬಂದಿತು. ಯುವ ಮುಖ್ಯಮಂತ್ರಿಗಳು ಘೋಷಿಸಿದರು–ನಾನು ಅಂಗವಿಕಲರ ಮನೆಯಲ್ಲಿ ವಾಸ್ತವ್ಯ ಹೂಡುತ್ತೇನೆ. ಹಾಗೇ ನಡೆದುಕೊಂಡರು.

ನಂತರ ವಿಶ್ವ ಏಡ್ಸ್ ದಿನ ಬಂದಿತು. ಯುವ ಮುಖ್ಯಮಂತ್ರಿಗಳು ಅಂತಹದ್ದೇ ಮಾತನ್ನು ಹೇಳಿದರು–ಏಡ್ಸ್ ಪೀಡಿತರ ಮನೇಲೇ ತಂಗಿ ವಿಶ್ವಾದ್ಯಂತ ಸುದ್ದಿ ಮಾಡಿದರು.

'ವಿಶ್ವ ವಿಧವೆಯರ ದಿನ', 'ವಿಶ್ವಕನ್ನಿಕೆಯ ದಿನ' ಅಂತೆಲ್ಲ ಇದ್ದಿದ್ದರೆ..... ಅವಿಲ್ಲ ಈಗೇಕೆ ಅವೆಲ್ಲ ಬಿಡಿ.

ಈಗ ಜಾತ್ಯತೀತ ಜನತಾದಳದ ಪಡ್ಡೆಹೈಕಳ ಕುತೂಹಲ ಕೆರಳಿಸಿರುವುದು ಏನಪ್ಪ ಅಂದರೆ... 'ಪ್ರೇಮಿಗಳ ದಿವಸ' ಕುಮಾರಣ್ಣ ಎಲ್ಲಿ ಮಲಗ್ತಾರೆ ಅನ್ನೋದಂತೆ!

ಅಲ್ಲರೀ ಇದಕ್ಕೆ ಅನಿತಕ್ಕ ಅವಕಾಶ ನೀಡ್ತಾರೇನ್ರಿ.... ಏನು ಏನಂದಿರಿ... ಯಾರಾದರೂ ಕೋಳಿ ಕೇಳಿ ಮಸಾಲೆ ಅರೀತಾರಾ.... ಇಂತಹವನ್ನೆಲ್ಲ ಯಾವ ಗಂಡನಾದರೂ ಹೆಂಡತಿಗೆ ಹೇಳಿ ಮಾಡ್ತಾನಾ ಅಂದಿರಾ.... ಹೋಗಲಿಬಿಡಿ ದೊಡ್ಡವರ ಮನೆ ಸುದ್ದಿ....

ಇನ್ನು ಭಯವಿಲ್ಲ!

ಜನರು ನೆಮ್ಮದಿಯಿಂದ ಇರಬಹುದು.

ಇನ್ನು ಭಯವಿಲ್ಲ!

ಐಶ್ವರ್ಯ ರೈ ಅಭಿಷೇಕ್ ಬಚ್ಚನ್ ವಿವಾಹ ಖಚಿತ!

ಅವರ ವಿವಾಹಕ್ಕಿದ್ದ ಅಡಚಣೆಗಳು ದೂರ ಆಗಿವೆ. ಜ್ಯೋತಿಷಿಗಳು ಗ್ರಹಗಳನ್ನು ಒಪ್ಪಿಸಿದ್ದಾರೆ. ಮುನಿಸಿಕೊಂಡಿದ್ದ ಗ್ರಹಗಳಿಗೆ ಕಾಶಿ ವಿಶ್ವನಾಥ ಪೂಜೆ ಮಾಡಿಸಿಕೊಂಡ ನಂತರ ಅವುಗಳಿಗೆ ತಿಳಿಹೇಳಿ ಒಪ್ಪಿಸಿದ್ದಾನೆ. ವಿವಾಹ ನಿಶ್ಚಿತಾರ್ಥ ನಡೆದ ಹಿಂದಿನ ದಿನಗಳ ಕಸರತ್ತನ್ನು; ಆ ದಿನ ಭಾವಿ ವಧುವರರು ಧರಿಸಿದ್ದ ಬಟ್ಟೆ, ಉಂಡ ಊಟ ಇವುಗಳ ಪೂರ್ಣ ವರದಿಯನ್ನು; ಆನಂತರ ಅವರು ಯಾರ ಮನೆಯಲ್ಲಿ ತಂಗಿದ್ದರು ಎಲ್ಲೆಲ್ಲಿಗೆ ಹೋಗಿದ್ದರು, ಹೋಗಲಿದ್ದಾರೆ ಎಂಬುದನ್ನೆಲ್ಲಾ ವಿವರವಾಗಿ ಬರೆದು ನಮ್ಮ ಪತ್ರಿಕೆಗಳು ತಮ್ಮ ಘನತೆ ಕಾಪಾಡಿಕೊಂಡಿವೆ!

* * * * * *

ಶಿಲ್ಪಾ ಶೆಟ್ಟಿ 'ಬಿಗ್ ಬ್ರದರ್' ಷೋನಲ್ಲಿ ಜಯಶೀಲಳಾದಳು! ಭಾರತಕ್ಕೆ ಕೀರ್ತಿ ತಂದಳು! ಇನ್ನು ಭಯವಿಲ್ಲ!

ಹೌದು, ಕೆಲವೇ ದಿವಸಗಳ ಹಿಂದೆ ಇಂಗ್ಲಿಷ್ ಬರದ ನಾಯಿ ಅಂದೆಲ್ಲ ಹೀಯಾಳಿಸಿ ಜನಾಂಗ ನಿಂದನೆ ಮಾಡಿದ್ದರು ಈ ಷೋನಲ್ಲಿ ಅಂತ ದೂರಿದ್ದಳು ಇದೇ ಶೆಟ್ಟಿ. ಕಣ್ಣೀರಿಟ್ಟಿದ್ದಳು ಕೂಡ. ಇದನ್ನು ಟಿವಿಯಲ್ಲಿ ಕಂಡ ಭಾರತೀಯರ ರಕ್ತ ಕುದಿಯಿತು. ಆಕೆ ಹಣದ ಆಸೆಗೇ ಇದರಲ್ಲಿ ಭಾಗವಹಿಸಿರಬಹುದು. ಹೀಗೆ ಅಪಮಾನಕ್ಕೆ



ಗುರಿ ಮಾಡ್ತಾರೆ ಎಂದು ತಿಳಿದೇ ಆಕೆ ಹೋಗಿರಬಹುದು. ಆದರೇನಂತೆ ಭಾರತೀಯರ ಮರ್ಯಾದೆ ಹರಾಜಾಗಿತ್ತು ಅಲ್ಲಿ! ಪ್ರತಿಭಟಿಸಿದರು ಭಾರತ ಪ್ರೇಮಿಗಳು. ಆದರೆ ನಿಜಕ್ಕೂ ಅಲ್ಲಿ ಜನಾಂಗನಿಂದನೆ ಆಗೇ ಇರಲಿಲ್ಲವಂತೆ! ಶಿಲ್ಪಾಶೆಟ್ಟಿಯೇ ಅದನ್ನು ಹೇಳಿದ್ದಾಳೆ! ಅದು ತಪ್ಪು ತಿಳಿವಳಿಕೆಯಂತೆ! ಅದಕ್ಕಾಗಿ ಕ್ಷಮೆ ಯಾಚಿಸಿದಳು ಈ ಬಾಲಿವುಡ್ ತಾರೆ!

ಏನೇ ಆಗಲಿ 'ಬಿಗ್ ಬ್ರದರ್' ಷೋನಲ್ಲಿ ಜಯಶೀಲಳಾಗಿ ಭಾರತದ ಕೀರ್ತಿಯನ್ನು ಪ್ರಪಂಚದ ಎಲ್ಲೆಡೆ ಹರಡಿದಳು ಈ ಶೆಟ್ಟಿ!

ಭಾರತದಲ್ಲಿಯೇ ಅಸ್ಪೃಶ್ಯರನ್ನು ನಾಯಿಗಿಂತ ಕೀಳಾಗಿ ನಡೆಸಿಕೊಳ್ಳಲಾಗುತ್ತಿರಬಹುದು. ಆದರೆ ಇದು ನಮ್ಮ ಸ್ವಂತ ಮನೆಯ ವಿಷಯ. ಇದನ್ನು ಇಲ್ಲೆ ಸರಿಪಡಿಸಿಕೊಳ್ಳೋಣ. ಗಲ್ಫ್ ದೇಶಗಳಲ್ಲಿ ಭಾರತೀಯ ಆಯಾಗಳನ್ನು ಬರ್ಬರವಾಗಿ ನಡೆಸಿಕೊಳ್ಳಲಾಗುತ್ತಿದೆ; ಲೈಂಗಿಕ ಕಿರುಕುಳ ನೀಡಲಾಗುತ್ತಿದೆಯಲ್ಲಾ ಅಂತೀರಾ... ರೀ ಬುದ್ಧಿ ಇದೆಯೇನ್ರಿ... ಇದಕ್ಕೆಲ್ಲ ಪ್ರತಿಭಟಿಸೋಕೆ ಅವರೆಲ್ಲ ಏನು ಶಿಲ್ಪಾ ಶೆಟ್ಟಿ ಏನ್ರಿ.... ಅದಕ್ಕೆ ನಮ್ಮ ಮಾಧ್ಯಮದವರು ಶಿಲ್ಪಾಶೆಟ್ಟಿ ಬಗ್ಗೆ ಬರೀತಾರೆ, ಅವರನ್ನೆಲ್ಲ ಮರೀತಾರೆ!

* * * * * *

ಅಣಕ

ಇನ್ನೊಂದು ಸಂತಸದ ಸುದ್ದಿ–ವೆಸ್ಟ್‌ಇಂಡೀಸ್ ವಿರುದ್ಧ ಭಾರತದ ಜಯಭೇರಿ! ಅಷ್ಟು ಮಾತ್ರ ಅಲ್ಲ ಹೊಸ ಅವತಾರದಲ್ಲಿ ತೆಂಡೂಲ್ಕರ್ ಮಿಂಚುತ್ತಿದ್ದಾನೆ!

ಇನ್ನೇನು ಬೇಕು, ತಣ್ಣಗಾಗಲಿಲ್ಲವೆ ಭಾರತೀಯನ ಹೊಟ್ಟೆ!

'ವಿಶ್ವಕಪ್' ಭಾರತೀಯರ ಮಡಲಿಗೆ ಎಂಬುದು ಖಾತರಿ!

ನಾವು–ಭಾರತೀಯರು ಮಾಡಬೇಕಾದುದು ಇಷ್ಟೆ. ಮಾಧ್ಯಮಗಳ ಜೊತೆಗೂಡಿ ಕ್ರಿಕೆಟ್ ತಂಡಕ್ಕೆ ಬೆಂಬಲ ನೀಡುವುದು; ದೇವಾಲಯಗಳಲ್ಲಿ – ಸಾಧ್ಯವಾದರೆ ಕ್ರಿಕೆಟ್ ಪಿಚ್ ಬಳಿ– ಹೋಮ ಹವನ ಮಾಡುವುದು! ಅಲ್ಲಿಗೆ ನಮಗೆ ನಿಶ್ಚಿಂತೆ!

* * * * * *

ನಮ್ಮೆಲ್ಲರ ಒಳಿತನ್ನೇ ಬಯಸಿ ಧಾರ್ಮಿಕ ಕಾರ್ಯಗಳು ಸತತವಾಗಿ ನಡೆಯುತ್ತಿವೆ.

ಧರ್ಮಸ್ಥಳದಲ್ಲಿ ಬಾಹುಬಲಿಗೆ ಮಹಾಮಸ್ತಕಾಭಿಷೇಕ!

ಯಾತಕ್ಕಾಗಿ?

ಜನರ ಒಳಿತಿಗಾಗಿ!

ತಿರುಮಕೂಡಲು ನರಸೀಪುರದಲ್ಲಿ ಹಲವು ಮಠಾಧೀಶರ ಉಪಸ್ಥಿತಿಯಲ್ಲಿ ಕುಂಭಮೇಳ!

ಯಾತಕ್ಕಾಗಿ?

ವಿಶ್ವ ಕಲ್ಯಾಣಕ್ಕಾಗಿ!

ಕುಂಭಮೇಳಕ್ಕೆ ಯಾವ ಪ್ರತಿಷ್ಠಿತ ರಾಜಕಾರಣಿಯೂ ಬರಲಿಲ್ಲವಂತೆ. ಅಲ್ಲಿಗೆ ಹೋದರೆ ಸಲ್ಲದ ಬೇಡಿಕೆಗಳನ್ನು ಮುಂದಿಟ್ಟು ಮಠಾಧೀಶರು ತಮ್ಮನ್ನು ರಾಜಕೀಯ ಬಿಕ್ಕಟ್ಟಿಗೆ ಸಿಕ್ಕಿಸಬಹುದು ಎಂಬ ಭಯವೋ ಏನೋ. ಪ್ರಾಯಶಃ ಸುತ್ತೂರು ಶ್ರೀಗಳು ಮೊಟ್ಟೆ ನೀಡಬೇಡಿ ಎಂದು ಮುಖ್ಯಮಂತ್ರಿಗಳಿಗೆ ಬಹಿರಂಗ ಸಭೆಯಲ್ಲಿಯೇ ಹೇಳಿ ಬಡಮಕ್ಕಳ ಪೌಷ್ಟಿಕಾಂಶ ಕಿತ್ತುಕೊಳ್ಳುವ ಕೈಂಕರ್ಯ ಕೈಗೊಂಡುದಲ್ಲದೆ, ಮುಖ್ಯಮಂತ್ರಿಗಳ ಬಾಯಿಂದ 'ಮೊಟ್ಟೆ ನೀಡುವುದಿಲ್ಲ' ಎಂದು ಹೇಳಿಸಿ, ವಿಚಾರವಾದಿಗಳ ಬಾಯಿಂದ ಮಠಾಧೀಶರ ಆದೇಶಕ್ಕೆ ಮಣಿದ ಮುಖ್ಯಮಂತ್ರಿ ಅಂತ ಉಗಿಸಿಕೊಂಡದ್ದು ನೆನಪಾಗಿರಬಹುದು. ಅದು ಏನಾದರೂ ಆಗಲಿ. ರಾಜಕಾರಣಿಗಳು ಬಾರದಿದ್ದರೇನಂತೆ. ಹಲವು ಮಠಾಧೀಶರು ಆಶೀರ್ವಚನ ನೀಡಿದರಲ್ಲಾ... ಅದೇ ಭಾರತೀಯರ ಪುಣ್ಯ!

* * * * * *

ಬಹುಜನರು ಬಡತನದಿಂದ ಸಂಕಷ್ಟಕ್ಕೆ ಗುರಿಯಾಗಬಹುದು. ಆತಂಕಬೇಡಿ. ಹಾಗಾದರೆ ನೀವು ದೇವರಿಗೆ ಪ್ರಿಯರಾಗಿದ್ದೀರೆಂದು ಅದರ ಅರ್ಥ! ದೇವರು ಬಡವರನ್ನು ತಾನೆ ಪ್ರೀತಿಸುವುದು!

ಸಾಯಲು ದಿಗಿಲು ಬೇಡ! ಸಾವು ಎಂದರೆ ಇಹಲೋಕದ ಕಷ್ಟಗಳಿಂದ ಮುಕ್ತಿ ಅಲ್ಲವೆ!

ತರವಲ್ಲ ತಗೀರಿ!

ಶಾಸನಸಭೆ ಅಧಿವೇಶನ ನಡೆಯುತ್ತಿದೆ.

25 ಕ್ಕೆ ಪ್ರಾರಂಭ. ಮಧ್ಯ ರಜೆ. ಮತ್ತೆ ಫೆಬ್ರವರಿ ... ರಂದು ಪ್ರಾರಂಭ.

ಇದರಲ್ಲೇನು ವಿಶೇಷ ಅಂತೀರಾ?

ಕ್ಯಾಲೆಂಡರ್ ನೋಡಿ. ಮತ್ತೆ ಪ್ರಾರ... ಆಗಬೇಕಾದದ್ದು 29 ಕ್ಕೆ ಅಲ್ಲವಾ?

30 ರಂದು ಮೊಹರಂ ಇರಲಿಲ್ಲ... ಅದಕ್ಕೇ ಈ ವ್ಯವಸ್ಥೆ ಅದಕ್ಕೇನು ನಿಮ್ಮ ಕಿರಿ...

ಹೌದು, ಹಾಗಾದರೆ 31 ರಂದು ಪ್ರಾರ... ಆಗಬೇಕಿತ್ತು ಅಲ್ಲವಾ?

ನಿಜ, ಹಾಗೆ ಆಗಲಿಲ್ಲ. ಒಂದನೇ ತಾರೀ... ಪುನರಾರಂಭ ಆಯಿತು!

ಯಾಕೆ, ಆ ದಿನ ಅಶುಭವಾಗಿತ್ತೆ? ಯಾರಾದ... ಜ್ಯೋತಿಷಿ ಆ ದಿನ ಬೇಡ ಎಂದು ಸೂಚಿಸಿದನೆ?

ಹಾಗೆ ಸೂಚಿಸಿದ್ದು ಜ್ಯೋತಿಷಿಗಳಲ್ಲ, ಅರ್ಥ... ಪಂಡಿತರು!

ಯಾರು ಈ ಪಂಡಿತರು?

ಶಾಸಕ ಮಹಾಶಯರು!

ಈ ಮಹಾಶಯರುಗಳು ಪ್ರಯಾಣಭ... ಪಡೆಯಬೇಕಾದರೆ ಅಧಿವೇಶನ ಮುಗಿದ ದಿನದ... ಮರುಪ್ರಾರಂಭ ಆಗುವ ದಿನದ ಅವಧಿ ಕನಿಷ್ಠ ... ದಿನಗಳು ಆಗಿರಬೇಕಂತೆ! ಜನರ ಹಿತಚಿಂತನೆಯ... ಮಾಡಲು ಸೇರಿದ ಈ ಶಾಸಕ ಮಹಾಶಯರು... ಒತ್ತಡ ಹೇರಿ ಏಳು ದಿನಗಳು ಇರುವ... ನೋಡಿಕೊಂಡರಂತೆ!

ದೂರದ ಊರಿನವರೆಲ್ಲ ಹೆಚ್ಚು ಕಡಿ... ಬೆಂಗಳೂರಿನಲ್ಲೇ ಠಿಕಾಣಿ ಹೂಡಿರುತ್ತಾರೆ. ... ಹತ್ತಿರದವರಿಗೆ ಏನು ಮಹಾ ಭತ್ಯೆ ಸಿಗುತ್ತೆ ಅನ್ನಬ... ನಮ್ಮ ಶಾಸಕರು ಎಲ್ಲೇ ವಾಸವಾಗಿದ್ದರೂ ತಮ್ಮ ... ಸ್ಥಳದಲ್ಲೇ ಇದ್ದೇವೆಂದು ತಿಳಿಸಿ ಭತ್ಯೆ ಪಡೆಯುವ... ಲಾಗಾಯ್ತಿನಿಂದಲೂ ಬಂದಿರುವ ಸಂಪ್ರದಾಯ. ಹಾ... ಈ ಗಂಟು ಸ್ವಲ್ಪ ಬಲವಾಗೇ ಇರುತ್ತೇ ಅನ್ನಿ. ಆದ... ಕೆಲವರಿಗೆ ಇನ್ನೂ ಅನುಮಾನ. ಲಕ್ಷ ಕೋಟಿಗಳ... ವ್ಯವಹರಿಸೋ ಶಾಸಕರುಗಳು ಈ ಜುಜುಬಿ ಸಾವಿರ... ರೂಪಾಯಿಗಳಿಗೆಲ್ಲ ಬಾಯಿಬಿಡ್ತಾರಾ ಅನ್ನೋದು. ಸ್ವಾಮಿ ಹನಿಕೂಡಿದರೆ ಹಳ್ಳ.....ಬಿಟ್ಟಬರುತ್ತೆ... ಬರ... ಯಾರನ್ನ ಕೆಡುಸ್ತು... ಏನು ಅಂದಿರಿ.... ಜನರನ್ನು ಕೆಡ... ಅಂದಿರಾ....

ನ್ಯಾಯ ದೊರಕದಿರಲಿ!

ಕಾವೇರಿ ನದಿ ವಿವಾದದ ಅಂತಿಮ ತೀರ್ಪು ... ಐದರಂದು ಬರಲಿದೆ.

ತೀರ್ಪು ಕರ್ನಾಟಕಕ್ಕೆ ನ್ಯಾಯ ದೊರಕಿಸಬಹು...

ಹಾಗಾಗಲಿ ಎಂಬುದು ಬಹು ಜನರ ಆಶಯ...

ಕೆಲವರಿಗೆ ಇದು ಬೇಕಿಲ್ಲ.

ಯಾಕೆ ಬೇಕಿಲ್ಲ?

ಹೀಗಾದರೆ ಚಳವಳಿಗೆ ಕಾರಣವೇ ಇರುವುದಿಲ್ಲ ಎಂಬುದು ಅವರ ಕೊರಗಂತೆ!

ಇವರಿಗೆ ನೀರು ಮುಖ್ಯ ಅಲ್ಲ; ಚಳವಳಿ ಮು...

–ಎಚ್.ಎಲ್. ಕೇಶವಮೂ...

ಬಂಟಿ ಸಿಂಗ್ ನಮ್ಮೆಲ್ಲರಿಗೆ ಸ್ಫೂರ್ತಿ

ಬಂಟ ಸಿಂಗರ ಬಗೆಗಿನ ಲೇಖನ (24.1.07) ಅನ್ಯಾಯ, ಅಕ್ರಮ, ಅವ್ಯವಹಾರ, ಭ್ರಷ್ಟಾಚಾರ ಮತ್ತು ದೌರ್ಜನ್ಯದ ವಿರುದ್ಧ ದನಿಯೆತ್ತುವ ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾಗಿದೆ. ಕಳೆದ ಎರಡೂಕಾಲು ವರ್ಷಗಳಿಂದ ನಮ್ಮೂರಿನ (ಸೊಂಡೇಕೊಪ್ಪ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರವನ್ನು ಬಯಲಿಗೆಳೆದು ಪ್ರತಿಭಟಿಸುತ್ತಿರುವ ನನಗಂತೂ ಬಂಟಸಿಂಗರ ಬಗ್ಗೆ ಗೌರವ ಮೂಡುತ್ತಿದೆ. ನಮ್ಮೂರಿನ ಪಟ್ಟಭದ್ರರು ನಡೆಸಿರುವ ಅವ್ಯವಹಾರವನ್ನು ಬಯಲಿಗೆಳೆದು ಪ್ರತಿಭಟಿಸಿದ್ದಕ್ಕೆ ಇದುವರೆಗೂ ನಮಗೆ (ಜನ ಜಾಗೃತಿ ವೇದಿಕೆಯ ಪದಾಧಿಕಾರಿಗಳಿಗೆ) ದೊರೆತಿರುವ ಬಹುಮಾನ, ಒಮ್ಮೆ ಹಲ್ಲೆ (ನೆಲಮಂಗಲ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 829/05), ಒಂದು ಸಿವಿಲ್ ಮೊಕದ್ದಮೆ ಮತ್ತೊಂದು ಕ್ರಿಮಿನಲ್ (ಮಾನನಷ್ಟ) ಮೊಕದ್ದಮೆ.

ಬಂಟಸಿಂಗರ ಧೈರ್ಯ, ಛಲ ಮತ್ತು ತಾಳ್ಮೆ, ಅನ್ಯಾಯ, ಅಕ್ರಮಗಳ ವಿರುದ್ಧ ಪ್ರತಿಭಟಿಸುವವರಿಗೆ ಅತ್ಯವಶ್ಯಕ. ಬಂಟಸಿಂಗರ ಬಗ್ಗೆ ವರದಿ ಪ್ರಕಟಿಸಿದ ತಮಗೆ ಧನ್ಯವಾದಗಳು. ದಮನಿತರ ಪರವಾದ 'ಲಂಕೇಶ್' ದನಿ ಚಿರಾಯುವಾಗಲಿ.

–ಎಸ್.ಎಸ್. ವೆಂಕಟೇಶ್,
ಅಧ್ಯಕ್ಷ, ಜನಜಾಗೃತಿ ವೇದಿಕೆ
ಸೊಂಡೇಕೊಪ್ಪ ಗ್ರಾಮ

ಜನವರಿ 31 ರ ಸಂಚಿಕೆಯಲ್ಲಿ ಚಂದ್ರಶೇಖರ ತೋರಣಘಟ್ಟರವರು ದಾವಣಗೆರೆ ಕಮ್ಯುನಿಸ್ಟ್ ಪಕ್ಷದ ಎಚ್.ಕೆ. ರಾಮಚಂದ್ರಪ್ಪನ ಲೂಟಿ ಬಗ್ಗೆ ಬರೆದಿರುವುದು ನೂರಕ್ಕೆ ನೂರು ಸತ್ಯವಾಗಿದೆ. ಹಿಂದೆ ತಾವು ರಾಮಚಂದ್ರಪ್ಪ ಶಿವಣ್ಣ ಮತ್ತು ಮುಲ್ಲಾ ಹುಬ್ಬಳ್ಳಿಯಲ್ಲಿ ಬಡ ಕಾರ್ಮಿಕರಿಂದ ಹಣ ಲೂಟಿ ಮಾಡಿದ ಬಗ್ಗೆ ಬರೆದಿದ್ದೀರಿ. ಜೊತೆಗೆ ರಾಮಚಂದ್ರಪ್ಪ ಶಾಮನೂರು ಶಿವಶಂಕರಪ್ಪನಿಗೆ ಬೆಳ್ಳಿ ಕಿರೀಟ ತೊಡಿಸಿದ ಬಗ್ಗೆ ವರದಿ ಮಾಡಿದ್ದೀರಿ ಕೂಡ. ಆತನ ದಪ್ಪ ಚರ್ಮಕ್ಕೆ ಯಾವುದೂ ನಾಟುತ್ತಿರಲ್ಲ, ಆದರೆ ಈಗ ಪಕ್ಷದ ಲೆನಿನ್ ಶಾಲೆಗೆ ತನ್ನ ಕುಟುಂಬದವರನ್ನೇ ಟ್ರಸ್ಟಿಗಳಾಗಿ ಮಾಡಿಕೊಂಡು ತನ್ನ ಆಸ್ತಿ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿಸಮೇತ ಚಂದ್ರಶೇಖರ್ ತೋರಣಘಟ್ಟ ಲೇಖನ ಬರೆದಿದ್ದಾರೆ. ಇಂತಹ ಲೇಖನ ಬಂದ ಮೇಲೂ ರಾಮಚಂದ್ರಪ್ಪನನ್ನು ಭಾರತ ಕಮ್ಯುನಿಸ್ಟ್ ಪಕ್ಷ ಉಚ್ಚಾಟಿಸಿಲ್ಲ, ಇದರಿಂದಾಗಿ ಈ ಪಕ್ಷದಲ್ಲಿರುವ ಪ್ರಾಮಾಣಿಕ ನಾಯಕರ ನೈತಿಕತೆಯನ್ನೇ ಪ್ರಶ್ನಿಸುವಂತಾಗಿದೆ.

–ಇಸ್ಮಾಯಿಲ್, ಬೆಂಗಳೂರು

'ಕಂಡಹಾಗೆ' ಸಂಪಾದಕೀಯದಲ್ಲಿ ಬಡಾ ಚೆಡ್ಡಿ ಯಡ್ಡಿ ಮತ್ತು ಚೋಟಾ ಚೆಡ್ಡಿ ಕುಮಾರ ಸೇರಿ ರೈತರ ಸಾಲಮನ್ನಾ, ಕಡಿಮೆ ಬಡ್ಡಿ ಎಂಬ ಕಪಟ ನಾಟಕವಾಡುತ್ತಿರುವುದು ಚೆನ್ನಾಗಿ ಮೂಡಿ ಬಂದಿದೆ. ರೈತರ ಕಣ್ಮಣಿ ಎಂಬಂತೆ ಪತ್ರಿಕೆಗಳ ಜಾಹೀರಾತುಗಳಲ್ಲಿ ಪೋಜು ಕೊಡುವ ಈ ಕೋ–ಜಾ ಜೋಡಿ ಕರ್ನಾಟಕದ ರೈತರ ಪಾಲಿಗೆ ದುರಂತವೋ, ದುರ್ದೈವವೋ ಗೊತ್ತಾಗುತ್ತಿಲ್ಲ. ಇದರ ಕೈಗಳಲ್ಲಿ ಸಿಲುಕುಕೊಂಡಿರುವ ರೈತನ ಬಾಳು ಕಣ್ಣೀರಿನ ಗೋಳು ಎಂಬುದರ ಬಗ್ಗೆ ಎರಡು ಮಾತಿಲ್ಲ.


–ರಮಜಾನ್ ಕೆ. ಕೊರ್ತಿ, ಬಾದಾಮಿ

ಒಂದು ಕಾಲದಲ್ಲಿ ದಾವಣಗೆರೆ ಕಮ್ಯುನಿಸ್ಟ್ ಪಕ್ಷದ ವರ್ಚಸ್ಸು ಎಷ್ಟಿತ್ತು ಎಂದರೆ ಮುನಿಸಿಪಾಲಿಟಿ ಬಿಲ್ಡಿಂಗ್‌ನಿಂದ ಹಿಡಿದು ನಗರಸಭೆಗೆ ಸೇರಿದ ಎಲ್ಲಾ ಬಿಲ್ಡಿಂಗ್‌ಗಳು ಕೆಂಪು ಬಣ್ಣದಿಂದ ಕೂಡಿದ್ದವು. ಸಾಮ್ರಾಟ್ ಅಶೋಕನ ಕನಸಿನಂತೆ ಕಾ. ಪಂಪಾವತಿ ಓಣಿ... ಯುದ್ಧಕ್ಕೂ ಮರಗಳನ್ನು ನೆಟ್ಟು ಕನಸು ಕಾಣುವ ಧೀಮ... ನಾಯಕರಾಗಿದ್ದರು. ದಾವಣಗೆರೆ ಭದ್ರಕೋಟೆಯ... ಸುತ್ತಲೂ ಕಾಟನ್‌ಮಿಲ್‌ಗಳ ಅಬ್ಬರ... ಜನ... ಸಂತೋಷ, ಮಿಲ್‌ಗಳು ಬಿಟ್ಟ ತಕ್ಷಣ ಜನಗಳ ಸೈಕ... ಸವಾರಿ, ಇವೆಲ್ಲ ಕನಸಿನಂತೆ ಇವೆ. ಅಂದು ಅಂಥವ... ಸಾರಥ್ಯದಲ್ಲಿ ಬೆಳೆದ ಎಚ್.ಕೆ.ಆರ್. ಇಂದು ಕೋಟಿಗ... ಆಸ್ತಿಯ ಒಡೆಯ. ಗಣೇಶ್ ಬೀಡಿ ಸುಡುತ್ತಿದ್ದ ಶಂಕ... ಇಂದು ಗಾಂಧಿಯ ಹೆಸರಿನಲ್ಲಿ ಡೊನೇಷ... ಕಾಲೇಜುಗಳನ್ನು ಸ್ಥಾಪಿಸಿ ಇಂದು 5... ಫೈವ್ ಸಿಗರೇಟ್ ಸೇದುತ್ತಾ ... ಎಚ್.ಕೆ.ಆರ್. ನಂತಹವರು ಬೆಳ್ಳಿ ಕಿರೀ... ತೊಡಿಸುವುದು ಕೆಲವು ಕಮ್ಯುನಿಸ್ಟರ ಪಾಪ... ಫಲವಾಗಿದೆ. ಕೊಂಚ ಹೋರಾಟದ ಬಿಸಿಯಿರು... ಭೈರಪ್ಪ ಆಗಲಿ, ಗಿಡ್ಡ ನಾಗಪ್ಪ, ಜೆ.... ಹನುಮಂತಪ್ಪನಂಥವರಾಗಲಿ ಇಂದೂ ಸಹ ನಿಷ್ಠೆಯಿ... ಹೋರಾಟ ಮಾಡಿದ್ರೆ ಮತ್ತೆ ಕಮ್ಯುನಿಸ್ಟ್ ... ಬೆಳೆಯುತ್ತದೆ.

–ಮುತ್ತಣ್ಣ ಪೂಜಾ...
ಕದಲಬಾ...

ಹೊಸ ಕ್ಷೇತ್ರ





ಅಪ್ಪಾಜಿ ಬಗ್ಗೆ ಸಿನಿಮಾ ಮಾಡುತ್ತೇನೆ

ಅಪ್ಪಾಜಿಯವರ ಮಗನಾಗಿ ಅವರ ವ್ಯಕ್ತಿತ್ವದ ನೂರಾರು ಮಜಲುಗಳನ್ನು ನಾನು ಅತ್ಯಂತ ಹತ್ತಿರದಿಂದ ಕಂಡ ಭಾಗ್ಯವಂತನಾಗಿದ್ದೇನೆ. ಅವರ ಜೀವನದ ಎಲ್ಲ ಬ್ಯೂಟಿಫುಲ್ ಅಂಶಗಳನ್ನು ಬಳಸಿಕೊಂಡು ಒಂದು ಸ್ಕ್ರಿಪ್ಟ್ ಮಾಡಬೇಕೆಂದು ನಿರ್ಧರಿಸಿದ್ದೇನೆ. ಅದಕ್ಕೆ ಸದ್ಯಕ್ಕೆ 'ಮನುಷ್ಯ' ಎಂದು ಹೆಸರಿಟ್ಟಿದ್ದೇನೆ. ಅಪ್ಪಾಜಿಯ ವ್ಯಕ್ತಿತ್ವದ 'ಇನ್ನೊಂದು ಮುಖ'ವನ್ನು ಅವರ ಅಭಿಮಾನಿಗಳಿಗೆ ನೀಡುವುದೇ ನನ್ನ ಉದ್ದೇಶ.


ನನ್ನ ವೃತ್ತಿ ಜೀವನದ ಪ್ರಾರಂಭದಲ್ಲಿ ನಾನು ವೈವಿಧ್ಯಮಯ ಪಾತ್ರಗಳಲ್ಲಿ ನಟಿಸುವಂತೆ ನೋಡಿಕೊಂಡಿದ್ದ ನನ್ನ ಅಪ್ಪಾಜಿಯವರು ನಾನು ಹೀರೋ ಆದ ನಂತರ ತಾವು ಚಲನಚಿತ್ರಗಳಲ್ಲಿ ನಟಿಸುವುದನ್ನು ಕಡಿಮೆ ಮಾಡಿದರು. ಆದರೆ ಕಲಾವಿದರಿಗೆ ನಿವೃತ್ತಿಯೆಂಬುದಿಲ್ಲ ಎಂಬುದು ನಿಮಗೆ ಗೊತ್ತೇ ಇದೆ. ಆದರೂ ಅಪ್ಪಾಜಿ ನಮಗೆ ಯಾರಿಗೂ ಹೇಳದೇ ಒಂದು ರೀತಿಯಲ್ಲಿ ತಮ್ಮ ಅರೆ ನಿವೃತ್ತಿಯನ್ನು ಆಚರಣೆಗೆ ತಂದಿದ್ದರು.

ಅವರೊಬ್ಬ ಸೂಪರ್ ಹೀರೋ. ಅವರ ಯಾವುದೇ ಚಿತ್ರ ಬಂದರೂ ಜನ ನೋಡುತ್ತಿದ್ದರು. ಅಂತಹ ಅತ್ಯುನ್ನತ ಸ್ಥಾನದಲ್ಲಿದ್ದಾಗ ಅವರು ತಮ್ಮ ಮಕ್ಕಳಿಗಾಗಿ ಈ ತ್ಯಾಗ ಮಡಿದ್ದರು. ನೋಡಿ ಸ್ವತಃ ಅವರೇ ಒಬ್ಬ ಸೂಪರ್ ಸ್ಟಾರ್ ಆದರೂ ಅವರು ನನಗಾಗಿ ಮತ್ತು ರಾಘಣ್ಣನಿಗಾಗಿ ಕತೆಯನ್ನು ಕೇಳುತ್ತಿದ್ದರು. ಆ ಕತೆಯಲ್ಲಿ ಅವರು ಪರಕಾಯ ಪ್ರವೇಶ ಮಾಡುತ್ತಿದ್ದರು. ಆದರೆ ಅವರು ಈ ಕೆಲಸವನ್ನು ಕರ್ತವ್ಯವೆಂಬ ರೀತಿಯಲ್ಲಿ ಮಾಡಲಿಲ್ಲ. ಬದಲಿಗೆ ಅವರಿಗೆ ಅದರಲ್ಲಿ ಸಂತೋಷ ಸಿಗುತ್ತಿತ್ತು. ಸಾಧಾರಣವಾಗಿ ನಾವು ಬೇರೆ ಹೀರೋಗಳ ಉತ್ತಮ ಚಿತ್ರವನ್ನು ನೋಡಿದಾಗ 'ನಾವು ಆ ಪಾತ್ರ ಮಾಡ ಬಾರದಿತ್ತೇ? ನಮಗೆ ಅಂತಹ ಅವಕಾಶ ಸಿಗಬಾರದಿತ್ತೇ' ಎಂದು ಮರುಗುತ್ತೇವೆ. ಇದು ಪ್ರತಿಯೊಬ್ಬ ಕಲಾವಿದನೂ ವೃತ್ತಿ ಜೀವನದಲ್ಲಿ ಅನುಭವಿಸುವ ನೋವು. ಆದರೆ ಅಪ್ಪಾಜಿ ಮಾತ್ರ ಇಂತಹ ನೋವನ್ನು ಸಂತೋಷವನ್ನಾಗಿ ಪರಿವರ್ತಿಸಿಕೊಳ್ಳುತ್ತಿದ್ದ ರೀತಿ ಮಾತ್ರ ಅದ್ಭುತ.

ಅಪ್ಪಾಜಿಯವರ ಅಭಿಮಾನಿಗಳು ಮನೆಯ ಮುಂದೆ, ಗಾಂಧಿನಗರದಲ್ಲಿನ ನಮ್ಮ ಕಚೇರಿಯ ಮುಂದೆ ಅಪ್ಪಾಜಿ ನಟಿಸಬೇಕೆಂದು ಗಲಾಟೆ ಮಾಡುತ್ತಿದ್ದ ಸಂದರ್ಭದಲ್ಲೂ ಅವರು ತಮ್ಮ ಚಿತ್ರಕ್ಕಾಗಿ ಕತೆಯನ್ನು ಹುಡುಕುತ್ತಿರಲಿಲ್ಲ, ಅವರದೇನಿದ್ದರೂ ನಮಗಾಗಿ ಒಳ್ಳೆ ಕತೆ ಹುಡುಕುವ ಮನಸ್ಸು. ಇದೆಲ್ಲ ವನ್ನೂ ನಾನು ಆಗ ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ, ಆದರೆ ಈಗ ಅವರ ಗೈರುಹಾಜರಿಯಲ್ಲಿ, ನನ್ನ ಇಂದಿನ ಸೋಲು ಮತ್ತು ಗೆಲುವಿನ ಸಂದರ್ಭದಲ್ಲಿ — ಅಪ್ಪಾಜಿಯನ್ನು ನೆನೆಸಿಕೊಂಡಾಗ ಹೃದಯ ತುಂಬಿ ಬರುತ್ತದೆ.

ಹಲವು ಬಾರಿ ನನ್ನ ಚಿತ್ರಗಳು ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದಾಗ ಅದರ ಜವಾಬ್ದಾರಿಯನ್ನು ಅವರು ನನ್ನ ಮೇಲೆ ಹೊರಿಸುತ್ತಿರಲಿಲ್ಲ. "ನೀನು ತುಂಬಾ ಚೆನ್ನಾಗಿ ಮಾಡಿದ್ದೀಯಾ ಕಂದಾ.... ನಿನ್ನದೇನೂ ತಪ್ಪಿಲ್ಲ, ನಾವೇ ಕತೆಯ ಆಯ್ಕೆಯಲ್ಲಿ ಇನ್ನೂ ಸ್ವಲ್ಪ ಕುಂತ್ಕೋಬೇಕಿತ್ತು. ಇನ್ನು ಸ್ವಲ್ಪ ಕುಂತ್ಕೊಂಡಿದ್ರೆ ಕತೆ ಚೆನ್ನಾಗಿ ಬರುತ್ತಿತ್ತು, ತಪ್ಪು ನಮ್ಮದೇ" ಎಂದು ಹೇಳುತ್ತಿದ್ದರು. ಈ ತರಹ ಹೇಳುವ ಮತ್ತೊಬ್ಬ ವ್ಯಕ್ತಿ ನಿಮಗೆ ಉದ್ಯಮದಲ್ಲಿ ಸಿಗುತ್ತಾರ ಹೇಳಿ? ಈ ವಿಷಯದಲ್ಲಿ ನಾನು ಖಂಡಿತವಾಗಿಯೂ ಅದೃಷ್ಟವಂತ. ಅಪ್ಪಾಜಿ ಮತ್ತು ಅಪ್ಪಣ್ಣ ಇಲ್ಲದೇ ಇದ್ದರೆ ನಾನು ಸಿಕ್ಕ ಸಿಕ್ಕ ಪಾತ್ರಗಳನ್ನು ಮಾಡಿ ನನ್ನ ವೃತ್ತಿ ಜೀವನವನ್ನು ಆರಂಭದಲ್ಲೇ ಕೆಡಿಸಿಕೊಳ್ಳುತ್ತಿದ್ದನೋ ಏನೋ?

ಅಪ್ಪಾಜಿಯವರಿಗೆ ಮನೆಮಂದಿಯೆಲ್ಲ ಜೊತೆಗೂಡಬೇಕೆಂಬ ಆಸೆ. ಆದ್ದರಿಂದ ಕನಿಷ್ಠ ತಿಂಗಳಿಗೊಮ್ಮೆ ನಾವೆಲ್ಲರೂ ನಮ್ಮ ತೋಟದಲ್ಲಿ ಸೇರಲೇಬೇಕಾಗಿತ್ತು. ತೋಟದಲ್ಲಿ ನಮ್ಮ ಕುಟುಂಬದ ಎಲ್ಲಾ ಸದಸ್ಯರಲ್ಲದೆ ಕೆಲವು ಆತ್ಮೀಯ ಗೆಳೆಯರನ್ನೂ ಆಹ್ವಾನಿಸುತ್ತಿದ್ದರು. ತೋಟದಲ್ಲಿ ಊಟವಿದೆ ಎಂದರೆ ಅಲ್ಲಿ ಮಾಂಸದ ಊಟ ಎಂದೇ ಅರ್ಥ. ನನ್ನ ಪತ್ನಿ ಗೀತಾ ತುಂಬಾ ಚೆನ್ನಾಗಿ ಮಾಡುವ ಚಿಕನ್ ತಂದೂರ್ ಅಂದರೆ ಅಪ್ಪಾಜಿಗೆ ತುಂಬಾ ಇಷ್ಟ. ಆದ್ದರಿಂದ ಆಕೆಯ ಚಿಕನ್ ತಂದೂರ್ ಸಮೇತ ಅನೇಕ ಭಕ್ಷ್ಯಗಳು ಅಲ್ಲಿರುತ್ತಿದ್ದವು. ಇತ್ತೀಚೆಗೆ ಫ್ಯಾಮಿಲಿ ಪಾರ್ಟಿ ಅಂದರೂ ಅವುಗಳಲ್ಲಿ ಡ್ರಿಂಕ್ಸ್ ಇರುತ್ತದೆ. ಆದರೆ ಅಪ್ಪಾಜಿಗೆ ಅದೆಲ್ಲ ಇಷ್ಟವಿಲ್ಲದಿದ್ದರಿಂದ ನಮ್ಮ ಪಾರ್ಟಿಗಳಲ್ಲಿ ಬರೀ ಊಟ ಇರುತ್ತಿತ್ತು. ಆಗ ಅಪ್ಪಾಜಿಯವರು ಸ್ವತಃ ತಾವೇ ನಿಂತು "ಇನ್ನೂ ಹಾಕಿ.. ಇನ್ನೂ ತಿನ್ನಿ..." ಎಂದು ಎಲ್ಲರಿಗೂ ಅಡುಗೆಯವರಿಂದ ಬಡಿಸುತ್ತಿದ್ದರು.



ಒಬ್ಬ ನಟನಾಗಿ ಮಾತ್ರವಲ್ಲ, ಒಬ್ಬ ತಂದೆಯಾಗಿ ಕೂಡಾ ನನಗೆ ಅಪ್ಪಾಜಿ ಥರ ಇರಲು ಸಾಧ್ಯವಾಗಿಲ್ಲ ಎಂದು ಪ್ರಾಮಾಣಿಕವಾಗಿ ಹೇಳುತ್ತೇನೆ. ನನ್ನ ಪ್ರಕಾರ **he is not matinee idol, he is real hero, he is peoples hero.** ಒಬ್ಬ ನಟ ಸೂಪರ್ ಸ್ಟಾರ್ ಆಗುವುದು ದೊಡ್ಡ ವಿಷಯವೇನಲ್ಲ, ಆದರೆ ಆತ ಜನರ ಹೃದಯದಲ್ಲಿ ಶಾಶ್ವತವಾಗಿ ಸ್ಥಾನ ಗಳಿಸುವುದು ಆತ ತನ್ನ ನಡವಳಿಕೆಯಿಂದಾಗಿ ಜನರಿಗೆ ಹತ್ತಿರವಾದಾಗ.

ಕರ್ನಾಟಕದ ಜನರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆದಿರುವ ಅಪ್ಪಾಜಿಯವರು ಕೇವಲ ಮೂರನೇ ತರಗತಿಯ ತನಕ ಮಾತ್ರ ಓದಿದ್ದರೆಂಬುದನ್ನು ಕೇಳಿದರೆ ಆಶ್ಚರ್ಯವಾಗುವುದಿಲ್ಲವೇ? ಅಂದರೆ ಶಾಲೆಯ ವಿದ್ಯಾಭ್ಯಾಸಕ್ಕಿಂತ ಅವರ ಜೀವನದ ಅನುಭವದಿಂದಲೇ ಅವರು ಎಲ್ಲರ ಹೃದಯ ಗೆದ್ದರು. ಅವರ ತರಹ ಆದರ್ಶ ಪುರುಷನ ತರಹ ಇರಬೇಕೆಂಬ ಆಸೆ ನನಗೂ ಇದೆ. ಆದರೆ ಅದು ನನ್ನಿಂದ ಸಾಧ್ಯವಿಲ್ಲ ಎಂಬ ಅರಿವೂ ನನಗಿದೆ. ನನ್ನಿಂದ ಮಾತ್ರವಲ್ಲ, ಕರ್ನಾಟಕದಲ್ಲಿ ಯಾರಿಂದಲೂ ರಾಜ್‌ಕುಮಾರ್ ತರಹ ಇರಲು ಸಾಧ್ಯವಾಗದು.

ಕನ್ನಡಕ್ಕೊಬ್ಬ ಹೇಗೆ ಸರ್ವಜ್ಞನೋ ಹಾಗೇ ಕನ್ನಡಕ್ಕೊಬ್ಬನೇ ರಾಜಕುಮಾರ ಎಂದು ನಾನು ಹೇಳಿದರೆ ನೀವ್ಯಾರೂ ತಪ್ಪು ತಿಳ್ಕೊಳ್ಳೋಲ್ಲ ಅಂತ ಭಾವಿಸಿದ್ದೇನೆ.

ದೃಶ್ಯ ಮಾಧ್ಯಮವನ್ನು ದುರುಪಯೋಗಪಡಿಸಿ ಹಣ ಮಾಡುವುದನ್ನು ಅಪ್ಪಾಜಿ ಯಾವಾಗಲೂ ವಿರೋಧಿಸುತ್ತಿದ್ದರು. ಹೀಗಾಗಿ ನಮ್ಮ ಸಂಸ್ಥೆಯ ಚಿತ್ರ ಗಳಲ್ಲಿ ದ್ವಂದ್ವಾರ್ಥದ ಸಂಭಾಷಣೆ, ಹೆಣ್ಣಿನ ಮೈ ತೋರಿಸುವ ದೃಶ್ಯಗಳಿದ್ದರೆ ಅದನ್ನು ಅವರು ಯಾವ ಮುಲಾಜೂ ಇಲ್ಲದೆ ತೆಗೆಸಿಬಿಡುತ್ತಿದ್ದರು. ಅಪ್ಪಾಜಿ ಅಂತಹ ಕಠಿಣವಾದ ನಿಲುವನ್ನು ತೆಗೆದುಕೊಂಡಿದ್ದರಿಂದ ಇವತ್ತಿಗೂ ವಜ್ರೇಶ್ವರಿ ಕಂಬೈನ್ಸ್‌ನ ಚಿತ್ರವೆಂದರೆ ಜನ ಕುಟುಂಬ ಸಮೇತರಾಗಿ ಆಗಮಿಸುತ್ತಾರೆ.

ಮೊನ್ನೆ ಶಬರಿಮಲೆಯಿಂದ ಭಕ್ತಾದಿಗಳು ವಾಪಾಸು ಬರುತ್ತಿದ್ದದ್ದನ್ನು ನೋಡಿದಾಗ ನಾನು ಏಳೆಂಟು ಬಾರಿ ಅಪ್ಪಾಜಿಯವರೊಂದಿಗೆ ಶಬರಿಮಲೆಗೆ ಹೋಗಿದ್ದು ನೆನಪಾಯಿತು. ನಿಜ ಹೇಳಬೇಕೆಂದರೆ ಅಯ್ಯಪ್ಪ ದೇವರನ್ನು ನೋಡಲು ನಾನು ಇನ್ನೊಂದು ದೇವರ ಜೊತೆ ಹೋಗುತ್ತಿದ್ದೆ. ಅವರು ಅತ್ಯಂತ ಶಿಸ್ತಿನಿಂದ ಮಾಡುತ್ತಿದ್ದ ಪೂಜೆ, ವ್ರತಗಳು, ಊಟದ ವ್ಯವಸ್ಥೆ... ಎಲ್ಲವೂ ನೆನಪಿನಲ್ಲಿವೆ. ಈ ವರ್ಷ ಅಪ್ಪಾಜಿಯ ಹುಟ್ಟಿದ ಹಬ್ಬದ ನಂತರ ನಾನು ಮತ್ತೆ ಶಬರಿಮಲೆಗೆ ಹೋಗಬೇಕೆಂದು ನಿರ್ಧರಿಸಿದ್ದೇನೆ. ಅಪ್ಪಾಜಿ ನಮ್ಮನ್ನು ಕರೆದುಕೊಂಡುಹೋದ ರೀತಿಯಲ್ಲೇ ನಮ್ಮ ಮಿನಿ ಬಸ್‌ನಲ್ಲಿ ಮೂವತ್ತು-ಮೂವತ್ತೈದು ಜನರನ್ನು ಕರೆದುಕೊಂಡು ಹೋಗಬೇಕು ಅಂದುಕೊಂಡಿದ್ದೇನೆ. ಅಪ್ಪಾಜಿ ಆರಂಭಿಸಿದ ಆ ಸಂಪ್ರದಾಯವನ್ನು ಅವರಷ್ಟೇ ಶಿಸ್ತಿನಿಂದ ಮತ್ತು ಶ್ರದ್ಧೆಯಿಂದ ಮುಂದುವರೆಸುವ ಮೂಲಕ ಅವರಿಗೆ ಚಿಕ್ಕ ಶ್ರದ್ಧಾಂಜಲಿ ನೀಡಲು ನಿರ್ಧರಿಸಿದ್ದೇನೆ.

ಅಪ್ಪಾಜಿಯವರ ಮಗನಾಗಿ ಅವರ ವ್ಯಕ್ತಿತ್ವದ ನೂರಾರು ಮಜಲುಗಳನ್ನು ನಾನು ಅತ್ಯಂತ ಹತ್ತಿರದಿಂದ ಕಂಡ ಭಾಗ್ಯವಂತನಾಗಿದ್ದೇನೆ. ಅವರ ಜೀವನದ ಎಲ್ಲ ಬ್ಯೂಟಿಫುಲ್ ಅಂಶಗಳನ್ನು ಬಳಸಿಕೊಂಡು ಒಂದು ಸ್ಕ್ರಿಪ್ಟ್ ಮಾಡಬೇಕೆಂದು ನಿರ್ಧರಿಸಿದ್ದೇನೆ. ಅದಕ್ಕೆ ಸದ್ಯಕ್ಕೆ 'ಮನುಷ್ಯ' ಎಂದು ಹೆಸರಿಟ್ಟಿದ್ದೇನೆ. ಅಪ್ಪಾಜಿಯ ವ್ಯಕ್ತಿತ್ವದ 'ಇನ್ನೊಂದು ಮುಖ'ವನ್ನು ಅವರ ಅಭಿಮಾನಿಗಳಿಗೆ ನೀಡುವುದೇ ನನ್ನ ಉದ್ದೇಶ.

ಮತ್ತೆ ನನ್ನ ಸಿನಿಮಾ ವಿಷಯಕ್ಕೆ ಬರೋಣ. ಉಪೇಂದ್ರ ಅವರು ಒಂದು ಕತೆಯನ್ನು ನನಗೆ ಸ್ಥೂಲವಾಗಿ ಹೇಳಿದರು. ನಾನು ಆ ಕತೆಯ ಒಳ ಹರಿವನ್ನು ಅಪ್ಪಾಜಿ ಮತ್ತು ಅಮ್ಮನಿಗೆ ಸ್ವಲ್ಪ ಅಂಜಿಕೆಯಿಂದಲೇ ಹೇಳಿದೆ. ಯಾಕೆಂದರೆ ಆ ತರಹದ ಕಥಾವಸ್ತುವಿನ ಚಿತ್ರಗಳನ್ನು ಅಲ್ಲಿಯತನಕ ನಮ್ಮ ಸಂಸ್ಥೆಯಿಂದ ನಾವು ಮಾಡಿರಲಿಲ್ಲ. ಆ ಚಿತ್ರದ ಬಗ್ಗೆ ಉಳಿದವರೆಲ್ಲಾ ಇನ್ನೂ ಯೋಚಿಸುತ್ತಿದ್ದಾಗ "ಯಾಕಯ್ಯೋ... ನೀನ್ಯಾಕ್ ಮಾಡ್ಬಾರ್ದಯ್ಯೋ" ಎಂದು ಅಪ್ಪಾಜಿ ಅವರದೇ ಶೈಲಿಯಲ್ಲಿ ನನ್ನನ್ನು ಹುರಿದುಂಬಿಸಿದರು. 'ಓಂ' ಚಿತ್ರದ ಬಗೆಗಿನ ನಮ್ಮ ಮನೆಯಲ್ಲಿ ಆಗ ಬಿಸಿಬಿಸಿ ಚರ್ಚೆ ಪ್ರಾರಂಭವಾಯಿತು......

(ಮುಂದುವರೆಯುತ್ತದೆ...)

ಎಲ್ಲಿಂದ ಬಂತು ದುಡ್ಡು?

ರಾಧಿಕಾಳ ಎಂಟು ಕೋಟಿ ರೂ. ಬಂಗಲೆ, ಮೂರು ರೂ. ಕೋಟಿ ಸಿನಿಮಾ!

ಒಂದು ಚಿತ್ರಕ್ಕೆ ಐದು ಲಕ್ಷಕ್ಕಿಂತ ಹೆಚ್ಚು ಸಂಭಾವನೆ ಪಡೆಯದಿದ್ದ, ಕನಿಷ್ಠ ಮೂವತ್ತು ಸಿನಿಮಾಗಳಲ್ಲೂ ನಟಿಸದಿದ್ದ ರಾಧಿಕಾ ಎಂಬ ನಟಿ ಇತ್ತೀಚೆಗೆ ಬೆಂಗಳೂರಿನ ಪ್ರತಿಷ್ಠಿತ ಡಾಲರ್ಸ್ ಕಾಲೋನಿಯಲ್ಲಿ ಎಂಟು ಕೋಟಿ ರೂ. ಬೆಲೆಬಾಳುವ ಬಂಗಲೆ ಖರೀದಿಸಿದ್ದು ಎಲ್ಲರಲ್ಲೂ ಅಚ್ಚರಿ ಮೂಡಿಸಿತ್ತು. ಮಂಗಳೂರಿನ ರಸ್ತೆಯಲ್ಲಿ ಸೋಂಡಾ ಮಾರುತ್ತಿದ್ದವರ ಮಗಳಾದ, ಐದು ವರ್ಷಗಳ ಹಿಂದೆ ಎಳೆಗೈಯಲ್ಲಿ ಚಿತ್ರರಂಗಕ್ಕೆ ಕಾಲಿಟ್ಟ ರಾಧಿಕಾ ಇಷ್ಟು ಚಿಕ್ಕ ಅವಧಿಯಲ್ಲಿ ಅದು ಹೇಗೆ ಎಂಟು ಕೋಟಿ ರೂ. ಬೆಲೆಯ ಮನೆ ಖರೀದಿಸಲು ಸಾಧ್ಯವಾಯಿತು ಎಂಬ ಪ್ರಶ್ನೆಗೆ ಬಳ್ಳಾರಿಯ ಗಣಿ ಅಥವಾ ಕನಕಪುರದ ಗ್ರಾನೈಟ್ ಎಂಬ ಉತ್ತರಗಳು ಕೇಳಿಬಂದಿತ್ತಾದರೂ ಅದಿನ್ನೂ ಖಚಿತವಾಗಿಲ್ಲ (ಆಗುವುದೂ ಇಲ್ಲ ಎಂಬುದು ಬೇರೆ ಮಾತು ಬಿಡಿ). ಆದರೆ ಈಗ ರಾಧಿಕಾ ಮತ್ತೊಂದು ಅಚ್ಚರಿಯನ್ನು ಹುಟ್ಟಿಸಿದ್ದಾಳೆ.



ಅದೇನೆಂದರೆ, ಎಂಟು ಕೋಟಿ ರೂ. ಬಂಗಲೆಯ ಒಡತಿಯಾದ ರಾಧಿಕಾ ಈಗ ತನ್ನ 'ಸ್ವಂತ ಮೂರು ಕೋಟಿ ರೂಪಾಯಿಗಳನ್ನು' ಹೂಡಿ ಸಿನಿಮಾ ನಿರ್ಮಿಸಲು ಹೊರಟಿದ್ದಾಳೆ. ಇದಕ್ಕಾಗಿ ಆಕೆ ಈಗಾಗಲೇ ಕತೆಯನ್ನು ರೆಡಿಮಾಡಿದ್ದಾಳಲ್ಲದೆ, ಅದನ್ನು ಕನ್ನಡದಲ್ಲಿ ಚಂದ್ರಶೇಖರ್ ನಿರ್ದೇಶಿಸಬೇಕೆಂಬ ಆಸೆ ವ್ಯಕ್ತಪಡಿಸಿದ್ದಾಳೆ.

ರಾಧಿಕಾಳ ಬಂಗಲೆಯಂತೆ ಈ ಯೋಜನೆಯ ಹಿಂದೆ ಬಳ್ಳಾರಿಯ ಐರನ್ ಓರ್ ಅಥವಾ ಕನಕಪುರದ ಗ್ರಾನೈಟ್ ಕಲ್ಲುಗಳು ಇರಬಹುದೇ ಎಂದು ಗಾಂಧಿನಗರ ಗುಸುಗುಸುತ್ತಿದೆ.

ಯಾಕೆಂದರೆ, ಸುಮಾರು ಐದು ವರ್ಷಗಳ ಹಿಂದೆ ರಾಮೋಜಿರಾವ್ ನಿರ್ಮಾಣದ 'ನಿನಗಾಗಿ' ಎಂಬ ಸಿನಿಮಾದ ಮುಖಾಂತರ ಚಿತ್ರರಂಗಕ್ಕೆ ಕಾಲಿಟ್ಟ ರಾಧಿಕಾ, ಮತ್ತಾಕೆಯ ಹೆತ್ತವರ ಕೈಯಲ್ಲಿ ಆಗ ನಾಲ್ಕು ಕಾಸೂ ಇರಲಿಲ್ಲ, ಆದರೆ ಯಾವಾಗ 'ನಿನಗಾಗಿ' ಹಿಟ್ ಆಯಿತೋ, ಯಾವಾಗ ಈ ಕರಾವಳಿಯ ಕನ್ಯೆ ಬಿಚ್ಚಮ್ಮನಾಗಲು ಹಿಂಜರಿಯುವುದಿಲ್ಲ ಎಂದು ಗೊತ್ತಾಯಿತೋ ಆಗ ನಿರ್ಮಾಪಕರು ಆಕೆಯ ಮನೆ ಬಾಗಿಲ ಮುಂದೆ ಹಾಜರಾಗಲಾರಂಭಿಸಿದರು.

ಅದೇ ಹೊತ್ತಿಗೆ ಇನ್ನೊಂದು ಕುತೂಹಲಕಾರಿ ಘಟನೆಯೂ ನಡೆಯಿತು. ರಾಧಿಕಾ ಹೇಗೆ ತನ್ನನ್ನು ಹೆತ್ತವರಿಗೆ ಚಿನ್ನದ ಮೊಟ್ಟೆ ಇಡುವ ಕೋಳಿ ಆದಳೋ, ಹಾಗೆಯೇ ಆಕೆಯ ಕೈಹಿಡಿದಿದ್ದವನಿಗೂ ದುಡ್ಡು ಮಾಡುವ ಗಣಿಯಂತೆ ಕಾಣಲಾರಂಭಿಸಿದಳು. ಆಗ, ಅವಳ ಈ ಪುಣ್ಯಾತ್ಮ ಗಂಡ ಮತ್ತಾತನ ತಾಯಿ ಅದೆಲ್ಲಿಂದಲೋ ಉದ್ಭವಿಸಿ "ನಮ್ಮ ಮನೆಯ ಸೊಸೆಯನ್ನು ಆಕೆಯ ತಂದೆ ಅಪಹರಿಸಿದ್ದಾರೆ" ಎಂದು ಪೊಲೀಸರಿಗೆ ದೂರು ನೀಡಿ ಬಾಯಿ ಬಾಯಿ ಬಡಿದುಕೊಳ್ಳಲಾರಂಭಿಸಿದರು. ಅದಕ್ಕೆ ತಕ್ಕಂತೆ, ವಧುವಿನಂತೆ ಅಲಂಕಾರ ಮಾಡಿಕೊಂಡಿದ್ದ ರಾಧಿಕಾ ತನ್ನ ಮಂಗಳೂರಿನ ಗಂಡನ ಪಕ್ಕ ಕೂತಿದ್ದ ಚಿತ್ರಗಳೂ ಹೊರಬಿದ್ದಿದ್ದವು. ಆದರೆ ಆ ಮದುವೆ ನಡೆದಾಗ ಆಕೆಗಿನ್ನೂ 18 ತುಂಬಿರಲಿಲ್ಲ, ಆದ್ದರಿಂದ ಅದು ಮದುವೆಯೇ ಅಲ್ಲ ಎಂದು ವಾದಿಸಿದ ರಾಧಿಕಾಳ ತಂದೆ, ಆ ಇಡೀ ಪ್ರಸಂಗದಿಂದ ಅದು ಹೇಗೋ ಬಚಾವಾಗಿದ್ದರು. ಸಾಮಾನ್ಯವಾಗಿ ಇಂತಹ ಪ್ರಕರಣಗಳು ನಡೆದಾಗ ತಾರೆಯರ ಬೇಡಿಕೆ ಇದ್ದಕ್ಕಿದ್ದಂತೆ ಕುಸಿಯುತ್ತದೆ. ಆದರೆ ರಾಧಿಕಾಳ ಕೇಸಿನಲ್ಲಿ ಹಾಗಾಗಲಿಲ್ಲ, ಬದಲಾಗಿ ಆಕೆಗೆ ಬೇಡಿಕೆ ಹೆಚ್ಚಾಗುತ್ತಲೇ ಸಾಗಿತು. ರವಿಚಂದ್ರನ್‌ನಿಂದ ಹಿಡಿದು, ತಮಿಳು ಸಿನಿಮಾದಲ್ಲಿ ಶ್ಯಾಂ ಜೊತೆಗೂ ನಟಿಸಿದ ರಾಧಿಕಾ ಇಲ್ಲಿನ ಹಲವು ಬಿ-ದರ್ಜೆಯ ನಟರೊಂದಿಗೂ ನಟಿಸಿದಳು.

ಸುಮಾರು ಇದೇ ಹೊತ್ತಿಗೆ "ನಾನು ರಾಧಿಕಾಳ ಗಂಡ" ಎಂದು ಹಿಂದೊಮ್ಮೆ ಹೇಳಿ ಆಕೆಯ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಲು ನೋಡಿದ್ದ ಆಸಾಮಿ ಸತ್ತೇ ಹೋದ. ಹಲವರು ಆತ ಕುಡಿದು ಕುಡಿದು ಸತ್ತ ಎಂದರೆ, ಇನ್ನು ಕೆಲವರು ಆತ ಆತ್ಮಹತ್ಯೆ ಮಾಡಿಕೊಂಡ ಎಂದರು. ಆದರೆ ಇದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದ ರಾಧಿಕಾ ಚಿತ್ರರಂಗದಲ್ಲಿ ಏರುತ್ತಲೇ ಹೋದಳು. ಆದರೆ, ನಮ್ಮ ಚಿತ್ರರಂಗದಲ್ಲಿ ನಟಿಯರಿಗೆ ಮೆರೆಯಲು ಹಲವು ವರ್ಷಗಳು ಮಾತ್ರ ಇರುತ್ತವೆಯಾದ್ದರಿಂದ, ಕ್ರಮೇಣ ಆಕೆಗೂ ಬೇಡಿಕೆ ಕುಗ್ಗಲಾರಂಭಿಸಿತು. ಇದೇ ಹೊತ್ತಿಗೆ ಗ್ಲಾಮರ್‌ನಲ್ಲಿ ಆವಳನ್ನು ಮೀರಿಸುವ ರಕ್ಷಿತಾ ಮತ್ತು ರಮ್ಯಾ ಎಂಬ ಟುಸ್-ಪುಸ್ ಇಂಗ್ಲಿಷ್ ಹುಡುಗಿಯರು ಚಿತ್ರರಂಗಕ್ಕೆ ಕಾಲಿಟ್ಟು ರಾಧಿಕಾ ಎಂಬ ಕಡಲಕನ್ಯೆಗೆ ಬೇಡಿಕೆಯೇ ಇಲ್ಲದಂತಾಯಿತು. ಕೊನೆ ಕೊನೆಗೆ ಆಕೆ ಶ್ರುತಿ ಬಿಟ್ಟುಹೋಗಿದ್ದ ಅಳುಮುಂಜಿ ಪಾತ್ರಗಳಿಗೆ ಸೀಮಿತವಾದಳು. ಆದರೆ ಅದು ಕೂಡ ಬಹಳದಿನಗಳ ಕಾಲ ನಡೆಯಲಿಲ್ಲ, ನಿಧಾನವಾಗಿ ಚಿತ್ರರಂಗದಿಂದ ಕಣ್ಮರೆಯಾಗಲಾರಂಭಿಸಿದ ರಾಧಿಕಾ ಈಗೇನು ಮಾಡುತ್ತಿದ್ದಾಳೆ ಎಂಬ ಪ್ರಶ್ನೆ ಬಂದಾಗಲೆಲ್ಲ, ಆಕೆಗೆ ಯಾರೋ ಪುಣ್ಯಾತ್ಮ ಹಲವು ಲಾರಿಗಳನ್ನು ಕೊಡಿಸಿದ್ದಾನಂತೆ, ಅದರಿಂದಲೇ ಜೀವನ ಸಾಗಿಸುತ್ತಿದ್ದಾಳೆ ಎಂದೆಲ್ಲ ಕೇಳಿಬಂದಿತ್ತು, ಈಗ ನೋಡಿದರೆ, ರಾಧಿಕಾ ಡಾಲರ್ಸ್ ಕಾಲೋನಿಯಲ್ಲಿ ಎಂಟು ಕೋಟಿ ರೂ. ಬಂಗಲೆ ಖರೀದಿಸಿದ್ದಾಳೆ ಎಂಬ ಸುದ್ದಿಯಿಂದ ಗಾಂಧಿನಗರ ಚೇತರಿಸಿಕೊಳ್ಳುವ ಮುನ್ನವೇ ಆಕೆ ಹಲವಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಅಪ್ಪಟ ಕಮರ್ಷಿಯಲ್ ಸಿನಿಮಾ ಮಾಡುವುದಾಗಿ ಹೇಳಿದ್ದಾಳೆ.

ಬಡತನ, ಕಷ್ಟಗಳನ್ನು ಕಂಡಿರುವ ರಾಧಿಕಾ ಯಶಸ್ಸನ್ನು ಕಾಣಬಾರದು ಎಂಬುದು ಯಾರ ವಾದವೂ ಅಲ್ಲ. ಆದರೆ, ಆಕೆಗೆ ಇಷ್ಟು ಚಿಕ್ಕ ಅವಧಿಯಲ್ಲಿ ಇಷ್ಟೊಂದು ಹಣ ಗಳಿಸಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಇತ್ತೀಚೆಗಂತೂ ಕನ್ನಡ ಚಿತ್ರೋದ್ಯಮದಲ್ಲಿ ರಿಯಲ್ ಎಸ್ಟೇಟ್ ಮಧ್ಯ, ಬಳ್ಳಾರಿಯ ಗಣಿ ಮಾಲೀಕರು ಕೊಳ್ಳೆ ಹೊಡೆಯುತ್ತಿರುವ ಹಣ, ಗ್ರಾನೈಟ್ ವ್ಯವಹಾರಸ್ಥರು ಕೂಡಿಟ್ಟಿರುವ ಬ್ಲಾಕ್ ಮನಿ, ಇವೆಲ್ಲವೂ ತಾಂಡವವಾಡುತ್ತಿವೆ. ಅಕಸ್ಮಾತ್ ರಾಧಿಕಾಳ ದಿಢೀರ್ ಐಶ್ವರ್ಯದ ಹಿಂದೆ ಇಂತಹ ಹಣ ಇದ್ದರೂ ಅಚ್ಚರಿ ಇಲ್ಲ, ಏಕೆಂದರೆ, ಹಿಂದಿನಿಂದಲೂ ಅಕ್ರಮ ಹಣ ಸಂಪಾದಿಸಿರುವವರಿಗೂ, ರಾಧಿಕಾಳಂತಹ ನಟಿಯರಿಗೂ ಅನೇಕಾನೇಕ ರೀತಿಯ ವ್ಯಾವಹಾರಿಕ ಸಂಬಂಧಗಳು, ಸಂಪರ್ಕಗಳು ನಡೆಯುತ್ತಾ ಬಂದಿವೆ. ರಾಧಿಕಾಳ ಎಂಟು ಕೋಟಿ ಬಂಗಲೆ ಮತ್ತು ಮೂರು ಕೋಟಿಯ ಹೊಸ ಸಿನಿಮಾ ಕೂಡ ಇದೇ ಸಾಲಿನಲ್ಲಿ ನಿಲ್ಲುತ್ತವೆ...



ಬ್ರಾಂಡ್ ಎಂಬ ಬಚ್ಚನ್ ಫ್ಯಾಮಿಲಿ!

ಅಭಿಷೇಕ್ ಬಚ್ಚನ್ ಮತ್ತು ಐಶ್ವರ್ಯ ರೈ ನಡುವೆ ಸಂಭವಿಸಲಿರುವುದು ಒಂದು ಮಾಮೂಲಿ ಮದುವೆ ಅಲ್ಲ, ಬದಲಾಗಿ ಎರಡು ಬಡಾ ಜಾಹೀರಾತು ಸಂಸ್ಥೆಗಳ ಮಿಲನ ಎಂಬ ಮಾತು ಕೇಳಿಬರುತ್ತಿದೆ.

ಈ ಮಾತಿಗೆ ಆಧಾರವಿಲ್ಲ ಎಂದೇನಲ್ಲ, ಏಕೆಂದರೆ ಈಗಾಗಲೇ ಐಸಿಐಸಿಐ ಬ್ಯಾಂಕ್, ಪೆಪ್ಸಿ, ನೆರೋಲೆಕ್, ಡಾಬರ್, ಕ್ಯಾಡ್‌ಬರೀಸ್ ಸೇರಿದಂತೆ ಹಲವಾರು ದೊಡ್ಡ ಕಂಪನಿಗಳ ಸರಕುಗಳಿಗೆ ರೂಪದರ್ಶಿ ಆಗಿರುವ ಅಮಿತಾಭ್ ಬಚ್ಚನ್‌ರವರ ವಾರ್ಷಿಕ ಆದಾಯ (ಈ ಜಾಹೀರಾತುಗಳಿಂದಲೇ) ಹಲವಾರು ಕೋಟಿ ರೂಪಾಯಿಗಳು.

ಇನ್ನು ನಕ್ಷತ್ರ ವಜ್ರಗಳಿಗೆ, ಲೋರಿಯಲ್ ಎಂಬ ಕೂದಲ ಬಣ್ಣಕ್ಕೆ ಇತ್ಯಾದಿಗಳಿಗೆ ರೂಪದರ್ಶಿ ಆಗಿರುವ ಭಾವಿ ಸೊಸೆ ಐಶ್ವರ್ಯ ರೈಳ ಆದಾಯ ಕೂಡ ಕೋಟಿಗಳ ಲೆಕ್ಕದಲ್ಲೇ ಸಾಗಿದೆ. ಆಕೆಯ ಕೈಹಿಡಿಯಲಿರುವ ಅಭಿಷೇಕ್ ಬಚ್ಚನ್ ಕೂಡ ಮೋಟಾರೋಲಾ ಮತ್ತು ಫೋರ್ಡ್ ಫಿಯೆಸ್ಟಾಗೆ ರೂಪದರ್ಶಿಯಾಗಿದ್ದು ಆತನೂ ಕೋಟಿಗಳ ಲೆಕ್ಕದಲ್ಲೇ ದುಡಿಯುತ್ತಿದ್ದಾನೆ.

ಈ ಮಧ್ಯೆ ಈ ಮೂವರೂ ಹಲವಾರು ಚಿತ್ರಗಳಲ್ಲಿ ನಟಿಸುತ್ತಿದ್ದು ಒಂದು ಅಂದಾಜಿನ ಆ ಎಲ್ಲ ಚಿತ್ರಗಳಲ್ಲಿ ಹೂಡಿರುವ ಹಣ ಸುಮಾರು ಒಂದು ಸಾವಿರ ಕೋಟಿಯಷ್ಟಾಗುತ್ತದೆ.

ಈಗ ಸಿನಿಮಾರಂಗದಲ್ಲೂ, ಜಾಹೀರಾತಿನ ಜಗತ್ತಿನಲ್ಲೂ ಈ ಮೂವರು ಅತಿಹೆಚ್ಚು ಬೇಡಿಕೆ ಹೊಂದಿದ್ದಾರೆ, ಆ ಬೇಡಿಕೆಗೆ ತಕ್ಕಂತೆ ಕೋಟ್ಯಂತರ ರೂಪಾಯಿಗಳನ್ನು ದುಡಿಯುತ್ತಿದ್ದಾರೆ. ಈ ಕಾರಣಕ್ಕೇ ಮೊದಲೇ ಹೇಳಿದ್ದು... ಇದೊಂದು ಮಾಮೂಲಿ ವಿವಾಹವಲ್ಲ, ಬದಲಾಗಿ ಇದೊಂದು 'ಬ್ರಾಂಡ್' ಆಗುತ್ತಿರುವ ಫ್ಯಾಮಿಲಿ ಎಂದು!

ಓಂ ಪ್ರಾಕಾಶ್‌ರ 'ಹ್ಯಾಟ್ ಟ್ರಿಕ್'



ಓಂ ಪ್ರಕಾಶ್ ಎಂಬ ನಿರ್ದೇಶಕ ಕಂ ನಟ ಈಗ ಮೂರು ಸಿನಿಮಾಗಳನ್ನು ಒಟ್ಟಿಗೆ ನಿರ್ದೇಶಿಸಲು ಹೊರಟಿದ್ದಾರೆ. ಬರುವ ಫೆಬ್ರವರಿ 16ನೇ ತಾರೀಖು ಮಲ್ಲೇಶ್ವರಂನ ಜಕ್ಕರಾಯನಕೆರೆ ಮೈದಾನದಲ್ಲಿ ಆ ಮೂರು ಚಿತ್ರಗಳು ಸೆಟ್ಟೇರಲಿದ್ದು 'ಕಾವಲುಗಾರ' ಮತ್ತು 'ಕೆಂಪೇಗೌಡ' ಎಂಬ ಚಿತ್ರಗಳಿಗೆ ಸುದೀಪ್ ಹೀರೋ ಆದರೆ, ಮೂರನೆಯದರಲ್ಲಿ ಸ್ವತಃ ಓಂ ಪ್ರಕಾಶ್ ನಟಿಸಲಿದ್ದಾರೆ. ಇದು 'ಡಕೋಟಾ ಎಕ್ಸ್‌ಪ್ರೆಸ್' ಚಿತ್ರದ ಮುಂದುವರಿದ ಭಾಗವಾಗಿದ್ದು ಅದರಲ್ಲಿ ಅವರೊಂದಿಗೆ ರಾಕ್‌ಲೈನ್ ವೆಂಕಟೇಶ್ ಕೂಡ ನಟಿಸುತ್ತಿದ್ದಾರೆ.

ರಮ್ಯಾಳಿಗೆ ಕಾಲು ಕೋಟಿ!



ಊರಿಗೊಬ್ಬಳೇ ಪದ್ಮಾವತಿ ಎಂಬಂತೆ ರಮ್ಯಾ ಕನ್ನಡ ಚಿತ್ರರಂಗಕ್ಕೊಬ್ಬಳೇ ಸದ್ಯದ ನಾಯಕಿ. ಪ್ರತಿಯೊಬ್ಬ ನಿರ್ದೇಶಕ-ಸ್ಕ್ರಿಪ್ಟ್ ಬರಹಗಾರ ತನ್ನ ಚಿತ್ರದ ಕತೆಯನ್ನು ಬರೆಯುವಾಗ ರಮ್ಯಳನ್ನೇ ಮನಸ್ಸಿನಲ್ಲಿಟ್ಟುಕೊಂಡು ಬರೆಯುವ ಸ್ಥಿತಿ ಈಗ ಸೃಷ್ಟಿಯಾಗಿದೆ. ಆದರೆ ಗಾಂಧಿನಗರದ ಅನೇಕರಿಗೆ ಗಗನಕುಸುಮವಾಗಿರುವ ರಮ್ಯಾ ತನ್ನ ಸಂಭಾವನೆಯನ್ನು 23 ಲಕ್ಷಕ್ಕೆ ಏರಿಸಿದ್ದಾಳೆ. ಇದು ಹೀಗೇ ಮುಂದುವರೆದರೆ, ಸದ್ಯದಲ್ಲೇ ಆಕೆ ಕಾಲು ಕೋಟಿ ಕೇಳಿದರೂ ಅಚ್ಚರಿಯಿಲ್ಲ ಎಂದು ಗಾಂಧಿನಗರದವರು ಗೊಣಗಾಡುತ್ತಿದ್ದಾರೆ.

ರೌಡಿಸಂಗೆ ಯಾಕೆ ಜನಿವಾರ?



'ಪೂಜಾರಿ' ಆದಿ ಲೋಕೇಶ್



ಮೇಲುಜಾತಿಗಳ ಧಿಮಾಕು ಹೇಗೆ ನಮ್ಮ ಚಿತ್ರರಂಗದಲ್ಲೂ ವ್ಯಕ್ತವಾಗುತ್ತಿದೆ ಎಂಬುದಕ್ಕೆ ಇತ್ತೀಚೆಗೆ ಬಿಡುಗಡೆಯಾಗಿರುವ 'ಪೂಜಾರಿ' ಎಂಬ ಸಿನಿಮಾ ಒಂದು ಉದಾಹರಣೆ. ಈಗಾಗಲೇ ತೋಪಾಗುವ ದಾರಿ ಹಿಡಿದಿರುವ ಈ ಚಿತ್ರದ ಸಾರಾಂಶ ಬ್ರಾಹ್ಮಣನೊಬ್ಬ ರೊಚ್ಚಿಗೆದ್ದರೆ ಆತ ಹೇಗೆ ಮಚ್ಚು ಲಾಂಗು ಹಿಡಿದು ತನ್ನ ಸೇಡು ತೀರಿಸಿಕೊಳ್ಳುತ್ತಾನೆ ಎಂಬುದಾಗಿದೆ. ಅದರರ್ಥ ಉನ್ನತ ಜಾತಿಯವರನ್ನು ಕೆಣಕಿದರೆ, ಕಡೆಗಣಿಸಿದರೆ ಈ ಸಮಾಜಕ್ಕೆ ಅನಿಷ್ಟ ಕಾದಿದೆ ಎಂಬುದೇ ಆಗಿದೆ.

ಈ ಸಂದೇಶವನ್ನು ಸಾರುವ ಚಿತ್ರ ಇದೊಂದೇ ಆಗಿದ್ದರೆ ಸುಮ್ಮನಿರಬಹುದಿತ್ತು. ಆದರೆ ಕಳೆದ ವರ್ಷ ಬಿಡುಗಡೆಯಾದ, ದರ್ಶನ್ ಅಭಿನಯದ 'ಶಾಸ್ತ್ರಿ' ಎಂಬ ಚಿತ್ರದ ಕಥಾ ಸಾರಾಂಶವೂ ಇದೇ ಆಗಿತ್ತು. ಅಷ್ಟೇ ಅಲ್ಲ, ಸುಮಾರು ಒಂದು ದಶಕದ ಹಿಂದೆ ಬಿಡುಗಡೆಯಾದ, ಶಿವರಾಜ್ ಕುಮಾರ್ ಅಭಿನಯದ 'ಓಂ' ಚಿತ್ರ ಕೂಡ ಬ್ರಾಹ್ಮಣನೊಬ್ಬ ನ್ಯಾಯಕ್ಕಾಗಿ ರೌಡಿಸಂಗೆ ಇಳಿಯುವ ಕಥೆಯನ್ನೇ ಹೊಂದಿತ್ತು.



'ಅನ್ನಿಯನ್' ವಿಕ್ರಂ

ಸೋಜಿಗದ ವಿಷಯ ಯಾವುದೆಂದರೆ ನಿಜಜೀವನದಲ್ಲಿ ರೌಡಿಸಂಗೆ ಇಳಿದು ಕರ್ನಾಟಕದಲ್ಲಿ ಕುಖ್ಯಾತಿ ಪಡೆದವರ ಸಾಲಿನಲ್ಲಿ ಒಬ್ಬನೇ ಒಬ್ಬ ಬ್ರಾಹ್ಮಣ ಸಿಗುವುದಿಲ್ಲ. ಹಾಗೆ ಹೊಡೆದು, ಬಡಿದು, ರಕ್ತ ಹರಿಸಿ, ಜೈಲು ಕಂಡವರಲ್ಲಿ ಹೆಚ್ಚಾಗಿ ಹಿಂದುಳಿದ ವರ್ಗದವರೇ ಇದ್ದಾರೆ. ಉದಾಹರಣೆಗೆ ಜೈರಾಜ್ (ಬೆಸ್ತ), ಶ್ರೀರಾಂಪುರ ಕಿಟ್ಟಿ ಮತ್ತು ಕೊತ್ವಾಲ್ (ಮರಾಠಿ), ಜೇಡರಹಳ್ಳಿ ಕೃಷ್ಣಪ್ಪ, ಬಲರಾಮ, ಮುಲಾಮ ಮತ್ತು ಮಚ್ಚ (ಒಕ್ಕಲಿಗರು).... ಹೀಗೆ ಈ ಪಟ್ಟಿ ಸಾಗುತ್ತದೆ.

ಇದು ಕನ್ನಡ ಚಿತ್ರರಂಗದಲ್ಲಿ ಮಾತ್ರ ವ್ಯಕ್ತವಾಗಿರುವ ಸಂಗತಿಯಲ್ಲ. ಪಕ್ಕದ ತಮಿಳುನಾಡಿನಲ್ಲಿ ಶಂಕರ್ ಎಂಬ ನಿರ್ದೇಶಕನೂ ತನ್ನ ಚಿತ್ರಗಳಲ್ಲಿ "ಉನ್ನತ ಜಾತಿಗಳನ್ನು ಕೆಣಕಿದರೆ ಜೋಕೆ" ಎಂದೇ ಎಚ್ಚರಿಕೆ ನೀಡಿದ್ದಾನೆ. ಉದಾಹರಣೆಗೆ ಆತ ನಿರ್ದೇಶಿಸಿ, ತುಂಬಾ ಯಶಸ್ಸು ಕಂಡ 'ಜಂಟಲ್‌ಮ್ಯಾನ್' ಎಂಬ ಚಿತ್ರದ ಸಂದೇಶ ಮೀಸಲಾತಿಯಿಂದಾಗಿ ಮೇಲುಜಾತಿಯವರಿಗೆ ಅನ್ಯಾಯವಾಗುತ್ತಿದೆ ಎಂಬುದಾಗಿದ್ದರೆ, ಇತ್ತೀಚೆಗೆ ಬಿಡುಗಡೆಯಾದ 'ಅನ್ನಿಯನ್' (ವಿಕ್ರಮ್ ಹೀರೋ) ಚಿತ್ರದಲ್ಲೂ ಅಯ್ಯಂಗಾರಿ ಒಬ್ಬ ಬಹಳ ಶಿಸ್ತಿನ ಮನುಷ್ಯನಾಗಿದ್ದು ಆತ ಅನುಭವಿಸುವ ಅನ್ಯಾಯದಿಂದಾಗಿ ಸೇಡು ತೀ[...] ಕೊಳ್ಳುತ್ತಾನೆ ಎಂಬ ಕತೆಯನ್ನೇ ಹೇಳಲಾಗಿತ್ತು.

ಕನ್ನಡ ಚಿತ್ರರಂಗಕ್ಕೆ ಸೀಮಿತವಾಗಿ ನೋಡುವುದಾದ[...] ಯಾಕೆ ಇಲ್ಲಿನ ನಿರ್ದೇಶಕರಿಗೆ ಅಲ್ಪಸಂಖ್ಯಾತರಾದ ಬ್ರಾಹ್ಮಣ[...] ಅನ್ಯಾಯದ ವಿರುದ್ಧ ಹೋರಾಡುವ 'ಧೀರ' ರೌಡಿಗಳ[...] ಕಂಡುಬರುತ್ತಾರೆ ಎಂಬುದೇ ಕುತೂಹಲಕಾರಿಯಾಗಿದೆ.

ವಾಸ್ತವಕ್ಕೂ, ಸಿನಿಮಾಗಳಿಗೂ ಅಷ್ಟೇನೂ ಸಂಬಂಧ [...] ಎನ್ನುವುದು ನಿಜವಾದರೂ ಯಾಕೆ ನಮ್ಮ ನಿರ್ದೇಶಕ[...] ಜನಿವಾರಿಧಾರಿಗಳೇ ಅನ್ಯಾಯದ ವಿರುದ್ಧ ಮಚ್ಚು ಲಾಂ[...] ಹಿಡಿದು ಹೋರಾಡುವ 'ವೀರ'ರಂತೆ ಕಾಣುತ್ತಾರೆ? ಯ[...] ನಮ್ಮ ಸಮಾಜದಲ್ಲಿ ಇವತ್ತಿಗೂ ಹಿಂದುಳಿದವರ, ದಲಿ[...] ಮೇಲೆ ಅಮಾನುಷ ದೌರ್ಜನ್ಯಗ[...] ನಡೆಯುತ್ತಿದ್ದರೂ ಅವರನ್ನೆಲ್ಲ ನ[...] ನಿರ್ದೇಶಕರಿಗೆ 'ಸಿಡಿದೇಳುವ' ಹೀರ[...] ಗಳಂತೆ (ಸಿನಿಮಾದಲ್ಲಾದರೂ!) ಬಿಂ[...] ಲಾಗುತ್ತಿಲ್ಲ?

ಇನ್ನೊಂದು ಸೋಜಿಗದ ಅ[...] ಯಾವುದೆಂದರೆ, ಯಾವುದೇ ಹೋರ[...] ನಡೆದಾಗ ಅದಕ್ಕೆ ಕುಮ್ಮಕ್ಕು ನೀಡಿ ಹಿಂ[...] ಉಳಿಯುವವರು ಮೇಲುಜಾತಿಯವ[...] ಆದರೆ ಆ ಹೋರಾಟಗಳಲ್ಲಿ ಮುಂ[...] ನಿಂತು ಪೊಲೀಸರ ಲಾಠಿಗೆ, ಗುಂಡೇ[...] ಬಲಿಯಾಗುವುದು ಶೂದ್ರರು. [...] ಕರ್ನಾಟಕದಲ್ಲಿ ಮಾತ್ರವಲ್ಲ, ದೇ[...] ಹಲವಾರು ಕಡೆ ಸಾಬೀತಾಗಿರುವ ಅಂ[...] ಅಂದರೆ, ಯಾವತ್ತೂ ಮೇಲುಜಾ[...] ಯವರು ಮುಂದೆ ಬಂದು ತ[...] ಎದೆಯನ್ನು ಒಡ್ಡಿ ಹೋರಾಡಿದವರಲ್ಲ. ಹೀಗಿದ್ದರೂ ನ[...] ಸಿನಿಮಾಗಳಲ್ಲಿ ಮಾತ್ರ ಯಾಕೆ ನಮ್ಮ ಶೂದ್ರ ಜಾತಿಗೆ ಸೇರಿದ[...] ನಟರು ಜನಿವಾರ ತೊಟ್ಟು, ಬ್ರಾಹ್ಮಣರ ಕಲ್ಪಿತ ದಂಗೆಯ[...] ಪ್ರತಿನಿಧಿಸಬೇಕು? ಯಾಕೆ ವಾಸ್ತವದಲ್ಲಿಲ್ಲದ ಪುರೋಹಿ[...] ಶಾಹಿಗಳ ಶೌರ್ಯ ಮತ್ತು ಬಲಿದಾನ ಬೆಳ್ಳಿ ಪರದೆ[...] ಮೇಲೆ ರಾರಾಜಿಸಬೇಕು?

ಈ ಪ್ರಶ್ನೆಗಳಿಗೆಲ್ಲ ಉತ್ತರವಿದೆ. ಅದೇನೆಂದರೆ ಸಿನಿ[...] ದಂತಹ ಅಪಾರ ಪ್ರಭಾವ ಬೀರುವ ಮಾಧ್ಯಮದ ಮೂ[...] ಮೇಲುಜಾತಿಗಳ ಪರ ವಾದಿಸುವ, ಅವರನ್ನು ವೈಭವೀಕರಿಸ[...] ಹುನ್ನಾರ ನಡೆದಿದೆ.

ಇಲ್ಲವಾದರೆ, ರೌಡಿಸಂಗೂ ಏಕೆ ಬೇಳುತ್ತಿತ್ತು ಜನಿವಾರ[...]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore